# ಯುಗರಶ್ಮಿ

★ ಯೇಸು ವಿವಾಹಿತರಾಗಿದ್ದರೇ?

★ ಪ್ರತಾಸುಪ್ತಾನ

★ ಇಸ್ಲಾಂ ಮತ್ತು ಸಾಮಾಜಿಕ ನ್ಯಾಯ

★ ಪ್ರೊಫೆಸರ್ ಅಬ್ದುಸ್ ಸಲಾಮ್


ತ್ರೈಮಾಸಿಕ

ಆಗಸ್ಟ್ 1982

ಬೆಲೆ: ರೂ. 1-00


ನಿಮಗಿಂತ ಮುಂಚೆ ಎಷ್ಟೋ ಮಂದಿ ಪ್ರವಾದಿಗಳು ಗತಿಸಿದ್ದಾರೆ. ನೀವು ಭೂಮಿಯಲ್ಲಿ ಸಂಚರಿಸಿ, ಅವರನ್ನು ನಿರಾಕರಿಸಿದವರ ಅಂತ್ಯ ಏನಾಗಿತ್ತೆಂದು ನೋಡಿರಿ.

—ಪವಿತ್ರ ಖುರ್‌ಆನ್ [3 : 138]

# ಯುಗರಶ್ಮಿ ತ್ರೈಮಾಸಿಕ

10-23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಸಂಪುಟ: 8 ಜುಲಾಯಿ-ಆಗಸ್ಟ್ 1982/ವಫಾ-ಜುಹೂರ್ 1361 ಸಂಚಿಕೆ: 1

ಬಿಡಿಪ್ರತಿ: ರೂ. 1-00 ವಾರ್ಷಿಕ ಚಂದಾ: ರೂ. 4-00


**ವಿಷಯ ಸೂಚಿಕೆ:** ಪುಟ


* ಯುಗರಶ್ಮಿಯ ಎಂಟನೆ ವರ್ಷ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಯುಗಪ್ರಭೆ ... 2
* ಅಹ್ಮದಿಯಾ ತೃತೀಯ ಖಲೀಫ ದಿವಂಗತರಾದರು ... I
* ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಚತುರ್ಥ ಖಲೀಫ ... I
* ಒಂದು ಮಹತ್ವಪೂರ್ಣ ಸಂದೇಶ ... II
* ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ನಮ್ಮಿಂದ ಅಗಲಿ ಹೋದರು III
* ಯೇಸು ವಿವಾಹಿತರಾಗಿದ್ದರೇ ? ... 3
* ವ್ರತಾನುಷ್ಠಾನ ... 8
* ಇಸ್ಲಾಮ್ ಮತ್ತು ಸಾಮಾಜಿಕ ನ್ಯಾಯ ... 12
* ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು ... 19
* ಪುಸ್ತಕ ವಿಭಾಗ — ಅಬ್ದುಸ್ ಸಲಾಮ್



## AHMADIYYA URDU LITERATURE

1. Akaide Ahmadiyyath
2. Khathamunnabiyyeen
3. Zuroorathe Mazhab
4. Wafathe Masih Par Ulamaye Misr Ka Fatwe
5. Hazrath Masih Mashrik Mein

**WILL BE SENT FREE**

Apply with 25 Paise Stamp for each book to:

Book Secretary Ahmadiyya Muslim Mission
10-23/1008, Ansari Road, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ:
ಮುಹಮ್ಮದ್ ಯೂಸುಫ್

ಸಂಪುಟ: 8 | ಜುಲಾಯಿ–ಆಗಸ್ಟ್ 1982 / ವಫಾ–ಜುಹೂರ್ 1361 | ಸಂಚಿಕೆ: 1


## ಯುಗರಶ್ಮಿಯು ಎಂಟನೆ ವರ್ಷ

ಈ ಸಂಚಿಕೆಯೊಂದಿಗೆ ಯುಗರಶ್ಮಿ ಎಂಟನೆ ವರ್ಷಕ್ಕೆ ಪದಾರ್ಪಣೆ ಮಾಡಿರುತ್ತದೆ. ಅಲ್ಲಾಹನಿಗೆ ಸರ್ವ ಸ್ತುತಿಗಳು. ಈ ಶುಭ ಸಂದರ್ಭದಲ್ಲಿ ನಾವು ನಮ್ಮ ವಾಚಕರಿಗೂ ಹಿತೈಷಿಗಳಿಗೂ ಶುಭಾಶಯವನ್ನು ಹಾರೈಸುತ್ತೇವೆ.

ಅಹ್ಮದಿಯಾ ಜಮಾಅತಿನ ತೃತೀಯ ಖಲೀಫರಾದ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು, 17 ವರ್ಷಗಳ ಕಾಲ ಜಮಾಅತಿನ ನಾಯಕತ್ವವನ್ನು ಬಹಳ ಯಶಸ್ವಿಯಾಗಿ ನಿರ್ವಹಿಸಿ, ಈ ವರ್ಷ ಜೂನ್ ತಿಂಗಳ ಆದಿಯಲ್ಲಿ ಇಹಲೋಕವನ್ನು ತ್ಯಜಿಸಿದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್". ಚತುರ್ಥ ಖಲೀಫರಾಗಿ ಚುನಾಯಿತರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರಿಗೆ ಅಹ್ಮದಿಯಾ ಜನಕೋಟಿ ನಿಷ್ಠೆಯನ್ನು ಸಲ್ಲಿಸಿ ಹೊಸ ಸ್ಫೂರ್ತಿಯಿಂದಲೂ ಹೊಸ ಉತ್ಸಾಹದಿಂದಲೂ ಮುನ್ನಡೆಯುತ್ತಿದೆ. 700 ವರ್ಷಗಳ ಬಳಿಕ ಇಸ್ಲಾಮಿನ ಪುನರುತ್ಥಾನದ ಸಂಕೇತವಾಗಿ ಸ್ಪೆಯಿನಿನಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಹೊಸದಾಗಿ ನಿರ್ಮಿಸಲ್ಪಟ್ಟ "ಮಸ್ಜಿದ್ ಬಶಾರತ್" ಸಪ್ಟೆಂಬರ್ ತಿಂಗಳ ಆದಿಯಲ್ಲಿ ಅಹ್ಮದಿಯಾ ಖಲೀಫರಿಂದ ಉದ್ಘಾಟಿಸಲ್ಪಡುವುದು. ಇದು ಲೋಕದಾದ್ಯಂತವಿರುವ ಅಹ್ಮದಿಯರಿಗೆ ಅತ್ಯಂತ ಸಂತೋಷದಾಯಕ ಸಂಗತಿಯಾಗಿದೆ.

ಇತ್ತೀಚೆಗೆ ಮುಸ್ಲಿಮರ ವಿರುದ್ಧ ಇಸ್ರಾಯೆಲ್ ತೋರಿಸಿದ ದೌರ್ಜನ್ಯ ಅತ್ಯಂತ ಹೇಯಕರವಾಗಿದೆ. ನಾಲ್ಕು ದಶಕಗಳಷ್ಟು ಮುಸ್ಲಿಂ ರಾಷ್ಟ್ರಗಳಿದ್ದರೂ 100 ಕೋಟಿಗಳಷ್ಟು ಮುಸ್ಲಿಮರಿದ್ದರೂ ಒಂದೂವರೆ ಕೋಟಿಗಿಂತಲೂ ಕಮ್ಮಿ ಜನಸಂಖ್ಯೆಯುಳ್ಳ ಪುಟ್ಟ ರಾಷ್ಟ್ರವೊಂದು ಅತ್ಯಂತ ಧಾರ್ಷ್ಟ್ಯತೆಯನ್ನು ಪ್ರದರ್ಶಿಸಿದೆ. ಬೃಹತ್ ರಾಷ್ಟ್ರಗಳ ಕೈಗೊಂಬೆಗಳಂತಿರುವ ಮುಸ್ಲಿಂ ರಾಷ್ಟ್ರಗಳು ಮಿಸುಕಾಡಲಾರದಷ್ಟು ನಿರ್ಬಲಗೊಂಡಿವೆ. ಇಸ್ಲಾಮಿನ ಸದಾಚಾರವೇ ಅವರಲ್ಲಿ ನಾಸ್ತಿಯಾದಂತೆ ಭಾಸವಾಗುತ್ತದೆ. ಇದಕ್ಕೆ ಪರಿಹಾರವನ್ನು ಅಲ್ಲಾಹನೇ ಮಾಡಬೇಕಾಗಿದೆ. ಮುಸ್ಲಿಂ ರಾಷ್ಟ್ರಗಳು ಬೃಹತ್ ರಾಷ್ಟ್ರಗಳ ಹಿಡಿತದಿಂದ ತಪ್ಪಿಸಿಕೊಂಡು ಸ್ವಂತ ಕಾಲುಗಳಲ್ಲಿ ನಿಲ್ಲಲು ಕಲಿತು, ಸಹಾಯಕ್ಕಾಗಿ ಸರ್ವಶಕ್ತನ ಮೊರೆಹೋಗಬೇಕಾಗಿದೆ. ಮುಸ್ಲಿಂ ವಿರೋಧಿಗಳನ್ನು ಎದುರಿಸಲು ಸಣ್ಣ ಅಹ್ಮದಿಯಾ ಜಮಾಅತಿನ ವಶದಲ್ಲಿ ಅಸ್ತ್ರವೇನೂ ಇಲ್ಲ. ಆದರೆ ಅವರಲ್ಲಿ ಪ್ರಾರ್ಥನೆಯೆಂಬ ಆಯುಧವೊಂದಿದೆ. ಅದನ್ನು ಪ್ರಯೋಗಿಸಲು ಅಹ್ಮದಿಯಾ ಜಮಾಅತಿನ ಈಗಿನ ಖಲೀಫರು ಅತ್ಯಂತ ಕಳಕಳಿಯಿಂದ ಅಹ್ಮದಿಯರನ್ನು ಬಿನ್ನವಿಸಿದ್ದಾರೆ. ತಮ್ಮ ನಾಯಕನ ಕರೆಗೆ ಓಗೊಡುತ್ತಾ, ಅಹ್ಮದಿಯರೆಲ್ಲರೂ ಅತ್ಯಂತ ವಿನೀತರಾಗಿ ಸರ್ವಶಕ್ತನಾದ ಅಲ್ಲಾಹನೊಡನೆ, ಮುಸ್ಲಿಮರಿಗೆ ಯಶಸ್ಸು ಸಿದ್ಧಿಸಲಿಯೆಂದು ಪ್ರಾರ್ಥಿಸುತ್ತಾರೆ. ಅಲ್ಲಾಹು ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಲಿ.

— ಸಂಪಾದಕ.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ಜ್ಞಾನ ಸಂಪಾದನೆ ಮತ್ತು ಸಂಶೋಧನೆ

1. ವಿದ್ಯಾರ್ಜನೆ ಪ್ರತಿಯೊಬ್ಬ ಮುಸ್ಲಿಮನಿಗೆ ನಿರ್ಬಂಧವಾಗಿದೆ.

2. ಜ್ಞಾನಾರ್ಜನೆ ಆರಾಧನೆಗಿಂತ ಮಿಗಿಲಾಗಿದೆ.

3. ಅಲ್ಪ ಜ್ಞಾನ ಸಂಪಾದನೆ ಅಧಿಕ ಆರಾಧನೆ ಗಿಂತ ಉತ್ತಮ.

4. ವಿದ್ಯಾರ್ಜನೆ ಮಾಡಿರಿ. ಜ್ಞಾನಾರ್ಜನೆಗಾಗಿ ಗೌರವ ಮತ್ತು ಮನಃಶ್ಶಾಂತಿಯನ್ನು ಗಳಿಸಿರಿ. ಶಿಕ್ಷಕನಿಗೆ ವಿನಯವನ್ನೂ ಗೌರವವನ್ನೂ ತೋರಿಸಿರಿ.

5. ನೀವು ಯಾರಿಂದ ವಿದ್ಯಾರ್ಜನೆ ಮಾಡುತ್ತೀರೋ ಅವರನ್ನು ಗೌರವಿಸಿರಿ.

6. ಜನರಿಗೆ ಶಿಕ್ಷಣ ಕೊಡಿರಿ. ಅವರೊಡನೆ ಒರಟಾಗಿ ವರ್ತಿಸಬೇಡಿರಿ. ಒಬ್ಬ ಶಿಕ್ಷಕ ಕಟ್ಟುನಿಟ್ಟಿನ ಸೇನಾಧಿಪತಿಗಿಂತ ಉತ್ತಮನು.

7. ಜ್ಞಾನ ಸಂಪಾದನೆಗಾಗಿ ಶ್ರಮಿಸುವವನು ಅತ್ಯಂತ ಅತೃಪ್ತನು; ಅದಕ್ಕಾಗಿ ಶ್ರಮಿಸದವನು ತೃಪ್ತನು.

8. ಹಸಿದ ಇಬ್ಬರು ಎಂದಿಗೂ ತೃಪ್ತರಾಗಲಿಕ್ಕಿಲ್ಲ—ಜ್ಞಾನ ಸಂಪಾದನೆಗಾಗಿ ಆತುರ ತೋರುವವನೂ ಐಹಿಕ ಸುಖವನ್ನು ಹುಡುಕುವವನೂ.

9. ಒಬ್ಬ ಮುಸ್ಲಿಮನಿಂದಿರುವ ಉತ್ತಮ ದಾನ ಜ್ಞಾನ ಸಂಪಾದನೆ ಮತ್ತು ಜ್ಞಾನದಾನವೇ ಆಗಿದೆ.

10. ಜ್ಞಾನ ಪ್ರಸಾರಕ್ಕಿಂತ ಉತ್ತಮವಾದ ದಾನ ಬೇರೊಂದಿಲ್ಲ.

**(ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ಬರೆದ Wisdom of the Holy Prophet ಎಂಬ ಪುಸ್ತಕದಿಂದ ಆಯ್ದುದು)**

---

# ಯುಗಪ್ರಭೆ


"ನಾನು ಈ ಅಂಧಕಾರ ಯುಗದ ಬೆಳಕಾಗಿದ್ದೇನೆ. ನನ್ನನ್ನು ಹಿಂಬಾಲಿಸಿದವರು, ಕತ್ತಲೆಯಲ್ಲಿ ನಡೆಯುವವರಿಗೆ ಸೈತಾನ ತೋಡಿಟ್ಟ ಹೊಂಡದಲ್ಲಿ ಬೀಳುವುದರಿಂದ ರಕ್ಷಿಸಲ್ಪಡುವರು. ಸಮಾಧಾನ ಹಾಗೂ ವಿನಯದ ಮಾರ್ಗದಲ್ಲಿ ಸತ್ಯದೇವನೆಡೆಗೆ ಜನರನ್ನು ನಡೆಸಿಕೊಂಡು ಹೋಗಲಿಕ್ಕಾಗಿಯೂ ಇಸ್ಲಾಮಿಕ ಸದಾಚಾರದ ಕೀರ್ತಿಯನ್ನು ಪುನರುತ್ಥಾನಗೊಳಿಸಲಿಕ್ಕಾಗಿಯೂ ನಾನು ದೇವನಿಂದ ನಿಯುಕ್ತನಾಗಿರುವೆನು. ಸತ್ಯಾನ್ವೇಷಿಗಳ ಸಂತೃಪ್ತಿಗಾಗಿ ಅವನು ನನಗೋಸ್ಕರ ದಿವ್ಯ ಕುರುಹುಗಳನ್ನು ಪ್ರಕಟಗೊಳಿಸಿದನು. ನನ್ನ ಸತ್ಯತೆಗೆ ಅವನು ಹಲವು ಅದ್ಭುತಗಳನ್ನು ತೋರಿಸಿದನು. ಅದೃಶ್ಯ ರಹಸ್ಯಗಳನ್ನೂ ಭವಿಷ್ಯದ್ಕಾರ್ಯಗಳನ್ನೂ ಅವನು ನನಗೆ ಬಹಿರಂಗಪಡಿಸಿದನು. ಪವಿತ್ರ ಗ್ರಂಥಗಳ ಪ್ರಕಾರ ಒಬ್ಬ ಸತ್ಯದೈವದೂತವಾದಿಯ ಲಕ್ಷಣ ಇದೇ ಆಗಿದೆ. ಅವನು ನನಗೆ ಪಾವನವೂ ಪರಿಶುದ್ಧವೂ ಆದ ಜ್ಞಾನವನ್ನು ದಯಪಾಲಿಸಿರುವನು. ಒಟ್ಟಿನಲ್ಲಿ, ಸತ್ಯವನ್ನು ವಿರೋಧಿಸಿ ಅಂಧಕಾರವನ್ನು ಪ್ರೀತಿಸುವ ಆತ್ಮಗಳು ನನ್ನ ವಿರುದ್ಧ ತಿರುಗಿವೆ. ಆದರೆ, ನನ್ನ ಕೈಲಾದಷ್ಟರ ಮಟ್ಟಿಗೆ ಮನುಷ್ಯ ವರ್ಗದೊಡನೆ ಸಹತಾಪದಿಂದ ವರ್ತಿಸಲು ನಾನು ಬದ್ಧನಾಗಿದ್ದೇನೆ."

(ಮಸೀಹ್ ಹಿಂದುಸ್ತಾನ್ ಮೆ)

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಅಹ್ಮದಿಯಾ ತೃತೀಯ ಖಲೀಫ ದಿವಂಗತರಾದರು



ಅಹ್ಮದಿಯಾ ಜಮಾಅತಿನ ಇಮಾಂ ಹಾಗೂ ತೃತೀಯ ಖಲೀಫರಾದ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು 1982 ಜೂನ್ 8-9 ರ ಮಧ್ಯ ರಾತ್ರಿ ಇಸ್ಲಾಮಾಬಾದಿನಲ್ಲಿ ತನ್ನ 73ನೇ ವಯಸ್ಸಿನಲ್ಲಿ ನಿಧನರಾದರು.

"ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್" — ಖಂಡಿತವಾಗಿಯೂ ನಾವು ಅಲ್ಲಾಹನ ಅಧೀನರು; ಅವನ ಬಳಿಗೆಯೇ ನಾವು ಹಿಂತೆರಳುವೆವು.

---

# ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್

## — ಚತುರ್ಥ ಖಲೀಫ —



1982 ಜೂನ್ 10ರಂದು ಅಪರಾಹ್ನ ಜಾಗತಿಕ ಅಹ್ಮದಿಯಾ ಕೇಂದ್ರವಾದ ರಬ್ವಾದಲ್ಲಿ ಇಸ್ಲಾಮಿಕ ನಿಯಮಾನುಸಾರ, ದಿವಂಗತರಾದ ತೃತೀಯ ಖಲೀಫತುಲ್ ಮಸೀಹರ ಜನಾಝಾ ಪ್ರಾರ್ಥನೆಗೆ ಮುಂಚಿತವಾಗಿ, ಚತುರ್ಥ ಖಲೀಫತುಲ್ ಮಸೀಹಾಗಿ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಚುನಾಯಿತರಾದರು.

ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಅಹ್ಮದ್ ರವರ ಪೌತ್ರ ಹಾಗೂ ತೃತೀಯ ಖಲೀಫರ ಸಹೋದರರಾಗಿದ್ದಾರೆ.

ಅಹ್ಮದಿಯಾ ಜಮಾಅತಿನ ಲೋಕೈಕ ನಾಯಕರ

# ಒಂದು ಮಹತ್ವಪೂರ್ಣ ಸಂದೇಶ

**ಬಿಸ್ಮಿಲ್ಲಾ ಹಿರ್ರಹ್ಮಾನಿರ್ರಹೀಂ**

**ನಹ್ಮದುಹೂ ವ ನುಸಲ್ಲೀ ಅಲಾ ರಸೂಲಿಹಿಲ್ ಕರೀಂ ವ ಅಲಾ ಅಬ್ದಿಹಿಲ್ ಮುಸೀಹಿಲ್ ಮೌಊದ್**

**ಖುದಾ ಕೆ ಫಜ್ಲ್ ಔರ್ ರಹಮ್ ಕೆ ಸಾಥ್ ಹೂವನ್ನಾಸಿರ್**

ಪ್ರಿಯ ಜಮಾಅತಿನ ಸ್ನೇಹಿತರೆ, **ಅಸ್ಸಲಾಮು ಅಲೈಕುಂ**

ತೀವ್ರವಾಗಿ ಘಾಸಿಗೊಂಡ ನಮ್ಮ ಹೃದಯದ ಗಾಯಗಳಲ್ಲಿ ಒಂದು ಗಾಯ ದಿನಗಳೆದಂತೆ ಹೆಚ್ಚು ಭಯಾನಕವೂ ಹೆಚ್ಚು ಆಳವೂ ಹೆಚ್ಚು ಹೆಚ್ಚು ವೇದನಾಜನಕವೂ ಆಗುತ್ತಾ ಇದ್ದು ನಮ್ಮ ಹೃದಯಗಳಿಂದ ಪ್ರತಿಕ್ಷಣದಲ್ಲಿಯೂ ದುಃಖವು ಉಮ್ಮಳಿಸುತ್ತಾ ಇದೆ. ನನ್ನ ಉದ್ದೇಶ ಇಸ್ರಾಯೆಲ್‌ನ ಆ ಅತ್ಯಂತ ಭಯಾನಕ ಹಾಗೂ ಮೃಗೀಯವಾದ ದೌರ್ಜನ್ಯಗಳಾಗಿವೆ – ಅವರು ಜಗತ್ತಿನ ಮುಸ್ಲಿಮರ ವಿರುದ್ಧ ನಿರ್ದಯತೆಯಿಂದಲೂ ಕಠೋರತೆಯಿಂದಲೂ ಕೈಗೊಂಡ ಆಕ್ರಮಣಗಳು. ಹಜ್ರತ್ ಖಲೀಫತುಲ್ ಮಸೀಹ್ III ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಅದರ ಅತ್ಯಧಿಕ ದುಃಖ ಅನುಭವಿಸುತ್ತಾ ಇದ್ದರು. ಅದರ ಕುರಿತು ಪ್ರಸ್ತಾಪಿಸುವಾಗ ಅವರ ಕಣ್ಣುಗಳು ವೇದನೆಯ ಜೀವಂತ ನಿದರ್ಶನಗಳಾಗುತ್ತಿದ್ದುವು.

ಬಾಹ್ಯವಾಗಿ ನೋಡಿದರೆ ನಾವು ಬಲಹೀನವಾದ ಒಂದು ಚಿಕ್ಕ ಜಮಾಅತ್. ಲೋಕದ ದೃಷ್ಟಿಯಲ್ಲಿ ನಾವು ಗಮನಾರ್ಹರೂ ಅಲ್ಲ. ಆದರೆ ಅಲ್ಲಾಹನ ಅತ್ಯಂತ ವಿನೀತ ದಾಸರಾದ ನಮ್ಮನ್ನು ಅವನು ತನ್ನ ಅನುಗ್ರಹಗಳ ಮತ್ತು ವರದಾನಗಳ ಕೃಪೆಗೆ ಪಾತ್ರರನ್ನಾಗಿ ಮಾಡಿರುವನೆಂದೂ ಅವನ ಸನ್ನಿಧಿಯಲ್ಲಿ ನಾವು ಅಳುತ್ತಾ ಪ್ರಾರ್ಥಿಸಿದಾಗ ನಮ್ಮ ಸಂಕಟಗಳಿಗೆ ಅವನು ಪರಿಹಾರವನ್ನು ಮಾಡಿರುವನೆಂದೂ ನನಗೂ ನಿಮಗೂ ಗೊತ್ತಿದೆ. ನಾನು ಜಮಾಅತಿನ ಸ್ತ್ರೀ ಪುರುಷ, ಆಬಾಲವೃದ್ಧ ಎಲ್ಲರೊಂದಿಗೂ ಅಪೇಕ್ಷಿಸುವುದೇನೆಂದರೆ, ನೀವೆಲ್ಲರೂ ಸೇರಿ ಅಲ್ಲಾಹನ ಸನ್ನಿಧಿಯಲ್ಲಿ ಆರ್ತನಾದ ಮಾಡುತ್ತಾ ಪ್ರಾರ್ಥಿಸಿರಿ – ನಮ್ಮ ಯಜಮಾನರಾದ ಹಜ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಜೊತೆ ತಮ್ಮ ಸಂಬಂಧವನ್ನು ಸೂಚಿಸುವ ಪ್ರತಿಯೊಬ್ಬ ಮನುಷ್ಯ ಜೀವಿಗೆ ಅವನು ತನ್ನ ಅನುಗ್ರಹದ ಮತ್ತು ಕಾರುಣ್ಯದ ದೃಷ್ಟಿ ಬೀರಲಿ. ನಿಮ್ಮ ಕಣ್ಣೀರಿನಿಂದ ನಿಮ್ಮ ಸಾಷ್ಟಾಂಗ (ಸುಜೂದ್) ಸ್ಥಳಗಳನ್ನು ಒದ್ದೆ ಮಾಡಿರಿ. ಅಲ್ಲಾಹನ ಅನುಗ್ರಹಪಾದಗಳನ್ನು ಚುಂಬಿಸುತ್ತಾ ಪ್ರಾರ್ಥಿಸಿರಿ: ಪರಮ ದಯಾಳುವೂ ಕೃಪಾನಿಧಿಯೂ ಆದ ನಮ್ಮ ಒಡೆಯಾ, ಈ ದುಃಖದಿಂದ ನಮ್ಮ ಹೃದಯಗಳು ಬಿರಿಯುತ್ತಿವೆ. ಮುಹಮ್ಮದ್ ಪೈಗಂಬರರ ಅನುಯಾಯಿಗಳಿಗೆ ನೀನು ದಯೆದೋರಿ ಕ್ಷಮಿಸು. ನಿನ್ನ ಅತ್ಯಂತ ಸ್ನೇಹಕ್ಕೆ ಪಾತ್ರರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಹೆಸರಿನ ಅನುಗ್ರಹದಿಂದ ಅವರ ವಿರೋಧಿಗಳನ್ನು ಅವಮಾನಿತರನ್ನಾಗಿಯೂ ನಿಂದಿತರನ್ನಾಗಿಯೂ ಮಾಡು. ಮುಹಮ್ಮದ್ ಪೈಗಂಬರರ ಅನುಯಾಯಿಗಳಿಗೆ ಇಸ್ಲಾಮಿನ ವಿರೋಧಿಗಳನ್ನು ಎದುರಿಸುವ ಶಕ್ತಿಯನ್ನು ದಯಪಾಲಿಸಿ ಅವರನ್ನು ವಿಜೇತರನ್ನಾಗಿ ಮಾಡು. ಮುಸಲ್ಮಾನರ ವೈರಿಗಳ ಈ ಹೇಯವಾದ ದೌರ್ಜನ್ಯಗಳಿಗೆ ಪ್ರತೀಕಾರ ಮಾಡುವ ಕಾರ್ಯವನ್ನು ನೀನು ಸ್ವತಃ ಕೈಗೊಳ್ಳು; ಅಥವಾ ವೈರಿಗಳ ಪೂರ್ಣ ಮನಃ ಪರಿವರ್ತನೆಯ ಮಹತ್ತಾದ ದೃಷ್ಟಾಂತವನ್ನು ತೋರಿಸು. ಅವರು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಅನುಯಾಯಿಗಳ ರಕ್ತ ಹರಿಸುವ ಬದಲು ತಮ್ಮದೇ ರಕ್ತದಿಂದ ಈ ದೌರ್ಜನ್ಯಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವಂತಾಗಲಿ.

ತಲ್ಲಣಗೊಂಡ ನಮ್ಮ ಹೃದಯದ ಪ್ರಾರ್ಥನೆಗಳನ್ನು ಅಲ್ಲಾಹನು ಸ್ವೀಕರಿಸುವನೆಂದೂ ಬಹಳ ಘಾಸಿಗೊಂಡ ನಮ್ಮ ಹೃದಯಗಳಿಗೆ ಅವನು ಶಾಂತಿ ಮತ್ತು ಸಮಾಧಾನ ನೀಡುವನೆಂದೂ ನನಗೆ ದೃಢ ವಿಶ್ವಾಸವಿದೆ. ಓ ಅಲ್ಲಾಹ್, ನೀನು ಹಾಗೆಯೇ ಮಾಡು. ಬಲಿಯರ್ಪಿಸಲ್ಪಡುವ ಪ್ರಾಣಿಗಳಂತೆ ನಾವು ನಿನ್ನ ಸನ್ನಿಧಿಯಲ್ಲಿ ಇದೋ ಚಡಪಡಿಸುತ್ತಿದ್ದೇವೆ. ವಸ್ಸಲಾಂ

("ಬದರ್" 24-6-1982) **ಮಿರ್ಜಾ ತಾಹಿರ್ ಅಹ್ಮದ್, ಖಲೀಫತುಲ್ ಮಸೀಹ್ IV**

# ಹಜ಼್ರತ್ ಮಿರ್ಜ಼ಾ ನಾಸಿರ್ ಅಹ್ಮದ್ ಸಾಹೇಬ್ ನಮ್ಮಿಂದ ಅಗಲಿ ಹೋದರು

★ ಮೌಲಾನಾ ಶರೀಫ್ ಅಹ್ಮದ್ ಅಮೀನಿ

ನಮಗೆ ಅತ್ಯಂತ ಪ್ರಿಯರಾದ ನಮ್ಮ ಸರ್ವೋನ್ನತ ನೇತಾರ ಹಜ಼್ರತ್ ಖಲೀಫತುಲ್ ಮಸೀಹ್ ಸಾಲಿಸ್ (ಮೂರನೆಯ ಖಲೀಫ) ಜೂನ್ ತಿಂಗಳ ತಾರೀಕು 8 ಮತ್ತು 9ರ ಮಧ್ಯರಾತ್ರೆ ಅಂದಾಜು 12-45 ಗಂಟೆಗೆ ಪಾಕಿಸ್ತಾನದ ಇಸ್ಲಾಮಾಬಾದಿನಲ್ಲಿ ತಮ್ಮ 73ನೇ ವಯಸ್ಸಿನಲ್ಲಿ ನಿಧನ ಹೊಂದಿದರು. "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್". ಪೈಗಂಬರರ ಒಂದು ವಚನದ ಪ್ರಕಾರ ನಮ್ಮ ಹೃದಯ ದುಃಖಭರಿತವಾಗಿದೆ. ನಮ್ಮ ನಯನಗಳು ಅಶ್ರುಧಾರೆ ಸುರಿಸುತ್ತಾ ಇವೆ. ಆದರೆ ನಾವು ದೇವರಿಗೆ ಇಷ್ಟಕರವಾದ ಮಾತುಗಳನ್ನೇ ಆಡಲು ಇಚ್ಛಿಸುತ್ತೇವೆ. ನಾವು ದೇವರ ಇಷ್ಟದಲ್ಲಿ ಸಂತೃಪ್ತಿಯನ್ನು ಸೂಚಿಸಬಯಸುತ್ತೇವೆ.

ನಮ್ಮ ಪ್ರಿಯ ಇಮಾಮರೇ, ನಾವು ನಿಮ್ಮ ಅಗಲುವಿಕೆಯಿಂದ ದುಃಖಭರಿತರಾಗಿರುವೆವು. ಆದರೆ ದೈವೇಚ್ಛೆಯ ಮುಂದೆ ತಲೆ ಬಾಗಿರುವೆವು. ನಮ್ಮ ಅಗಲಿದ ಮಹಾನುಭಾವರೇ, ತಾವು ದೈವ ಸನ್ನಿಧಿಯಲ್ಲಿ ಹಾಜರಾಗಿ ಜನ್ನತುಲ್ ಫಿರ್‌ದೌಸಿನ ಉನ್ನತ ಸ್ಥಾನವನ್ನು ಗಳಿಸುವಂಥವರಾಗಿರಿ. ದೇವರ ಅನುಗ್ರಹದ ಮತ್ತು ವರದಾನಗಳ ಮಳೆ ನಿಮ್ಮ ಮೇಲೆ ಸುರಿಯುವಂತಾಗಲಿ. ದುಃಖಭರಿತ ಸೇವಕರಾದ ನಾವು ನಿಮ್ಮ ಉಪಕಾರಗಳನ್ನು ಸ್ಮರಿಸುತ್ತಾ ತಮಗಾಗಿ ದೇವರ ಸನ್ನಿಧಿಯಲ್ಲಿ ವಿನೀತರಾಗಿ ಪ್ರಾರ್ಥನೆ ಮಾಡುತ್ತಾ ಇರುವೆವು. ದೀನಿನ ಸೇವೆ ಮತ್ತು ಇಸ್ಲಾಮಿನ ಪ್ರಚಾರಕ್ಕಾಗಿ ತಾವು ಬೆಳಗಿಸಿದ ದೀವಟಿಗೆಯನ್ನು ಎಂದೆಂದಿಗೂ ಬೆಳಗುವಂತೆ ನೆಲೆನಿಲ್ಲಿಸಲು ಅಲ್ಲಾಹು ನಮಗೆ ಸಾಧ್ಯ ಮಾಡಿಕೊಡಲಿ. —ಆಮೀನ್.

## ಅನುಗ್ರಹೀತ ಖಿಲಾಫತ್ ಅವಧಿ

ಹಜ಼್ರತ್ ಖಲೀಫತುಲ್ ಮಸೀಹ್ ಸಾಲಿಸ್ 15 ನವೆಂಬರ್ 1909ರಂದು ಜನಿಸಿದರು. ಅವರು ಎರಡನೆಯ ಖಲೀಫ ಹಜ಼್ರತ್ ಮಿರ್ಜ಼ಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರವರ ಪುತ್ರರೂ ಹಜ಼್ರತ್ ಮಸೀಹ್ ಮೌಊದ್ (ಅಹ್ಮದಿಯಾ ಜಮಾಅತಿನ ಸ್ಥಾಪಕ)ರ ಮೊಮ್ಮಗನೂ ಆಗಿದ್ದರು. 8ನೇ ನವೆಂಬರ್ 1965ರಂದು ಎರಡನೆಯ ಖಲೀಫರ ನಿಧನದ ನಂತರ ಮೂರನೆಯ ಖಲೀಫರಾಗಿ ಅವರು ಚುನಾಯಿತರಾದರು.

ಅವರ ಜನನದ ಕುರಿತು ಅಹ್ಮದಿಯಾ ಜಮಾತಿನ ಸ್ಥಾಪಕರು ಭವಿಷ್ಯ ನುಡಿದಿದ್ದರು. ಅವರ ಪಿತರಾದ ಎರಡನೆಯ ಖಲೀಫ ಈ ರೀತಿ ಹೇಳಿದ್ದರು:

"ಇಸ್ಲಾಮಿನ ಸೇವೆಗೆ ಸದಾ ಸನ್ನದ್ಧನಾಗುವ ಒಬ್ಬ ಪುತ್ರನು ನಿನಗೆ ಜನಿಸುವನು ಎಂದು ಅಲ್ಲಾಹನು ನನಗೆ ತಿಳಿಸಿರುವನು".

ಯಹೂದಿಗಳ ಗ್ರಂಥವಾದ ತಾಲ್ಮೂದ್‌ನಲ್ಲಿ ಈ ರೀತಿ ಬರೆಯಲಾಗಿದೆ:

"ವಾಗ್ದಾನ ನೀಡಲ್ಪಟ್ಟ ಮಸೀಹರ ನಂತರ ಅವರ ರಾಜ್ಯಭಾರ ಮೊದಲು ಅವರ ಪುತ್ರನಿಗೆ ಅನಂತರ ಅವರ ಮೊಮ್ಮಗನಿಗೆ ದೊರಕುವುದು".

**(Talmud, Edited by Joseph Berkley, Chapter 5. Page 37 Published in London )**

ತಮ್ಮ ಅನುಗ್ರಹೀತ ಖಿಲಾಫತ್‌ನ ಅವಧಿಯಲ್ಲಿ ಹಜ಼್ರತ್ ಖಲೀಫತುಲ್ ಮಸೀಹ್ ಸಾಲಿಸ್ ಭೂಲೋಕದಾದ್ಯಂತ ಅಹ್ಮದಿಯಾ ಜಮಾಅತನ್ನು ಬಲಿಷ್ಠಗೊಳಿಸಿದರು. ಇಸ್ಲಾಮಿನ ಮತ್ತು ಪವಿತ್ರ ಖುರ್‌ಆನಿನ ಪ್ರಚಾರಕ್ಕಾಗಿ ಹಲವಾರು ನಿರ್ದಿಷ್ಟ ಯೋಜನೆಗಳನ್ನು ಕೈಗೊಂಡರು. ಈ ಎಲ್ಲಾ ಯೋಜನೆಗಳನ್ನು ಯಶಸ್ವಿಗೊಳಿಸಲು ಜಮಾಅತಿನ ಸದಸ್ಯರು ತನು, ಮನ, ಧನದಿಂದ ಪ್ರಯತ್ನಶೀಲರಾದರು. ಇದರ ಸಿಹಿಯಾದ ಪ್ರತಿಫಲ ಹಲವಾರು ರಾಷ್ಟ್ರಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿವೆ. ಉದಾಹರಣೆಗೆ:-

1. ಫಜ಼್ಲೆ ಉಮರ್ ಫೌಂಡೇಶನ್ ಯೋಜನೆ: ಎರಡನೆಯ ಖಲೀಫರು ಪ್ರಾರಂಭಿಸಿದ ಹಲವಾರು ಕಾರ್ಯಕ್ರಮಗಳನ್ನು ಪರಿಪೂರ್ಣಗೊಳಿಸಲು ಇದರ ಮೂಲಕ ಯತ್ನಿಸಲಾಗಿದೆ.

2. ನುಸ್ರತ್ ಜಹಾನ್ ಸ್ಕೀಮ್: ಇದರ ಮೂಲಕ ಪೂರ್ವ ಮತ್ತು ಪಶ್ಚಿಮಾಫ್ರಿಕದ ದೇಶಗಳಲ್ಲಿ ಮೊದಲೇ ಸ್ಥಾಪಿಸಲ್ಪಟ್ಟ ಮಿಶನರಿ ಕೇಂದ್ರಗಳು, ಮಸೀದಿಗಳು, ಮೆಡಿಕಲ್ ಸೆಂಟರ್‌ಗಳು ಮತ್ತು ವಿದ್ಯಾಭ್ಯಾಸ ಸಂಸ್ಥೆಗಳ ಸಂಖ್ಯೆಯನ್ನು ವರ್ಧಿಸಲಾಗಿದೆ. ಘಾನಾ, ಲೈಬೀರಿಯಾ, ಗೇಂಬಿಯಾ ಮತ್ತು ಸಿಯೆರ್ರಾ ಲಿಯೋನ್ ಎಂಬ ಆಫ್ರಿಕನ್ ರಾಜ್ಯಗಳಲ್ಲಿ 17 ಹೊಸ ಮೆಡಿಕಲ್ ಸೆಂಟರ್‌ಗಳನ್ನೂ 15 ಸೆಕಂಡರಿ ಶಾಲೆಗಳನ್ನೂ ಹೊಸದಾಗಿ ತೆರೆಯಲಾಗಿದೆ.

3. ಸದ್‌ಸಾಲ ಜುಬಿಲಿ ಮನ್‌ಸೂಬ (ಶತವಾರ್ಷಿಕ ಯೋಜನೆ): 1973ನೆಯ ಇಸವಿಯ ವಾರ್ಷಿಕ ಸಮ್ಮೇಳನ (ರಬ್ವಾ) ಸಂದರ್ಭದಲ್ಲಿ ಈ ಯೋಜನೆಯನ್ನು ಹುಝೂರ್ ಜಮಾಅತಿನ ಮುಂದಿರಿಸಿದರು. 1989ರಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿಸಿ ಒಂದು ನೂರು ವರ್ಷವಾಗುವುದು. ಆಗ ಶತವಾರ್ಷಿಕೋತ್ಸವವನ್ನು ಆಚರಿಸಲಾಗುವುದು. ಈ ಮಧ್ಯಾವಧಿಯಲ್ಲಿ ಈ ಕೆಳಗಿನ ಕಾರ್ಯಕ್ರಮ ಕೈಗೊಳ್ಳುವುದಾಗಿ ಘೋಷಿಸಿದರು.

- ಪೂರ್ವ ಮತ್ತು ಪಶ್ಚಿಮ ಆಫ್ರಿಕಾ, ಡೆನ್ಮಾರ್ಕ್, ಫ್ರಾನ್ಸ್, ಇಟಲಿ, ನಾರ್ವೆ, ಸ್ವೀಡನ್,ಸ್ಪೈಯಿನ್, ಇಂಗ್ಲೆಂಡ್, ಕೆನಡಾ, ಉತ್ತರ ಮತ್ತು ದಕ್ಷಿಣ ಅಮೇರಿಕಾ ಮೊದಲಾದ ಕಡೆಗಳಲ್ಲಿ ಹೊಸ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸುವುದು. ಪ್ರತಿಯೊಂದು ಪ್ರಚಾರ ಕೇಂದ್ರದಲ್ಲಿ ಮಸೀದಿ ಮತ್ತು ಮತಪ್ರಚಾರ ಕಾರ್ಯಾಲಯ ಇರುವುವು.

- ಪವಿತ್ರ ಖುರ್‌ಆನಿನ ಭಾಷಾಂತರಗಳನ್ನು ರಶ್ಯನ್, ಫ್ರೆಂಚ್, ಚೀನೀ, ಇಟೇಲಿಯನ್, ಯುಗೋಸ್ಲಾವಿಯನ್ ಮತ್ತು ಪಶ್ಚಿಮ ಆಫ್ರಿಕದ ರಾಜ್ಯಗಳಲ್ಲಿ ಸಾರ್ವತ್ರಿಕವಾಗಿ ಪ್ರಚಾರದಲ್ಲಿರುವ ಒಂದು ಭಾಷೆಯಲ್ಲಿ ಮಾಡುವುದು.

- ಇಸ್ಲಾಮ್ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಒಂದು ನೂರು ಭಾಷೆಗಳಲ್ಲಿ ಪ್ರಕಟಿಸುವುದು.

- ಪಾಕಿಸ್ತಾನ ಮತ್ತು ಇತರ ರಾಷ್ಟ್ರಗಳಲ್ಲಿ ಇಸ್ಲಾಮಿಕ ಸಾಹಿತ್ಯಗಳ ಮುದ್ರಣಕ್ಕಾಗಿ ಪ್ರೆಸ್‌ಗಳನ್ನು ಸ್ಥಾಪಿಸುವುದು.

- ಪವಿತ್ರ ಖುರ್‌ಆನಿನ ಪ್ರಚಾರಕ್ಕಾಗಿ ಅನುಮತಿ ದೊರಕುವ ಸ್ಥಳಗಳಲ್ಲಿ ರೇಡಿಯೋ ಸ್ಟೇಷನ್‌ಗಳನ್ನು ಸ್ಥಾಪಿಸುವುದು.

ಈ ಯೋಜನೆಯ ಪ್ರಕಾರ ಕಳೆದ ಒಂಭತ್ತು ವರ್ಷಗಳಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಮುಂದಿನ ಆರು ವರ್ಷಗಳಲ್ಲಿ ಈ ಕಾರ್ಯಗಳೆಲ್ಲಾ ಪೂರ್ತಿಗೊಂಡು ಅಹ್ಮದಿಯಾ ಜಮಾಅತಿನ ಸಂತೋಷ ದ್ವಿಗುಣಿತವಾಗುವುದು. ಆದರೆ ಇವೆಲ್ಲಾ ಅಲ್ಲಾಹುವಿನ ಅನುಗ್ರಹದಿಂದಲೇ ಸಾಧ್ಯ.

## ಮೂರನೆಯ ಖಿಲಾಫತ್ ಕಾಲದ ಮಹತ್ತಾದ ಕಾರ್ಯ

ಇಸ್ಲಾಮ್ ಧರ್ಮ ಸ್ಪೈಯಿನ್ ದೇಶದಿಂದ ಕಣ್ಮರೆಯಾಗಿ ಸುಮಾರು 700 ವರ್ಷಗಳ ನಂತರ ಸ್ಪೈಯಿನ್ ದೇಶದ ಕೊರ್ಡೋವಾ ನಗರದ ಪರಿಸರಕ್ಕೆ ಸೇರಿದ ಪೆದ್ರೋ ಅಬಾದ್‌ನಲ್ಲಿ 9ನೇ ಅಕ್ಟೋಬರ 1980ರಂದು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಒಂದು ಮಸೀದಿಗೆ ಅಸ್ತಿವಾರ ಹಾಕಿದರು. ಈ ಮಸೀದಿ ಕಳೆದ ವರ್ಷವೇ ಪೂರ್ತಿಗೊಂಡಿದೆ. ಇದರ ಉದ್ಘಾಟನೆ 10ನೇ ಸೆಪ್ಟಂಬರ್ 1982ರಂದು ನೆರವೇರುವುದು.

## ಪವಿತ್ರ ಖುರ್‌ಆನಿನ ಪ್ರಚಾರ

ಈ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನಿನ ವಿವಿಧ ಭಾಷಾಂತರಗಳ ಪ್ರಕಟನೆ ಹಿಂದಿನ ಖಿಲಾಫತ್ ಕಾಲಗಳಿಗಿಂತ ಹೆಚ್ಚಾಗಿ ನಡೆದಿದೆ.

## ಕೊನೆಯ ಮಾತು ಮತ್ತು ಪ್ರಾರ್ಥನೆ

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ನಮ್ಮನ್ನು ಅಗಲಿ ಹೋದರು. ಆದರೆ ಅವರು ಅಹ್ಮದಿಯಾ ಜಮಾಅತಿನ ಸದಸ್ಯರಲ್ಲಿ ಇಸ್ಲಾಮಿನ ಮತ್ತು ಪವಿತ್ರ ಖುರ್‌ಆನಿನ ಸೇವೆಗಾಗಿ ಬಡಿದೆಬ್ಬಿಸಿದ ಹುರುಪು ಅಲ್ಲಾಹನ ದಯದಿಂದ ಸ್ಥಿರವಾಗಿ ನಿಲ್ಲುವುದು. ಅವರು ಜಮಾಅತಿನ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳನ್ನು ನೆನಪಿಸಿಕೊಂಡು ಅವರ ಸೇವಕರಾದ ನಾವು ಅಲ್ಲಾಹನೊಡನೆ ಪ್ರಾರ್ಥಿಸೋಣ: "ಓ ಅಲ್ಲಾಹ್, ನೀನು ಅವರಿಗೆ ಸ್ವರ್ಗದ ಉನ್ನತ ಪದವಿಯನ್ನು ನೀಡು. ಅವರು ಕೈಗೊಂಡ ಕಾರ್ಯಗಳನ್ನು ಪೂರ್ಣಗೊಳಿಸುವ ಶಕ್ತಿಯನ್ನು ನಮಗೆ ನೀಡು. ನೀನು ಈ ಜಮಾಅತಿನ ರಕ್ಷಕನೂ ಸಹಾಯಕನೂ ಆಗಿ ಸದಾ ಇರು. ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಅನುಗ್ರಹಗಳನ್ನು ನಮಗೆ ನೀಡು". □

# ಯೇಸು ವಿವಾಹಿತರಾಗಿದ್ದರೇ?*

ಯೇಸುಕ್ರಿಸ್ತರು (ಈಸಾನಬಿ) ವಿವಾಹಿತರಾಗಿದ್ದರೇ ಎಂಬ ಪ್ರಶ್ನೆಗೆ "ಹೌದು" ಎಂದು ಉತ್ತರ ಹೇಳುವುದು ವಾಚಕರಲ್ಲಿ ಹಲವರಿಗೆ ಆಶ್ಚರ್ಯವನ್ನುಂಟುಮಾಡಬಹುದು. ಏಕೆಂದರೆ ಅನೇಕ ಶತಮಾನಗಳಿಂದ ಸಾಮಾನ್ಯವಾಗಿ ಎಲ್ಲರೂ ನಂಬಿಕೊಂಡಿರುವುದು ಅವರು ವಿವಾಹಿತರಲ್ಲವೆಂದಾಗಿದೆ. ಕ್ರೈಸ್ತರು ಅವರನ್ನು ದೇವನೆಂದು ನಂಬುವುದರಿಂದ, ಅವರಿಗೆ ವಿವಾಹ ಅವಶ್ಯವಿಲ್ಲವೆಂದೂ ಅವರು ವಿವಾಹಬಂಧದಲ್ಲಿ ಸಿಲುಕಬಾರದೆಂದೂ ನಂಬಿಕೊಂಡಿದ್ದಾರೆ. ಮುಸ್ಲಿಮರು ನಂಬುವುದಾದರೋ, ಅವರು ದೇವನಲ್ಲ, ದೇವನಿಂದ ನಿಯುಕ್ತನಾದ ಒಬ್ಬ ಪ್ರವಾದಿಯೆಂದೂ ಆದರೆ ಶಿಲುಬಾ ಸಂಭವದ ನಂತರ, ತನ್ನ 33ನೇ ವಯಸ್ಸಿನಲ್ಲಿ ಅವರು ಆಕಾಶಲೋಕಕ್ಕೆ ಆರೋಹಿಸಲ್ಪಟ್ಟ ಕಾರಣ ಅವರಿಗೆ ವಿವಾಹದ ಸಂದರ್ಭ ಮತ್ತು ಸೌಕರ್ಯ ಇರಲಿಲ್ಲವೆಂದೂ ಆದುದರಿಂದ ಅವರು ತನ್ನ ಪುನರಾಗಮನದ ಬಳಿಕ ವಿವಾಹ ಮಾಡಿಕೊಳ್ಳುವರೆಂದೂ ಆಗಿದೆ. ಈ ಎರಡು ಪಂಗಡಗಳ ನಂಬಿಕೆಗಳನ್ನು ಮುಂದಿಟ್ಟು ಯೇಸು ಕ್ರಿಸ್ತರ ವಿವಾಹದ ಕುರಿತು ಇಲ್ಲಿ ವಿವೇಚಿಸಬಹುದು.

ಯೇಸುಕ್ರಿಸ್ತರು ಓರ್ವ ಸತ್ಯಾತ್ಮರೂ ದೇವನ ಒಬ್ಬ ವರಿಷ್ಠದಾಸರೂ ಇಸ್ರಾಯೇಲರ ಆತ್ಮೋದ್ಧಾರಕ್ಕಾಗಿ ನಿಯುಕ್ತರಾದ ಓರ್ವ ಆಧ್ಯಾತ್ಮಿಕ ಗುರುವೂ ಆಗಿದ್ದರೆಂದೂ ಆದರೆ ದೇವನೋ ದೇವತುಲ್ಯನೋ ಆಗಿರಲಿಲ್ಲವೆಂಬ ವಾಸ್ತವಾಂಶ ನಿಷ್ಪಕ್ಷವಾಗಿ ಬೈಬಲ್ ಅಧ್ಯಯನ ಮಾಡುವ ಯಾರಿಗೂ ಗ್ರಹಿಸಲು ಸಾಧ್ಯವಿದೆ. ಈ ಸತ್ಯಾಂಶವನ್ನು ಇಂದು ಅನೇಕ ಕ್ರೈಸ್ತ ಪಂಡಿತರು ಒಪ್ಪಿದ್ದಾರೆ. ಮಾತ್ರವಲ್ಲ, ಯೇಸು ಮೋಶೆ ಪ್ರವಾದಿ (ಮೂಸಾನಬಿ)ಯ ಧರ್ಮಶಾಸನವನ್ನನುಸರಿಸಿ ಜೀವನ ನಡೆಸಿದವರೂ ಆ ಧರ್ಮಶಾಸ್ತ್ರವನ್ನು ಪ್ರಬಲಗೊಳಿಸಲಿಕ್ಕೂ ಪ್ರಬೋಧಿಸಲಿಕ್ಕೂ ಬೇಕಾಗಿ ದೇವನಿಂದ ನಿಯುಕ್ತರಾದವರೆಂದೂ ಸಹ 'ಸುವಾರ್ತೆ'ಗಳಿಂದ ತಿಳಿದು ಬರುತ್ತದೆ. ಹಾಗಿರುವಾಗ, ಅವರು ವಿವಾಹಿತರಾಗಿದ್ದರೆಂದು ಹೇಳುವುದು ಆಶ್ಚರ್ಯಕರವೆಂದು ಭಾವಿಸಬೇಕಾಗಿಲ್ಲ. ಮಾನವರ ಆತ್ಮೋದ್ಧಾರಕ್ಕಾಗಿ ದೈವನಿಯುಕ್ತರಾದ ಮತಾಚಾರ್ಯರೂ ಆಧ್ಯಾತ್ಮಿಕ ಗುರುಗಳೂ ಎಲ್ಲ ವಿವಾಹಿತರಾಗಿದ್ದರೆಂಬುದು ಒಂದು ವಾಸ್ತವಾಂಶವಾಗಿದೆ. ಶ್ರೀರಾಮ, ಶ್ರೀಕೃಷ್ಣ ಮೊದಲಾದ ಹಿಂದುಗಳ ಅವತಾರ ಪುರುಷರು ಮಾತ್ರವಲ್ಲ, ಬೈಬಲ್ ಪ್ರಸ್ತಾವಿಸುವ ಪ್ರವಾದಿಗಳೂ ವಿವಾಹಿತರಾಗಿದ್ದರು. ದೇವನ ವರಿಷ್ಠದಾಸರೂ ದೈವೀ ಪ್ರಕಾಶವನ್ನು ಪಡೆದವರೂ ದೇವನ ಸಾಮೀಪ್ಯ ಮತ್ತು ಪ್ರೀತಿಯಿಂದ ಅನುಗ್ರಹಿಸಲ್ಪಟ್ಟವರೂ ಆದ ಪ್ರವಾದಿಗಳು ವಿವಾಹಿತರಾಗಿದ್ದರೆಂದು ಸ್ಪಷ್ಟಪಡುವಾಗ ಯೇಸು ವಿವಾಹಿತರಾಗಿದ್ದರು ಎಂದು ಹೇಳುವುದರಿಂದ ಅವರಿಗೆ ದೇವನೊಡನಿರುವ ಪ್ರೇಮಬಂಧಕ್ಕಾಗಲಿ ಅವರ ಆಧ್ಯಾತ್ಮಿಕ ಸ್ಥಾನಕ್ಕಾಗಲಿ ಏನೂ ಕಳಂಕ ಬರುವುದಿಲ್ಲ. ಅವರು ಓರ್ವ ಮನುಷ್ಯನಾಗಿ ಜನಿಸಿ ಇತರ ಮನುಷ್ಯರಂತೆ ಪಾನಾಶನಾದಿ ಮಾಡಿಯೂ ಇತರ ಆವಶ್ಯಕತೆಗಳನ್ನು ನಿರ್ವಹಿಸಿಯೂ ಕ್ರಮಬದ್ಧವಾಗಿ ಬೆಳೆದು ಬಂದ ವ್ಯಕ್ತಿಯಾಗಿದ್ದರು. ಅವರು ದಣಿವು, ಕ್ಲೇಶಗಳನ್ನು ಅನುಭವಿಸಿ, ಘಾಸಿಗೊಂಡು, ಕೊನೆಗೆ ಶಿಲುಬೆಗೆ ಜಡಿಯಲ್ಪಟ್ಟು ಅದರ ಮೇಲೆಯೇ ಮರಣವನ್ನಪ್ಪಿದರೆಂದು ಕ್ರೈಸ್ತಸಹೋದರರು ನಂಬುತ್ತಾರೆ. ಈ ರೀತಿಯ ಅವಸ್ಥೆಗಳಿಗೆ ಈಡಾದ ಒಬ್ಬ ವ್ಯಕ್ತಿ ವಿವಾಹ ಮಾಡಿಕೊಂಡಿದ್ದರೆಂದು ಸಹ ಹೇಳಿದರೆ ಆಶ್ಚರ್ಯವಲ್ಲ; ಅದು ಅವರ ಸ್ಥಾನದ ಮಹತ್ವಕ್ಕೆ ಕಳಂಕವನ್ನುಂಟುಮಾಡುವುದಿಲ್ಲ. ಇನ್ನು ಅವರನ್ನು ದೇವನೆಂದು ಕಲ್ಪಿಸುವುದಾದರೂ ಸಹ, ಯಾವ ದೈವವು ಈ ರೀತಿಯ ಕಾಲ ಪರಿವರ್ತನೆಗಳಿಗೂ ಆಪತ್ತುಗಳಿಗೂ ಗುರಿಯಾಗಿದ್ದನೋ ಆ

---

* ಅಹ್ಮದಿಯಾ ಮಿಶನರಿಯಾಗಿದ್ದ ದಿವಂಗತ ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ **H. A.** ಅವರು ಅಹ್ಮದಿಯಾ ಮುಖವಾಣಿ "ಸತ್ಯದೂತನ್" ಮಲೆಯಾಳಿ ಮಾಸಪತ್ರಿಕೆಯಲ್ಲಿ 1943ನೇ ಸಪ್ಟೆಂಬರ್‌ನಲ್ಲಿ ಬರೆದ ಲೇಖನದ ಭಾಷಾಂತರ.

ದೇವನಿಗೆ ವಿವಾಹದ ಅಗತ್ಯ ಬಂದೊದಗಿತ್ತು ಎಂಬುದು ಆಶ್ಚರ್ಯಕರವೇ? ಯೇಸು ಒಂದು ಕಡೆಯಲ್ಲಿ ದೇವನೂ ಮತ್ತೊಂದು ಕಡೆಯಲ್ಲಿ ಮನುಷ್ಯನೆಂದೂ ಅವರು ಮೇಲೆ ಹೇಳಿದ ಅವಸ್ಥೆಗಳಿಗೆ ಗುರಿಯಾದುದು ತನ್ನ ಮಾನುಷಿಕ ನೆಲೆಯನುಸಾರವೆಂದೂ ಯಾರಾದರೂ ಹೇಳುವುದಾದರೆ, ಅದು ಎಷ್ಟು ಮಾತ್ರ ಅವಿವೇಕತನದ ವಾದವೆಂದಾದರೂ ಅವರು ತನ್ನ ಮಾನುಷಿಕ ನೆಲೆಯನುಸಾರ ವಿವಾಹ ಸಹ ಮಾಡಿಕೊಂಡಿದ್ದರೆಂದು ನಿರ್ದಿಷ್ಟವಾಗಿ ಹೇಳಬಹುದಾಗಿದೆ. ಇದಲ್ಲದೆ, ಮನುಷ್ಯನ ಉತ್ಕೃಷ್ಟವಾದ ಹಲವು ಗುಣಗಳು ಪ್ರಕಟವಾಗುವುದು ಅವನು ಪತಿಯೂ ಪಿತನೂ ಆಗಿರುವ ಸ್ಥಿತಿಯಲ್ಲೇ ಆಗಿದೆ. ಒಬ್ಬನು ಉತ್ತಮನಾದ ಪತಿಯೂ ಪಿತನೂ ಆಗಿರುವುದು ಆತನ ಶ್ರೇಷ್ಠ ಗುಣಗಳಲ್ಲಿ ಒಳಗೊಳ್ಳುತ್ತದೆ. ಆಧ್ಯಾತ್ಮಿಕ ಗುರುಗಳು ಮನುಷ್ಯರಿಗೆ ಉತ್ತಮ ಮಾದರಿಗಳಾಗಿರುವುದರಿಂದ ಅವರಲ್ಲಿ ಪ್ರತಿಯೊಬ್ಬರು ಪತಿ ಮತ್ತು ಪಿತನ ನೆಲೆಯಲ್ಲಿ ಸಹ ಇತರರಿಗೆ ಮಾದರಿಯಾಗಬೇಕಾಗಿದೆ. ಅಲ್ಲವಾದರೆ ಅವರ ಜೀವನ ಮಾದರಿ ಅಪೂರ್ಣವೆಂದಾಗುತ್ತದೆ. ಯೇಸು ವಿವಾಹ ಮಾಡಿಕೊಂಡಿಲ್ಲವಾದರೆ, ಅವರಿಗೆ ಉತ್ತಮ ಪತಿಯೆಂಬ ಸ್ಥಾನವನ್ನು ಪಡೆಯಲಿಕ್ಕಾಗಲಿ ತನ್ಮೂಲಕ ಅವರಿಗೆ ದಾಂಪತ್ಯ ಜೀವನದಲ್ಲಿ ಮಾದರಿಯಾಗಲಿಕ್ಕಾಗಲಿ ಸಾಧ್ಯವಿಲ್ಲ. ಈ ಸ್ಥಿತಿಯಲ್ಲಿ ನೋಡುವಾಗ ಅವರು ವಿವಾಹ ಮಾಡಿಕೊಂಡಿದ್ದರೆಂದು ಹೇಳಿದರೆ ಅವರ ಸ್ಥಾನದ ಮಹತ್ವಕ್ಕೆ ಕಳಂಕ ಬರುವುದಿಲ್ಲ; ಬದಲಾಗಿ ಅದು ಅವರ ಉತ್ತಮ ಗುಣಗಳನ್ನು ಪ್ರಕಟಗೊಳಿಸಲಿಕ್ಕೂ ಅವರನ್ನು ಒಂದು ಪೂರ್ಣಮಾದರಿಯಾಗಿ ಸಮರ್ಥಿಸಲಿಕ್ಕೂ ಸಹಾಯಕವಾಗುತ್ತದೆ.

ದೇವನ ವಿಶಿಷ್ಟವಾದ ಅನುಗ್ರಹ ಇಸ್ರಾಯೇಲರಿಗೂ ಅನಂತರ ಅವರ ಮೂಲಕ ಕ್ರೈಸ್ತಲೋಕಕ್ಕೂ ಲಭಿಸಲು ಕಾರಣಭೂತನಾದ ಅಬ್ರಹಾಂ ಪ್ರವಾದಿ (ಇಬ್ರಾಹಿಂ ನಬಿ) ವಿವಾಹಿತರಾಗಿದ್ದರು ಮಾತ್ರವಲ್ಲ ಬಹುಪತ್ನೀತ್ವವನ್ನು ಕೈಗೊಂಡಿದ್ದರೆಂದು ಬೈಬಲ್ ಹೇಳುತ್ತದೆ. ಇದೇ ಪ್ರಕಾರ ಇಸ್ರಾಯೇಲ್ ವಂಶಪಿತ ಯಾಕೋಬ್ ಪ್ರವಾದಿ (ಯಾಕೂಬ್ ನಬಿ) ಸಹ ಬಹು ಪತ್ನೀತ್ವವನ್ನು ಸ್ವೀಕರಿಸಿದ್ದರು. ಹಾಗೆಯೇ ಯಾರ ಮೂಲಕ ಇಸ್ರಾಯೇಲ ವಂಶಕ್ಕೆ ಧರ್ಮಶಾಸನ ಲಭಿಸಿತೋ, ಅಥವಾ ಯಾರ ಧರ್ಮಶಾಸ್ತ್ರವನ್ನು ಪ್ರಬೋಧಿಸಲಿಕ್ಕೆ ಯೇಸು ಆಗಮಿಸಿದರೋ ಆ ಸತ್ಯಾತ್ಮ ಮೋಶೆ ಪ್ರವಾದಿ ಸಹ ಬಹುಪತ್ನೀತವನ್ನುಕೈಗೊಂಡಿದ್ದರು. ಇವರೆಲ್ಲರೂ ಸನ್ಮಾರ್ಗದರ್ಶನಾರ್ಥ ದೇವನಿಂದ ನಿಯುಕ್ತರಾದ ಮಹಾತ್ಮರೂ ಆಧ್ಯಾತ್ಮಿಕ ಗುರುಗಳೂ ದೈವೀ ಪ್ರಕಾಶದಿಂದ ಅನುಗ್ರಹಿಸಲ್ಪಟ್ಟವರೂ ಆಗಿದ್ದರು. ವಿವಾಹ ಮಾಡಿಕೊಂಡ ಕಾರಣ, ಮಾತ್ರವಲ್ಲ, ಬಹುಪತ್ನೀತ್ವವನ್ನು ಸ್ವೀಕರಿಸಿಯೂ ಸಹ ಇವರ ಆಧ್ಯಾತ್ಮಿಕತೆಗೂ ಇವರಿಗೆ ದೇವನೊಡನಿರುವ ಪ್ರೇಮ ಬಂಧಕ್ಕೂ ಯಾವ ಹಾನಿಯೂ ಉಂಟಾಗಿಲ್ಲವಾದರೆ ಮತ್ತೆ ಯೇಸು ವಿವಾಹ ಮಾಡಿದ್ದರೆಂದು ಹೇಳಿದರೆ ಅವರ ಆಧ್ಯಾತ್ಮಿಕತೆಗೆ ಯಾವ ಕುಂದೂ ಬರುವುದಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, 'ಹಳೆಯ ಒಡಂಬಡಿಕೆ' ಪ್ರಸ್ತಾಪಿಸುವ ಪ್ರವಾದಿಗಳಲ್ಲಿ ಹೆಚ್ಚಿನವರು ವಿವಾಹಿತರಾಗಿದ್ದರು ಮಾತ್ರವಲ್ಲ, ಬಹುಪತ್ನೀತ್ವವನ್ನು ಸ್ವೀಕರಿಸಿದ್ದರು. ಆ ಧರ್ಮಗ್ರಂಥ ಮನುಷ್ಯರಿಗೆ ವಿವಾಹ ಆವಶ್ಯಕವೆಂದು ಮಾತ್ರವಲ್ಲ ಕಲಿಸುವುದು; ಬಹುಪತ್ನೀತ್ವವನ್ನು ಸ್ವೀಕರಿಸಬಹುದೆಂದು ಸಹ ಅದು ಕಲಿಸುತ್ತದೆ. ನೋಡಿರಿ: ವಿಮೋಚನಕಾಂಡ 22:16,17; ಧರ್ಮೋಪದೇಶಕಾಂಡ 21:10,13; 22:28,29; 2ಸಮುವೇಲನು 12:7,8. ಹೀಗೆ ಒಂದಕ್ಕಿಂತ ಮಿಕ್ಕಿದ ಪತ್ನಿಯರನ್ನು ಸ್ವೀರಿಸಬಹುದೆಂದು ಕೂಡ ಕಲಿಸುವ 'ಧರ್ಮಶಾಸ್ತ್ರ'ವನ್ನೂ ಪ್ರವಾದಿಗಳ ವಚನಗಳನ್ನೂ ಕುರಿತು ಯೇಸು ಹೇಳಿದ್ದು ಈ ರೀತಿಯಾಗಿದೆ: "ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವುದಕ್ಕೆ ನಾನು ಬಂದೆನೆಂದು ನೆನೆಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ-ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು. (ಮತ್ತಾಯ 5:17,18). ಇನ್ನೂ ಅವರು ಹೇಳುತ್ತಾರೆ: "ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಆದುದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ. ಆದರೆ ಅವರ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೇ ಹೊರತು ನಡೆಯುವುದಿಲ್ಲ." (ಮತ್ತಾಯ 23:2,3). ಹೀಗೆ, ಯೇಸು ತಾನು ಆಗಮಿಸಿದ್ದು ಧರ್ಮಶಾಸ್ತ್ರವನ್ನೂ

ಪ್ರವಾದಿಗಳ ವಚನಗಳನ್ನೂ ನೆರವೇರಿಸಲಿಕ್ಕೆಂದು ಹೇಳಿ ಧರ್ಮಶಾಸ್ತ್ರವನ್ನನುಸರಿಸಿ ವರ್ತಿಸುವರೆ ತನ್ನ ಶಿಷ್ಯರಿಗೆ ಉಪದೇಶಿಸುವಾಗ, ಆ ಧರ್ಮಶಾಸ್ತ್ರದ ನಿರ್ದೇಶಗಳಿಗೂ ಪ್ರವಾದಿಗಳ ಜೀವನ ಮಾದರಿಗಳಿಗೂ ವಿರುದ್ಧವಾಗಿ ಬಹುಪತ್ನೀತ್ವ ಸ್ವೀಕರಿಸುವರೆ ಅಲ್ಲ, ಏಕಪತ್ನೀತ್ವವನ್ನು ಸಹ ಸ್ವೀಕರಿಸಬಾರದೆಂದು ಅವರು ಬೋಧಿಸಿದ್ದರೆಂದಾಗಲಿ ದಾಂಪತ್ಯ ಜೀವನ ಆತ್ಮೋನ್ನತಿಗೆ ಹಾನಿಕರವೆಂದು ತಿಳಿದು ಕೊಂಡಿದ್ದರೆಂದಾಗಲಿ ಎಂದಿಗೂ ಭಾವಿಸಬಾರದು.

"ಸ್ತ್ರೀಸಂಪರ್ಕವಿಲ್ಲದೆ ಇರುವುದು ಮನುಷ್ಯನಿಗೆ ಒಳ್ಳೇದು; ಆದರೆ ಜಾರತ್ವವು ಪ್ರಬಲವಾಗಿರುವುದರಿಂದ ಪ್ರತಿಯೊಬ್ಬನಿಗೆ ಸ್ವಂತ ಹೆಂಡತಿಯು ಇರಲಿ, ಪ್ರತಿಯೊಬ್ಬ ಳಿಗೆ ಸ್ವಂತ ಗಂಡನು ಇರಲಿ" (1 ಕೊರಿಂಥದವರಿಗೆ, 7:1,2) ಎಂದು ಪೌಲ ಅಪೋಸ್ತಲ ಹೇಳಿದ್ದರೂ ಯೇಸು ಕ್ರಿಸ್ತರ ಅಧ್ಯಾಪನೆ ಈ ಹೇಳಿಕೆಯನ್ನು ನ್ಯಾಯೀಕರಿಸುವು ದಿಲ್ಲ. ಅವರು ಸ್ತ್ರೀ ಪುರುಷ ಸಂಬಂಧದ ಕುರಿತು ಹೀಗೆ ಹೇಳಿದ್ದರು: "ಮನುಷ್ಯರನ್ನು ನಿರ್ಮಾಣ ಮಾಡಿದವನು ಆದಿ ಯಿಂದಲೇ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿ ಅವರ ವಿಷಯದಲ್ಲಿ—ಈ ಕಾರಣದಿಂದ ಪುರುಷನು ತಂದೆ ತಾಯಿ ಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು ಎಂದು ಹೇಳಿದ ನೆಂಬುದಾಗಿ ನೀವು ಓದಲಿಲ್ಲವೋ? "(ಮತ್ತಾಯ 19:4, 5). ಈ ವಚನದಿಂದ ಅವರು ಮನಗಾಣಿಸಿಕೊಡುವುದೇ ನೆಂದರೆ, ದೇವನು ಸ್ತ್ರೀಪುರುಷರನ್ನು ಸೃಷ್ಟಿಸಿರುವುದು ಅವರು ಪತಿ-ಪತ್ನಿಯರಾಗಿ ಒಂದು ಶರೀರವೆಂಬಂತೆ ವರ್ತಿಸಬೇಕೆಂದಾಗಿದೆ. ಹೀಗೆ ಸ್ತ್ರೀ ಪುರುಷರು ದಾಂಪತ್ಯ ಜೀವನ ನಡೆಸಬೇಕೆಂದು ದೇವೇಚ್ಛೆ ಇರುವುದೆಂದಿರುವಾಗ, ವೈವಾಹಿಕ ಜೀವನ ಆಧ್ಯಾತ್ಮಿಕ ಜೀವನಕ್ಕೆ ಸರಿಹೊಂದದಿರು ವಂಥದ್ದೋ ದೈವಸಾಮಿಪ್ಯದಿಂದ ಮನುಷ್ಯರನ್ನು ಅಗಲಿ ಸುವಂಥದ್ದೋ ಎಂದಾಗಲಿ ಭಾವಿಸುವುದು ಒಂದು ರೀತಿ ಯಲ್ಲಿ ದೈವದೂಷಣವಾಗುವುದು. ಏಕೆಂದರೆ, ಅದು ದೈವೇಚ್ಛೆಯನುಸಾರ ಮನುಷ್ಯರು ವರ್ತಿಸುವುದು ದೇವನಿಗೆ ಅಹಿತವೆಂದು ಹೇಳುವುದಕ್ಕೆ ತುಲ್ಯವಾಗಿದೆ. ಆದ್ದರಿಂದಲೇ, ಕೆಲವೊಮ್ಮೆ ವೈವಾಹಿಕ ಜೀವನದಲ್ಲಿ ಎದುರಾಗುವ ಸಮಸ್ಯೆ ಗಳ ಕಾರಣದಿಂದ "ಹೀಗಿದ್ದರೆ ಮದುವೆಯಾಗುವುದು ಒಳ್ಳೇದಲ್ಲ" ಎಂದು ತನ್ನ ಶಿಷ್ಯರಲ್ಲಿ ಕೆಲವರು ಅಭಿಪ್ರಾಯ ಪಟ್ಟಾಗ ಯೇಸು ಈ ರೀತಿ ಹೇಳಿದ್ದರು: "ಈ ಮಾತನ್ನು ಅಂಗೀಕರಿಸುವ ವರವನ್ನು ಹೊಂದಿದವರೇ ಹೊರತು ಮತ್ತಾರೂ ಅದನ್ನು ಅಂಗೀಕರಿಸುವುದಿಲ್ಲ. ತಾಯಿಯ ಗರ್ಭದಿಂದ ನಪುಂಸಕರಾಗಿ ಹುಟ್ಟಿದವರು ಕೆಲವರು ಇದ್ದಾರೆ; ಮನುಷ್ಯರಿಂದ ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ; ಮತ್ತು ಪರಲೋಕ ರಾಜ್ಯದ ನಿಮಿತ್ತ ವಾಗಿ ತಮ್ಮನ್ನು ತಾನೇ ನಪುಂಸಕರಾಗಿ ಮಾಡಿಕೊಂಡವರು ಕೆಲವರು ಇದ್ದಾರೆ. ಅಂಗೀಕರಿಸಬಲ್ಲವನು ಅಂಗೀಕರಿಸಲಿ" (ಮತ್ತಾಯ 19 : 11, 12). ಈ ವಚನ ಮೂಲಕ ಯೇಸು ತಿಳಿಸಿಕೊಡುವುದು, ಷಂಡರು (ನಪುಂಸಕರು) ಆಗಿರುವ ಕಾರಣದಿಂದ ಮದುವೆ ಅವಶ್ಯವಿಲ್ಲದವರಿಗೆ ವಿವಾಹಬಂಧದಲ್ಲಿ ಒಳಪಡದಿರಬಹುದೆಂದಲ್ಲದೆ ಅದರಿಂದ ಅಗಲಿರುವುದು ಒಂದು ಪುಣ್ಯಕರ್ಮವಾಗಲಿಕ್ಕಿಲ್ಲ ಎಂದಾ ಗಿದೆ. ಪರಲೋಕ ರಾಜ್ಯದ ನಿಮಿತ್ತ ನಪುಂಸಕರಾದವರು ಎಂದು ಯೇಸು ಹೇಳಿರುವುದು, ಸತ್ಯಾತ್ಮರಾದ ಯೇಸು ವನ್ನು ಸ್ವೀಕರಿಸಿದ ನಿಮಿತ್ತ ಹಲವಿಧ ಕಷ್ಟ ನಷ್ಟಗಳಿಗೆ ಗುರಿಯಾಗಿ, ಯಾ ದೈವಾಲಯದ ಸೇವೆಗಾಗಿ ಜೀವನವನ್ನು ಅರ್ಪಿಸಿ ವಿವಾಹ ಮಾಡಿಕೊಳ್ಳುವರೆ ನಿರ್ವಾಹವಿಲ್ಲದವರ ಕುರಿತಾಗಿರಲಿಕ್ಕೇ ಸಾಧ್ಯ. ಅಲ್ಲದಿದ್ದರೆ ಅವರ ಈ ಹೇಳಿಕೆ, ಸ್ತ್ರೀಪುರುಷರ ಸೃಷ್ಟಿಯ ಉದ್ದೇಶದ ಕುರಿತು ಅವರೇ ಹೇಳಿ ಕೊಟ್ಟದ್ದಕ್ಕೂ ಧರ್ಮಶಾಸ್ತ್ರದಲ್ಲಿ ಅಡಕವಾದ ನಿರ್ದೇಶಗಳಿಗೂ ಅವರಿಗಿಂತ ಮೊದಲು ಬಂದ ಪ್ರವಾದಿ ಗಳ ಆಚರಣೆಗೂ ವಿರುದ್ಧವಾಗುವುದು. ಸಂಕ್ಷಿಪ್ತದಲ್ಲಿ, ವಿವಾಹ ಮಾನುಷಧರ್ಮವೆಂದೂ ಅವಶ್ಯವಿದ್ದರೆ ಒಂದ ಕ್ಕಿಂತ ಹೆಚ್ಚು ಪತ್ನಿಯರನ್ನು ಕೂಡ ಹೊಂದಬಹುದೆಂದೂ 'ಹಳೆಯ ಒಡಂಬಡಿಕೆ'ಯಿಂದ ಸ್ಪಷ್ಟವಾಗುವುದಕ್ಕೆ ವಿರುದ್ಧ ವಾಗಿ ಏನನ್ನೂ ಯೇಸುಕ್ರಿಸ್ತರು ಉಪದೇಶಿಸಿರಲಿಲ್ಲ.

ಇನ್ನು, ಯೇಸು ವಾಸ್ತವದಲ್ಲಿ ವಿವಾಹ ಮಾಡಿದ್ದರೆ ಎಂದು ನಾವು ಪರ್ಯಾಲೋಚಿಸಬೇಕಾಗಿದೆ. ಕ್ರೈಸ್ತರು ಪೂರ್ವಕಾಲದಿಂದಲೇ ಯೇಸು ವಿವಾಹ ಮಾಡಿಕೊಳ್ಳಲಿಲ್ಲ ವೆಂದು ನಂಬಿಕೊಂಡು ಬಂದುದರಿಂದ, ಅವರು ಮದುವೆ ಮಾಡಿದುದಾಗಿ ಸ್ಪಷ್ಟವಾಗಿ ಪ್ರಸ್ತಾವಿಸುವ ವಾಕ್ಯಗಳು 'ಸುವಾರ್ತೆ'ಗಳಲ್ಲಿ ಕಾಣಲಿಕ್ಕೆ ಪ್ರಯಾಸಕರ. ಸುವಾರ್ತೆ ಗಳಾದರೋ ಯೇಸುಕ್ರಿಸ್ತರ 33ನೇ ವಯಸ್ಸಿನ ವರೆಗಿನ ಜೀವನ ಕಾಲದ ಒಂದು ಸಂಕ್ಷಿಪ್ತ ಚರಿತ್ರೆ ಅಡಕವಾದ ಅಪೋಸ್ತಲರ ಕೃತಿಗಳು ಮಾತ್ರವೆಂದು ಹೆಚ್ಚೆಂದರೆ ಅವುಗಳ ಕುರಿತು ಹೇಳಬಹುದು. ಮಾತ್ರವಲ್ಲ, ಅವು ಮನುಷ್ಯನ

ಹಸ್ತಕ್ಷೇಪದಿಂದ ಸುರಕ್ಷಿತವಲ್ಲವೆಂದೂ ಅವು ಅಕ್ಷರಶಃ ದೈವವಚನವಲ್ಲವೆಂದೂ ಕ್ರೈಸ್ತ ಪಂಡಿತರೇ ಸಮ್ಮತಿಸಿದ್ದಾರೆ. ಆದ್ದರಿಂದ, ಯೇಸು ವಿವಾಹವಾಗಿದ್ದರೆಂದು ವ್ಯಕ್ತವಾಗಿ ಹೇಳುವ ವಚನಗಳು ಸುವಾರ್ತೆಗಳಲ್ಲಿ ಕಾಣಲು ಪ್ರಯಾಸ ಕರವೇ ಸರಿ. ಆದರೂ ಅವುಗಳಲ್ಲಿ ಅಡಕವಾದ ಹಲವು ಸಂಭವವಿವರಣೆಗಳಿಂದ ಅವರು ಮದುವೆಮಾಡಿಕೊಂಡಿದ್ದ ರೆಂದು ಮಾತ್ರವಲ್ಲ, ಒಬ್ಬಾಕೆಗಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರೆಂದು ಸಹ ಮನದಟ್ಟಾಗುತ್ತದೆ. ಮೋರ್ಮನ್ ಎಂದು ಕರೆಯಲ್ಪಡುವ ಕ್ರೈಸ್ತ ಪಂಥ ಯೇಸು ವಿವಾಹಿತ ರಾಗಿದ್ದರೆಂದೂ ಕನಿಷ್ಟ ಪಕ್ಷ ಅವರಿಗೆ ಮೂವರು ಪತ್ನಿ ಯರು ಇದ್ದರೆಂದೂ ಸುವಾರ್ತೆಗಳಿಂದ ತಿಳಿದು ಬರುತ್ತದೆ ಯೆಂದು ನಂಬಿಕೊಂಡು ವಾದಿಸುತ್ತಾರೆ. ಈ ಪಂಥೀ ಯರು ಈ ನಂಬಿಕೆಯ ಕಾರಣದಿಂದ ಅಮೇರಿಕದಲ್ಲಿ ಬಹು ಸಂಖ್ಯಾತರಾದ ವಿರೋಧಿಗಳ ಕೈಗಳಿಂದ ಬಹಳ ಹಿಂಸೆ ಗಳಿಗೂ ಪೀಡೆಗಳಿಗೂ ಗುರಿಯಾಗಬೇಕಾಯಿತು. ಅವರು ತಮ್ಮ ನಂಬಿಕೆಯನುಸಾರ ಬಹುಪತ್ನೀತ್ವವನ್ನು ಸ್ವೀಕರಿಸಿ ದ್ದರೂ ಯು. ಎಸ್. ಸರಕಾರ ನಿಯಮ ನಿರ್ಮಾಣದ ಮೂಲಕ ಅವರ ಈ ಆಚಾರವನ್ನು ತಡೆದಿದೆ.

ಮಗ್ದಲದ ಮರಿಯ, ಮಾರ್ಥ ಮುಂತಾದ ಕೆಲವು ಸ್ತ್ರೀಯರಿಗೂ ಯೇಸುಕ್ರಿಸ್ತರಿಗೂ ತಮ್ಮೊಳಗಿದ್ದ ಸಂಬಂ ಧದ ಕುರಿತು ಸುವಾರ್ತೆಗಳಲ್ಲಿ ಕಾಣುವ ಉಲ್ಲೇಖಗಳಿಂದ, ಅವರು ಯೇಸುಕ್ರಿಸ್ತರ ಸಹಧರ್ಮಿಣಿಗಳಾಗಿದ್ದರೆಂದು ತಿಳಿದುಬರುತ್ತದೆಯೆಂದು ಮೋರ್ಮನ್ ಪಂಥ ವಾದಿಸು ತ್ತದೆ. ಸುವಾರ್ತೆಗಳಲ್ಲಿರುವ ವಿವರಣೆ ಅವರ ಈ ವಾದ ವನ್ನು ನ್ಯಾಯೀಕರಿಸುತ್ತದೆ. ಶಿಲುಬೆಯಿಂದ ಯೇಸು ಕ್ರಿಸ್ತರನ್ನು ಇಳಿಸಿ ಸಮಾಧಿಯಲ್ಲಿಟ್ಟ ನಂತರ ಸಂಭವಿಸಿದು ದರ ಕುರಿತು ಸುವಾರ್ತೆ ಹೀಗೆ ಹೇಳುತ್ತದೆ:

"ವಾರದ ಮೊದಲನೆಯ ದಿನದಲ್ಲಿ ಮಗ್ದಲದ ಮರಿ ಯಳು ಮುಂಜಾನೆ ಇನ್ನೂ ಕತ್ತಲೆ ಇರುವಾಗಲೇ ಸಮಾ ಧಿಯ ಬಳಿಗೆ ಬಂದು ಸಮಾಧಿಯ ಕಲ್ಲು ಅಲ್ಲಿಂದ ತೆಗೆದಿ ರುವುದನ್ನು ಕಂಡಳು. ಆಕೆ ಸೀಮೋನ ಪೇತ್ರನ ಬಳಿಗೂ ಯೇಸುವಿನ ಪ್ರಿಯನಾಗಿದ್ದ ಆ ಮತ್ತೊಬ್ಬ ಶಿಷ್ಯನ ಬಳಿಗೂ ಓಡಿ ಬಂದು ಅವರಿಗೆ—ಸ್ವಾಮಿಯನ್ನು ಸಮಾಧಿಯೊಳಗಿಂದ ತೆಗೆದುಕೊಂಡು ಹೋಗಿ ಆತನನ್ನು ಎಲ್ಲಿಟ್ಟಿದ್ದಾರೋ ನಮಗೆ ಗೊತ್ತಿಲ್ಲವೆಂದು ಹೇಳಿದಳು. ಆಗ ಪೇತ್ರನೂ ಆ ಮತ್ತೊಬ್ಬ ಶಿಷ್ಯನೂ ಹೊರಟು ಸಮಾಧಿಯ ಕಡೆಗೆ ಹೋದರು......ತರುವಾಯ ಆ ಶಿಷ್ಯರು ತಿರುಗಿ ತಮ್ಮ ವರ ಬಳಿಗೆ ಹೋದರು. ಆದರೆ ಮರಿಯಳು ಹೊರಗೆ ಸಮಾಧಿಯ ಬಳಿಯಲ್ಲಿ ಅಳುತ್ತಾ ನಿಂತಿದ್ದಳು. ಹೀಗೆ ಆಕೆ ಅಳುತ್ತಿರುವಾಗ ಸಮಾಧಿಯೊಳಗೆ ಬೊಗ್ಗಿ ನೋಡಲು ಯೇಸುವಿನ ದೇಹವು ಇಟ್ಟದ್ದ ಸ್ಥಳದಲ್ಲಿ ಬೆಳ್ಳಗಿರುವ ವಸ್ತ್ರಗಳನ್ನು ಹೊದ್ದುಕೊಂಡ ಇಬ್ಬರು ದೇವದೂತರನ್ನು ಕಂಡಳು; ಅವರಲ್ಲಿ ಒಬ್ಬನು ತಲೆ ಇದ್ದ ಕಡೆಯಲ್ಲಿ ಒಬ್ಬನು ಕಾಲಿದ್ದ ಕಡೆಯಲ್ಲಿ ಕೂತಿದ್ದರು. ಅವರು ಆಕೆಯನ್ನು— ಸ್ತ್ರೀಯೇ, ನೀನು ಯಾಕೆ ಅಳುತ್ತೀ ಎಂದು ಕೇಳಲು ಆಕೆ—ನನ್ನ ಸ್ವಾಮಿಯನ್ನು ತೆಗೆದು ಕೊಂಡು ಹೋಗಿದ್ದಾರೆ; ಆತನನ್ನು ಎಲ್ಲಿ ಇಟ್ಟಿದ್ದಾರೋ ನನಗೆ ಗೊತ್ತಿಲ್ಲ ಅಂದಳು. ಇದನ್ನು ಹೇಳಿ ತಿರುಗಿಕೊಂಡು ಯೇಸು ನಿಂತಿರುವುದನ್ನು ಕಂಡಳು, ಆದರೆ ಆತನು ಯೇಸು ಅಂತ ಆಕೆಗೆ ತಿಳಿಯಲಿಲ್ಲ, ಯೇಸು ಆಕೆಯನ್ನು—ಸ್ತ್ರೀಯೇ, ಯಾಕೆ ಅಳುತ್ತೀ ? ಯಾರನ್ನು ಹುಡುಕುತ್ತೀ? ಎಂದು ಕೇಳಲು ಆಕೆ ಆತನನ್ನು ತೋಟಗಾರನೆಂದು ನೆನಸಿ ಆತನಿಗೆ—ಅಯ್ಯಾ, ನೀನು ಆತನನ್ನು ಎತ್ತಿಕೊಂಡು ಹೋಗಿದ್ದರೆ ಎಲ್ಲಿ ಇಟ್ಟಿದ್ದೀ ನನಗೆ ಹೇಳು; ನಾನು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದಳು. ಯೇಸು ಆಕೆಗೆ—ಮರಿಯಳೇ, ಎಂದು ಹೇಳಿದನು. ಆಕೆ ತಿರುಗಿಕೊಂಡು ಇಬ್ರಿಯ ಮಾತಿನಲ್ಲಿ ರಬ್ಬೂನಿ, ಅಂದಳು. (ರಬ್ಬೂನಿ ಅಂದರೆ ಗುರುವೇ ಎಂದು ಅರ್ಥ) ಯೇಸು ಆಕೆಗೆ—ನನ್ನನ್ನು ಹಿಡಿಯಬೇಡ; ಯಾಕೆಂದರೆ ನಾನು ಇನ್ನೂ ತಂದೆಯ ಬಳಿಗೆ ಏರಿಹೋದ ವನಲ್ಲ ಆದರೆ ನೀನು ನನ್ನ ಸಹೋದರರ ಬಳಿಗೆ ಹೋಗಿ— ನಾನು ನನ್ನ ತಂದೆಯೂ ನಿಮ್ಮ ತಂದೆಯೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿಹೋಗುತ್ತೇನೆ ಎಂದು ಅವರಿಗೆ ಹೇಳು ಅಂದನು." (ಯೋಹಾನ 20:1-17).

ಸಮಾಧಿಯಲ್ಲಿರಿಸಿದ ಯೇಸುವನ್ನು ಸಂದರ್ಶಿಸಲಿಕ್ಕೆ ಓರ್ವ ಸ್ತ್ರೀಯಾದ ಮರಿಯ ಮುಂಜಾನೆ ಕತ್ತಲೆಯಿರು ವಾಗಲೇ ಹೊರಟು ಹೋಗಿ ಅವರನ್ನು ಸಮಾಧಿಯಲ್ಲಿ ಹುಡುಕಾಡುತ್ತಾ, ಕಾಣದಿರುವಾಗ ಅಳುತ್ತಾ ಇದ್ದು ಕೊಂಡು, ಅವರನ್ನು ಪತ್ತೆ ಹಚ್ಚಿದ ಪಕ್ಷದಲ್ಲಿ ತಾನು ತೆಗೆದುಕೊಂಡು ಹೋಗಲು ಇಚ್ಛೆಯನ್ನು ಪ್ರಕಟಿಸುತ್ತಾ, ಹಾಗೆ ಇತರ ಶಿಷ್ಯರಿಗೆ ಇಲ್ಲದ ಒಂದು ಸಂಬಂಧ ಅವ ರೊಡನೆ ಆಕೆಗೆ ಇದ್ದುದಾಗಿ ಮೇಲಿನ ವಾಕ್ಯಗಳಿಂದ ಸ್ಪಷ್ಟ

ವಾಗುತ್ತದೆ. ಅವರ ಪುರುಷರಾದ ಶಿಷ್ಯರು ಕೂಡ ಸುಮ್ಮಗೆ ಕೂತಿರುವಾಗ ಆ ಸ್ತ್ರೀ ಏಕಾಂಗಿನಿಯಾಗಿ ಹೋಗಿ ಅವರನ್ನು ಹುಡುಕಾಡುತ್ತಾ ಅವರಿಗಾಗಿ ಅಳುತ್ತಾ ಇದ್ದುದರಿಂದ ಗುರುಶಿಷ್ಯ ಸಂಬಂಧಕ್ಕಿಂತ ಮಿಗಿಲಾದ ಒಂದು ಪ್ರತ್ಯೇಕ ಸಂಬಂಧ ಆ ಸ್ತ್ರೀಗೆ ಅವರೊಂದಿಗಿತ್ತೆಂದು ಮನವರಿಕೆಯಾಗುತ್ತದೆ. ಸ್ತ್ರೀಗೆ ಪುರುಷನೊಂದಿಗಿರುವ ಪ್ರತ್ಯೇಕ ಸಂಬಂಧ ದಾಂಪತ್ಯ ಸಂಬಂಧವಲ್ಲದೆ ಬೇರೊಂದಾಗಿರಲಾರದು. ಯೇಸುಕ್ರಿಸ್ತರಿಗೆ ಸ್ತ್ರೀಪುರುಷರಾದ ಹಲವರು ಶಿಷ್ಯರಿದ್ದರು. ಆದರೆ ಬೆಳಗಾಗುವುದಕ್ಕೆ ಮುಂಚೆ ಕತ್ತಲೆಯಿರುವಾಗಲೇ ಅವರನ್ನು ಹುಡುಕಲಿಕ್ಕೆ ಹೊರಟು, ಅವರನ್ನು ಸಮಾಧಿಯಲ್ಲಿ ಕಾಣದಿರುವಾಗ ಅತ್ತ ಇತ್ತ ಅನ್ವೇಷಿಸುತ್ತಾ ಅವರಿಗಾಗಿ ಅಳುತ್ತಾ ಇದ್ದುದು ಮಗ್ದಲದ ಮರಿಯ. ಹಾಗೆ, ಆಕೆ ತನ್ನನ್ನು ಹುಡುಕಾಡುತ್ತಿದ್ದಾಳೆಂದೂ ಆಕೆಗೆ ತನ್ನ ಪತ್ತೆ ಹಚ್ಚಲಿಲ್ಲವೆಂದೂ ತಿಳಿದಾಗ ಯೇಸು ಆಕೆಯೊಡನೆ: ಸ್ತ್ರೀಯೇ, ನೀನು ಯಾಕೆ ಅಳುತ್ತೀ? ಎಂದು ಕೇಳಿದಾಗ ಆಕೆಗೆ ಅವರು ಯಾರೆಂದು ತಿಳಿಯದೆ, ತನಗೆ ತನ್ನ ಸ್ವಾಮಿ ಸಿಕ್ಕಿದರೆ ತಾನು ತೆಗೆದುಕೊಂಡು ಹೋಗುವೆನೆಂದು ಅವರೊಡನೆ ಹೇಳಿದಾಗ, ಅವರು ಆಕೆಯನ್ನು 'ಮರಿಯಳೇ' ಎಂದು ಕರೆಯುವುದನ್ನು ಕೇಳಿದ ಕೂಡಲೇ ಆಕೆ 'ರಬ್ಬೂನೀ' ಎಂದು ಸಂಬೋಧನೆ ಮಾಡಿದಳು. ಇದರಿಂದ ತಿಳಿದುಬರುವುದೇನೆಂದರೆ, ಯೇಸುವಿಗೂ ಮಗ್ದಲದ ಮರಿಯಳಿಗೂ ಅನ್ಯೋನ್ಯವಿದ್ದ ಸಂಬಂಧ ಮೋರ್ಮನ್ ಪಂಥೀಯರು ಹೇಳುವ ರೀತಿಯಲ್ಲಿ ಪತಿ-ಪತ್ನಿ ಸಂಬಂಧವೇ ಆಗಿತ್ತು. ಇಲ್ಲಿ, ಮರಿಯ ಯೇಸುವನ್ನು ಸ್ವಾಮಿ (Lord) ಎಂದು ಹೇಳಿರುವುದರಿಂದ ಅವರು ಆಕೆಯ ಪತಿಯಲ್ಲವೆಂದು ತಿಳಿದು ಬರುತ್ತದೆಯೆಂದು ಯಾರಾದರೂ ಹೇಳುವುದಾದರೆ ಅದು ಸರಿಯೆನಿಸುವುದಿಲ್ಲ. ಏಕೆಂದರೆ ಪತಿಯನ್ನು ಪತ್ನಿ 'ಸ್ವಾಮಿ' (Lord), 'ಯಜಮಾನ' (Master) ಎಂದು ಕರೆಯುವುದು ಸರ್ವಸಾಮಾನ್ಯ. ಉದಾಹರಣೆಗೆ, ಸಾರಾ ತನ್ನ ಪತಿಯಾದ ಅಬ್ರಹಾಂ ಪ್ರವಾದಿಯ ಕುರಿತು ಹೀಗೆ ಹೇಳಿದ್ದಾರೆ: "ನನ್ನಂಥ ಮುದುಕಿಗೆ ಭೋಗವಾದೀತೇ ? ನನ್ನ ಸ್ವಾಮಿಯೂ (Lord) ಮುದುಕನಲ್ಲವೇ?" (ಆದಿಕಾಂಡ 18:12). ಇದರಿಂದ, ಪತ್ನಿ ಪತಿಯನ್ನು ಯಜಮಾನ, ಸ್ವಾಮಿ (Lord) ಎಂದು ಕರೆಯುವ ವಾಡಿಕೆಯಿತ್ತೆಂದು ಸ್ಪಷ್ಟವಾಗುತ್ತದೆ. ಇತರ ಭಾಷೆಗಳಲ್ಲಿ ಸಹ ಇಂತಹ ಪ್ರಯೋಗ ಕಾಣಬಹುದು.

ಗಲಿಲಾಯದ ಕಾನಾ ಎಂಬಲ್ಲಿ ನಡೆದ ಒಂದು ವಿವಾಹ ಸಮಾರಂಭದ ಸಂಬಂಧಿಸಿ ಯೋಹಾನ 2ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಆ ಸಮಾರಂಭದಲ್ಲಿ ದ್ರಾಕ್ಷಾರಸ ಸಾಲದೆ ಹೋದಾಗ ಯೇಸುವಿನೊಡನೆ ಅವರ ಮಾತೆ ಅದರ ಕುರಿತು ಹೇಳಿ, ಕೆಲಸದವರಿಗೆ ತನ್ನ ಮಗನು ಏನು ಹೇಳುವನೋ ಅದನ್ನು ಮಾಡಿರಿ ಅಂದರು. ಯೇಸು ಅಲ್ಲಿದ್ದ ಆರು ಕಲ್ಲಿನ ಬಾನೆಗಳಲ್ಲಿ ನೀರು ತುಂಬಿಸಲು ಹೇಳಿ ಅದನ್ನು ದ್ರಾಕ್ಷಾರಸವಾಗಿ ಪರಿವರ್ತಿಸಿದ ನಂತರ ಪಾರುಪತ್ಯಗಾರನಿಗೆ ಕೊಡಿರಿ ಎಂದು ಹೇಳಿದರು. ಈ ಸಂಭವವನ್ನು ವಿವರಿಸುತ್ತಾ 'ಸುವಾರ್ತೆ' ಹೀಗೆ ಮುಂದುವರಿಯುತ್ತದೆ: "ಅವನು (ಪಾರುಪತ್ಯಗಾರನು) ಅಷ್ಟರೊಳಗೆ ದ್ರಾಕ್ಷಾರಸವಾದ ಆ ನೀರನ್ನು ರುಚಿ ನೋಡಿದಾಗ ಮದಲಿಂಗ (ಮದುವಣಿಗ)ನನ್ನು ಕರೆದು—ಎಲ್ಲರು ಹಿರಿದಿನ ದ್ರಾಕ್ಷಾರಸವನ್ನು ಮೊದಲು ಕೊಟ್ಟು ಅಮಲೇರಿದ ಮೇಲೆ ಕಿರಿದಿನ ದ್ರಾಕ್ಷಾರಸವನ್ನು ಕೊಡುತ್ತಾರೆ; ನೀನು ಹಿರಿದಿನ ದ್ರಾಕ್ಷಾರಸವನ್ನು ಇದುವರೆಗೂ ಇಟ್ಟುಕೊಂಡಿದ್ದೀ ಅಂದನು. ಯೇಸು ಈ ಮೊದಲನೆಯ ಸೂಚಕ ಕಾರ್ಯವನ್ನು ಗಲಿಲಾಯದ ಕಾನಾ ಊರಿನಲ್ಲಿ ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು." (ಯೋಹಾನ 2:9–11). ಈ ವಿವರಣೆಯಿಂದ ಪ್ರಸ್ತುತ ವಿವಾಹ ಸಮಾರಂಭ ಯೇಸುವಿನದಾಗಿತ್ತೆಂದು ಮನವರಿಕೆಯಾಗುತ್ತದೆ. ಒಂದನೆಯದಾಗಿ, ಅತಿಥಿಗಳಿಗೆ ದ್ರಾಕ್ಷಾರಸ ಸಾಲದೆ ಹೋದಾಗ ಆ ಬಗ್ಗೆ ಯೇಸುವಿನೊಡನೆ ಹೇಳಿದ್ದು ಅವರ ತಾಯಿ. ಅದು ಯೇಸುವಿನ ಸ್ವಂತ ವಿವಾಹ ಸಮಾರಂಭವಲ್ಲದಿರುತ್ತಿದ್ದರೆ, ಮರಿಯ ಮತ್ತು ಮಗ ಅದರಲ್ಲಿ ಅತಿಥಿಗಳೆಂಬಂತೆ ಪಾಲ್ಗೊಂಡಿದ್ದರೆ, ಅತಿಥಿ ಮಾತ್ರವಾಗಿದ್ದ ಮರಿಯ ಮದುವೆಮನೆಯ ಆವಶ್ಯಕತೆಯನ್ನು ತಿಳಿದು ಅದಕ್ಕಾಗಿ ಏರ್ಪಾಡು ಮಾಡಬೇಕಾಗಿರಲಿಲ್ಲ. ಎರಡನೆಯದಾಗಿ, ಮರಿಯ ಅಲ್ಲಿಯ ಕೆಲಸದವರಿಗೆ ತನ್ನ ಮಗ ಹೇಳುವ ಪ್ರಕಾರ ಮಾಡಲು ನಿರ್ದೇಶಿಸಿದರು. ಬೇರೆ ಯಾರದಾದರೂ ವಿವಾಹ ಸಮಾರಂಭವೆಂದಾಗಿದ್ದರೆ, ಅಲ್ಲಿರುವ ಕೆಲಸದವರು ಯೇಸು ಹೇಳುವ ಹಾಗೆ ಮಾಡಬೇಕೆಂದು ಅವರೊಡನೆ ಹೇಳಲು ಅವರ ತಾಯಿಗೆ ಅಧಿಕಾರವಾಗಲಿ ಅವಕಾಶವಾಗಲಿ ಇಲ್ಲ. ಮೂರನೆಯದಾಗಿ, ನೀರಿನಿಂದ ದ್ರಾಕ್ಷಾರಸ ಮಾಡಿದ್ದು ಯೇಸು ಆಗಿರುವಾಗ ಹಿರಿದಿನ ದ್ರಾಕ್ಷಾರಸವನ್ನು ಮೊದಲು ಕೊಡದೆ ಇಟ್ಟುಕೊಂಡಿರುವುದರ ಕುರಿತು ಪಾರುಪತ್ಯಗಾರನು ಮದುಮಗ

# ವ್ರತಾನುಷ್ಠಾನ

ಎನ್. ಹಾಮಿದ್

ಇಸ್ಲಾಮಿಕ ಪಂಚಾಂಗದ ಒಂಭತ್ತನೆಯ ಮಾಸವಾಗಿದೆ 'ರಂಝಾನ್'. ಈ ಚಾಂದ್ರಮಾಸದಲ್ಲಿ ಪ್ರಾಪ್ತವಯಸ್ಕರಾದ ಎಲ್ಲಾ ಮುಸ್ಲಿಮರೂ ವ್ರತವನ್ನನುಷ್ಠಿಸಬೇಕೆಂಬುದು ಇಸ್ಲಾಮಿನ ಪ್ರಧಾನ ಕರ್ತವ್ಯಗಳಲ್ಲಿ ಒಂದು. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಅನುಶಾಸಿಸಲಾಗಿದೆ: "ಓ ವಿಶ್ವಾಸಿಗಳೇ, ನಿಮಗಿಂತ ಮುಂಚಿನವರೆಗೆ ವಿಧಿಸಲಾದ ಪ್ರಕಾರ ನಿಮಗೆ ಸಹ ವ್ರತಾನುಷ್ಠಾನ ವಿಧಿಸಲಾಗಿದೆ–ನೀವು 'ತಖ್ವಾ'(ಭಕ್ತಿ) ಉಳ್ಳವರಾಗಿರಲಿಕ್ಕೆ" (2:184). ಉಪವಾಸಾಚರಣೆ ದೈವಿಕ ಮತಾವಲಂಬಿಗಳಾದ ಎಲ್ಲಾ ಜಾತಿಯವರಲ್ಲೂ ಒಂದಲ್ಲವಾದರೆ ಇನ್ನೊಂದು ರೀತಿಯಲ್ಲಿ ರೂಢಿಯಲ್ಲಿರುವುದನ್ನು ನಮಗೆ ಕಾಣಲು ಸಾಧ್ಯ. ಮಾತ್ರವಲ್ಲ, ಪ್ರವಾದಿಗಳೂ ಋಷಿಗಳೂ ಇತರ ಮಹಾತ್ಮರೂ ಉಪವಾಸ ಅನುಷ್ಠಿಸಿದ್ದರೆಂದು ಚರಿತ್ರೆಯಲ್ಲಿ ಉಲ್ಲೇಖವಿದೆ. ಈ ಆಚರಣೆಯ ಮೂಲಕ ಮನುಷ್ಯನು ಇಚ್ಛಾನಿರೋಧದ ತರಬೇತಿಯನ್ನು ಪಡೆಯುತ್ತಾನೆ. ಹಾಗೆ ವ್ರತಾನುಷ್ಠಾನಿ ದೋಷಕರವಾದ ಪ್ರವಣತೆಗಳಿಂದೆಲ್ಲಾ ಮನಸ್ಸನ್ನು ನಿಯಂತ್ರಿಸಲಿಕ್ಕೂ ಸತ್ಕರ್ಮಗಳಲ್ಲಿ ಮನಸ್ಸನ್ನು ಕಾರ್ಯಪ್ರವೃತ್ತಗೊಳಿಸಲಿಕ್ಕೂ ಪ್ರಾಪ್ತನಾಗುತ್ತಾನೆ. ನಿತ್ಯ ಅಭ್ಯಾಸದ ಸಂಪ್ರದಾಯಗಳನ್ನು ತ್ಯಜಿಸಲು ತುಂಬಾ ಕಷ್ಟವಿದೆಯೆಂಬುದು ಸರ್ವವಿದಿತ. ಆದರೆ ಒಬ್ಬನು ತನ್ನ ನಿತ್ಯಾಭ್ಯಾಸವನ್ನಾಗಲಿ ರೂಢಿಯನ್ನಾಗಲಿ ಇಚ್ಛಾನುಸಾರ ಬಿಟ್ಟುಬಿಡಲು ಸಾಮರ್ಥ್ಯವುಳ್ಳವನಾದರೆ ಅವನು ಎಂದಿಗೂ ಅದರ ಅಡಿಯಾಳಾಗಲಿಕ್ಕಿಲ್ಲ. ಲೌಕಿಕವಾದ ಸುಖಾಸಕ್ತಿಯಿಂದಷ್ಟೆ ಪಾಪದ ಉದ್ಭವ. ಆದುದರಿಂದ ಪಾಪದೆಡೆಗೆ ಕೆಲವೊಮ್ಮೆ ಪ್ರೇರೇಪಿಸುವ ಲೌಕಿಕ ಸುಖಾನುಭವಗಳನ್ನು ದೈವಸಂತುಷ್ಟಿಗಾಗಿ ವರ್ಷದಲ್ಲಿ ಒಂದು ತಿಂಗಳ ಕಾಲ ಹಗಲಿನಲ್ಲಿಡೀ ಪರಿತ್ಯಜಿಸಿ ಇಚ್ಛೆಗಳನ್ನು ನಿರೋಧಿಸಲು ಅಭ್ಯಾಸ ಮಾಡುವ ಮೂಲಕ ವ್ರತಾನುಷ್ಠಾನಿಗೆ ಮನೋನಿಯಂತ್ರಣ ಶಕ್ತಿ ವರ್ಧಿಸುತ್ತದೆ; ದೋಷ ಪ್ರವಣತೆಗಳನ್ನು ಸುಲಭವಾಗಿ ನಿಯಂತ್ರಿಸಲು ಆತನಿಗೆ ಸಾಧ್ಯವಾಗುತ್ತದೆ. ಹೀಗೆ ಇಚ್ಛಾನಿರೋಧ ಮಾಡಿ ಮನಃಕರ್ಮಗಳನ್ನು ಹತೋಟಿಯಲ್ಲಿ

---

ನೊಡನೆ ಹೇಳಿದುದಾಗಿ ಉಲ್ಲೇಖಿಸಿದ್ದು ಸಮಂಜಸವಾಗಬೇಕಾದರೆ ಯೇಸು ತಾನೇ ಮದುಮಗನಾಗಬೇಕಾಗಿದೆ. ಹೀಗೆ, ಕಾನಾದ ವಿವಾಹ ಸಮಾರಂಭದ ಕುರಿತು ಸುವಾರ್ತೆಗಳಲ್ಲಿ ಕಾಣುವ ವಿವರಣೆಯನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಅದು ಯೇಸುವಿನ ಮದುವೆಯಲ್ಲದೆ ಬೇರೆ ಯಾರದೂ ಆಗಿರಲಿಕ್ಕಿಲ್ಲವೆಂದು ಮನವರಿಕೆಯಾಗುತ್ತದೆ.

ಇದಲ್ಲದೆ, ಮೋರ್ಮನ್ ಪಂಥೀಯರು ಮಾರ್ಥ ಎಂಬ ಸ್ತ್ರೀ ಯೇಸುವಿನ ಬೇರೊಬ್ಬ ಪತ್ನಿಯೆಂದು ನಂಬುತ್ತಾರೆ. ಲೂಕ 10ನೇ ಅಧ್ಯಾಯದ 38ರಿಂದ 42ರ ವರೆಗಿನ ವಚನಗಳಲ್ಲಿ ಮತ್ತು ಯೋಹಾನ 11ನೇ ಅಧ್ಯಾಯದಲ್ಲಿ ಕಾಣುವ ಮಾರ್ಥಳ ಸಂಬಂಧಿಸಿದ ವಿವರಣೆಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ. ಸುವಾರ್ತೆಗಳ ಈ ರೀತಿಯ ಪ್ರಸ್ತಾವನೆಗಳಿಂದ, ಯೇಸು ವಿವಾಹಿತರಾಗಿದ್ದರೆಂದು ಮಾತ್ರವಲ್ಲ, ಬಹುಪತ್ನಿಯರನ್ನು ಹೊಂದಿದ್ದರೆಂದು ಸಹ ಮನವರಿಕೆಯಾಗುತ್ತದೆ. ಪೂರ್ವಕಾಲದ ಕ್ರೈಸ್ತರು ಈ ಅಭಿಮತದವರಲ್ಲವಾದುದರಿಂದ ಸುವಾರ್ತೆಗಳಿಂದ ಈ ವಿಷಯದಲ್ಲಿ ಹೆಚ್ಚಿನ ಪುರಾವೆ ಲಭಿಸದಿದ್ದುದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ ನಿಷ್ಪಕ್ಷವಾಗಿ ಚಿಂತನೆ ಮಾಡುವವರಿಗೆ ಇಷ್ಟು ಸಂಗತಿಗಳಿಂದಲೇ, ಕನಿಷ್ಠ ಪಕ್ಷ ಯೇಸುವಿನ ವಿವಾಹದ ಕುರಿತು ಸುವಾರ್ತೆಗಳು ಸೂಚಿಸುತ್ತವೆಯೆಂದು ತಿಳಿದುಕೊಳ್ಳಬಹುದು. ಆ ಮಹಾತ್ಮರು ಮುಸ್ಲಿಮರು ನಂಬುವ ಪ್ರಕಾರ 33ನೇ ವಯಸ್ಸಿನಲ್ಲಿ ಆಕಾಶಕ್ಕೆ ಏರಿಹೋಗಲಿಲ್ಲ, ಇಸ್ರಾಯೇಲರು ವಾಸಿಸುತ್ತಿದ್ದ ಪೂರ್ವದೇಶಗಳಲ್ಲಿ ಸಂಚರಿಸಿ ಧರ್ಮಬೋಧನೆ ಮಾಡುತ್ತಾ 120ನೇ ಪ್ರಾಯದ ವರೆಗೆ ಬದುಕಿದ್ದರೆಂದೂ, ಆದುದರಿಂದ ಅವರಿಗೆ ವಿವಾಹವಾಗಲಿಕ್ಕೆ ಸಂದರ್ಭವೂ ಸೌಕರ್ಯವೂ ಇರಲಿಲ್ಲವೆಂದು ಮುಸ್ಲಿಮರು ಹೇಳುವುದು ಸರಿಯಲ್ಲವೆಂಬ ಸಂಗತಿ ಇನ್ನೊಂದು ಲೇಖನದಲ್ಲಿ ಪ್ರತಿಪಾದಿಸುವೆನು.

—o—o—

ಡಲು ಪ್ರಾಪ್ತನಾಗುವಾಗ ಮಾತ್ರ ಭಕ್ತನಿಗೆ ಆತ್ಮೋನ್ನತಿ ಸಿದ್ಧಿಯಾಗತೊಡಗುತ್ತದೆ. ಹಾಗೆ ಉಪವಾಸಾಚರಣೆ ದೋಷಬಾಧೆಗಳನ್ನು ತಡೆಯಲು ಮನುಷ್ಯನನ್ನು ಪ್ರಾಪ್ತನನ್ನಾಗಿ ಮಾಡುವುದರಿಂದ, ವ್ರತಾನುಷ್ಠಾನ ವಿಧಿಸಲ್ಪಟ್ಟದ್ದು ವಿಶ್ವಾಸಿಗಳು "ತಖ್ವಾ (ಭಕ್ತಿ) ಉಳ್ಳವರಾಗಿರಲಿಕ್ಕೆ" ಎಂದು ಮೇಲೆ ಉದ್ಧರಿಸಲಾದ ಖುರ್‌ಆನ್ ವಾಕ್ಯದಲ್ಲಿ ಹೇಳಲಾಗಿದೆ. 'ತಖ್ವಾ' ಎಂಬುದಕ್ಕೆ 'ಭಕ್ತಿ' ಎಂದು ನಾನಿಲ್ಲಿ ಅರ್ಥ ಕೊಟ್ಟಿದ್ದರೂ ಅದರ ಸಾಕ್ಷಾತ್ ಅರ್ಥ 'ದೋಷಬಾಧೆಯನ್ನು ತಡೆಯುವುದು' ಎಂದಾಗಿದೆ. ಈ ಅರ್ಥವನ್ನು ಅವಲಂಬಿಸಿ ಹೇಳುವುದಾದರೆ ವ್ರತಾಚರಣೆಯಿಂದ ಉದ್ದೇಶಿಸಲ್ಪಡುವುದು ಹಾಗೂ ಯಥಾರ್ಥದಲ್ಲಿ ವ್ರತಾನುಷ್ಠಾನಿ ಅದರ ನಿಯಮಗಳನ್ನೆಲ್ಲಾ ಪಾಲಿಸುವಾಗ ಅವನಿಗೆ ಅನುಭವವಾಗುವುದು ದೋಷಬಾಧೆಗಳಿಂದ ವಿಮುಕ್ತಿ ಮತ್ತು ಮನಃಪರಿಶುದ್ಧಿಯಾಗಿದೆ.

ಹೀಗೆ ಒಬ್ಬನು ತನ್ನ ಇಂದ್ರಿಯೇಚ್ಛೆಗಳನ್ನು ಬಾಹ್ಯವಾದ ನಿರ್ಬಂಧಗಳಿಲ್ಲದೆಯೇ ಕೇವಲ ದೈವಸಂಪ್ರೀತಿಗಾಗಿ ನಿಯಂತ್ರಿಸಿ ತನ್ನ ವ್ರತವನ್ನು ಪೂರ್ಣವಾಗಿ ಪಾಲಿಸುವಾಗ ಎಲ್ಲದಕ್ಕಿಂತ ಮಿಗಿಲಾಗಿ, ತನ್ನ ಸುಖಕ್ಕಿಂತ ಮಿಗಿಲಾಗಿ ದೈವಾಜ್ಞೆಯನ್ನು ಮನಗಾಣುವ ತೀವ್ರವಾದೊಂದು ಪ್ರಜ್ಞೆ ಅವನಲ್ಲಿ ಮೂಡುತ್ತದೆ. ತನ್ನ ಇಷ್ಟಾನುಸಾರ ಅನುಭವಿಸಬಹುದಾದ ತನ್ನ ಸುಖಸೌಕರ್ಯಗಳನ್ನೆಲ್ಲ, ದೈವಾಜ್ಞೆಗೆ ವಿಧೇಯನಾಗಬೇಕೆಂಬ ಏಕ ಕಾರಣದಿಂದ, ವರ್ಜಿಸಿ, ಅವುಗಳ ಮೇಲೆ ತನಗೆ ಎಷ್ಟು ಆಶೆ ತೋರಿದರೂ, ಎಷ್ಟು ಅಗತ್ಯವಿದ್ದರೂ ಸರ್ವಸಾಕ್ಷಿಯಾದ ದೇವನ ಮುಂದೆ ಅವನ ಆಜ್ಞೆಗೆ ವಿರುದ್ಧವಾಗಿ ನಡೆಯಲು ಸಂಕೋಚಪಟ್ಟು, ತನ್ನ ಇಚ್ಛೆಗಳನ್ನು ಅಂಕೆಯಲ್ಲಿಡುವಾಗ ಖಂಡಿತವಾಗಿಯೂ ಅವನ ಆತ್ಮಕ್ಕೆ ಅಭೌಮವಾದೊಂದು ಪರಿಶುದ್ಧತೆ ಅನುಭವವಾಗುತ್ತದೆ. ಆ ಪವಿತ್ರತೆ ಅವನ ಪ್ರಜ್ಞೇಂದ್ರಿಯಗಳಲ್ಲೂ ಕರ್ಮೇಂದ್ರಿಯಗಳಲ್ಲೂ ಪ್ರಕಾಶಿಸುವುದು. ಹೀಗೆ ದೈವಾಜ್ಞೆಯನುಸಾರ ವರ್ಷದಲ್ಲಿ ಒಂದು ಮಾಸ ಕಾಲ ಹಗಲೆಲ್ಲಾ ವ್ರತವನ್ನಾಚರಿಸಿ ಇಚ್ಛಾನಿರೋಧವನ್ನು ಅಭ್ಯಸಿಸುವುದಾದರೆ ದೇವನೊಡನೆ ವಿಧೇಯತೆ ಅವನಲ್ಲಿ ಸ್ಥಿರಗುಣವಾಗಿದ್ದು ಕೊಂಡು ದೈವವಿರೋಧವಾದ ಏನನ್ನೂ ಇಚ್ಛಿಸದೆಯೂ ಅನುಭವಿಸದೆಯೂ ಇರಲಿಕ್ಕೆ ಆತ್ಮಶಕ್ತಿ ಸಿದ್ಧಿಸುತ್ತದೆ ಉಪವಾಸ ಆಚರಣೆಯಿಂದ ಅನುಭವವಾಗುವ ಈ ಪರಿಶುದ್ಧತೆ ವ್ರತಾನುಷ್ಠಾನಿಯ ಸ್ವಭಾವದಲ್ಲಿ ಶಾಂತತೆಯನ್ನುಂಟು ಮಾಡುತ್ತದೆ. ತನ್ನಿಂದ ದುಸ್ವಭಾವಗಳಾಗಲಿ ಅಶುದ್ಧ ಕರ್ಮಗಳಾಗಲಿ ಪ್ರಕಟವಾಗದಂತೆ ಅವನು ಜಾಗ್ರತೆ ವಹಿಸಿ ತನ್ಮೂಲಕ ಸಮಾಧಾನ ಮತ್ತು ಸ್ಥಿರತೆ ಸ್ಥಾಯಿಯಾಗಿ ಅವನಲ್ಲಿ ಪ್ರಕಾಶಿಸುತ್ತಾ ಇರುತ್ತವೆ.

ವ್ರತಾನುಷ್ಠಾನದ ಬಗ್ಗೆ ಇಸ್ಲಾಮಿನ ಈ ಆಜ್ಞೆ ಅಪ್ರಾಪ್ತ ವಯಸ್ಸಿನ ಬಾಲಿಕಾಬಾಲಕರಿಗೆ ಅನ್ವಯಿಸುವುದಿಲ್ಲ. ರೋಗಿಗಳೂ ಯಾತ್ರಿಕರೂ ಈ ತಿಂಗಳಲ್ಲಿ ಉಪವಾಸ ಅನುಷ್ಠಿಸಬೇಕಾಗಿಲ್ಲ. ಹಾಗೆಯೇ ರಜಸ್ವಲೆಯರಾದ ಸ್ತ್ರೀಯರು ಸಹ ಶುದ್ಧವಾಗುವ ವರೆಗೆ ಉಪವಾಸ ಅನುಷ್ಠಿಸಬಾರದು. ಬಿಟ್ಟು ಹೋದ ಉಪವಾಸಗಳನ್ನು ಅವರು ಬೇರೆ ಸಂದರ್ಭದಲ್ಲಿ ಅನುಷ್ಠಿಸಿದರೆ ಸಾಕು. ಸ್ಥಿರ ರೋಗಿಗಳಿಗೂ ಉಪವಾಸ ಆಚರಿಸಲು ದೇಹಶಕ್ತಿಯಿಲ್ಲದ ಮಟ್ಟಿಗೆ ಬಲಹೀನರಾದವರಿಗೂ ಅತಿ ವೃದ್ಧಾಪ್ಯದಿಂದ ಬಳಲಿದವರಿಗೂ ಈ ಆಜ್ಞೆಯಿಂದ ವಿನಾಯಿತಿ ಇದೆ; ಆದರೆ ಸಾಧ್ಯವಿದ್ದರೆ ಅವರು ಪ್ರತಿಯೊಂದು ಉಪವಾಸದ ಬದಲಿಗೆ ಒಬ್ಬ ನಿರ್ಗತಿಕನಿಗೆ ಅನ್ನದಾನ ಮಾಡಬೇಕು. ಈ ಸಂಗತಿಗಳ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಕ್ಲಿಪ್ತ ದಿನಗಳಲ್ಲಿ ವ್ರತ ಅನುಷ್ಠಿಸಬೇಕಾಗಿದೆ, ಆದರೆ ನಿಮ್ಮಲ್ಲಿ ಯಾರಾದರೂ ರೋಗಿಯಾಗಿದ್ದರೆ, ಅಥವಾ ಯಾತ್ರೆಯಲ್ಲಿದ್ದರೆ ಅವನು ಬೇರೆ ದಿನಗಳಲ್ಲಿ ಸಂಖ್ಯೆ ಪೂರ್ತಿಮಾಡಲಿ. ನೆರವೇರಿಸಲು ಸಾಮರ್ಥ್ಯವಿದ್ದವರಿಗೆ ಪ್ರಾಯಶ್ಚಿತ್ತ–ಒಬ್ಬ ನಿರ್ಗತಿಕನಿಗೆ ಅನ್ನದಾನ ಮಾಡುವುದು. ಯಾರಾದರೂ ಸ್ವಂತ ಇಷ್ಟದಿಂದ ಒಳಿತು ಮಾಡಿದರೆ ಅದು ಆತನಿಗೆ ಒಳ್ಳೆಯದು. ನೀವು ತಿಳಿದವರಾದರೆ ಉಪವಾಸ ಮಾಡುವುದು ನಿಮಗೆ ಉತ್ತಮ" (2:185).

ರಂಝಾನ್ ಮಾಸದಲ್ಲಿ, ರೋಗಗ್ರಸ್ತರೂ ಯಾತ್ರಿಕರೂ ಉಪವಾಸ ಅನುಷ್ಠಿಸಬೇಕಾಗಿಲ್ಲವೆಂದು ಪ್ರಸ್ತುತ ಖುರ್‌ಆನ್ ವಚನದಲ್ಲಿ ಸ್ಪಷ್ಟಪಡಿಸಿದ್ದರೂ ಖುರ್‌ಆನಿನಿಂದ ಮುಸ್ಲಿಮರು ಸರ್ವಸಾಮಾನ್ಯವಾಗಿ ಮುಖ ತಿರುಗಿಸಿದುದರ ಫಲವಾಗಿ ಆ ಪವಿತ್ರ ಗ್ರಂಥ ನೀಡಿದ ಈ ಅನುಮತಿಯನ್ನು ಅವರು ಅಗಣ್ಯಮಾಡಿ ವರ್ತಿಸುತ್ತಾರೆ. ಪ್ರಸ್ತುತ ಅನುಮತಿ ನೀಡುತ್ತಾ ಖುರ್‌ಆನ್ ಹೀಗೆ ಹೇಳುತ್ತದೆ: "ಅಲ್ಲಾಹು ನಿಮ್ಮ ಸೌಲಭ್ಯವನ್ನು ಇಚ್ಛಿಸುತ್ತಾನೆ; ಅವನು ನಿಮ್ಮ ಯಾತನೆಯನ್ನು ಇಚ್ಛಿಸುವುದಿಲ್ಲ" (2:186).

ದೇವನ ಈ ಸೌಜನ್ಯದಾನವನ್ನು ಅಂಗೀಕರಿಸದೆ ರೋಗ ಪೀಡಿತನಾಗಿದ್ದರೂ ಯಾತ್ರೆ ಕೈಗೊಂಡಿದ್ದರೂ ಉಪವಾಸ ಅನುಷ್ಠಿಸಲಿಕ್ಕೆ ಹಠಹಿಡಿಯುವವರು ಖುರ್‌ಆನಿಗನುಸಾರ ವಾಗಿ ಅಲ್ಲ, ಅದಕ್ಕೆ ವಿರುದ್ಧವಾಗಿ ವರ್ತಿಸುವರೆಂದು ಹೇಳದೆ ನಿರ್ವಾಹವಿಲ್ಲ. ಇಂಥವರ ವ್ರತಾಚರಣೆಯ ಕುರಿತು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಅಹ್ಮದ್ ಈ ರೀತಿ ಹೇಳುತ್ತಾರೆ:

"ರಂಝಾನ್ ಮಾಸದಲ್ಲಿ ರೋಗಿಯಾಗಿರುವ ಅಥವಾ ಯಾತ್ರೆ ಮಾಡುತ್ತಿರುವ ಒಬ್ಬನು ಉಪವಾಸ ಅನುಷ್ಠಿಸುತ್ತಿದ್ದರೆ ಆತನು ಅಲ್ಲಾಹನು ಖುರ್‌ಆನಿನಲ್ಲಿ ನೀಡಿರುವ ವ್ಯಕ್ತವಾದ ಅಪ್ಪಣೆಗೆ ವಿರುದ್ಧವಾಗಿ ವರ್ತಿಸುತ್ತಾನೆ. ಅದರಲ್ಲಿ, ರೋಗಿ ಅಥವಾ ಯಾತ್ರಿಕ ಉಪವಾಸ ಅನುಷ್ಠಿಸಬಾರದೆಂದೂ ರೋಗ ಉಪಶಮನವಾದ ನಂತರ ಅಥವಾ ಯಾತ್ರೆಯಿಂದ ಮರಳಿ ಬಂದ ನಂತರ ವ್ರತವನ್ನಾಚರಿಸಬೇಕೆಂದೂ ಸ್ಪಷ್ಟವಾಗಿ ಹೇಳಲಾಗಿದೆ. ಈ ಆಜ್ಞೆಯನ್ನು ಅನುಸರಿಸಬೇಕಾಗಿದೆ. ಮೋಕ್ಷ ದೈವಾನುಗ್ರಹ ಮೂಲಕ ಸಿದ್ಧಿಸುತ್ತದೆ. ಸ್ವಂತ ಕರ್ಮಶಕ್ತಿ ತೋರ್ಪಡಿಸಿ ಯಾರಿಗೂ ಅದನ್ನು ಸಂಪಾದಿಸುವರೆ ಸಾಧ್ಯವಿಲ್ಲ. ರೋಗ ಅಲ್ಪವಾದರೂ ಅಧಿಕವಾದರೂ ಯಾತ್ರೆ ಚಿಕ್ಕದಾದರೂ ದೀರ್ಘವಾದರೂ ಸರಿ, ಆಜ್ಞೆ ಎಲ್ಲಕ್ಕೂ ಅನ್ವಯಿಸುತ್ತದೆ. ಅದಕ್ಕನುಗುಣವಾಗಿ ವರ್ತಿಸುವುದು ಧರ್ಮ. ರೋಗಿಯಾಗಲಿ ಯಾತ್ರಿಕನಾಗಲಿ ಉಪವಾಸ ಅನುಷ್ಠಿಸುವನಾದರೆ ಅದನ್ನು ಆಜ್ಞಾಲ್ಲಂಘನೆಯಾಗಿ ಪರಿಗಣಿಸಬೇಕಾಗಿದೆ." (ಫತಾವಾ ಅಹ್ಮದಿಯಾ, ಪುಟ 177).

ವ್ರತಾನುಷ್ಠಾನದ ಬಾಧ್ಯತೆಯಿಂದ ವಿನಾಯತಿ ಪಡೆದವರು ಸಾಧ್ಯವಿದ್ದ ಪಕ್ಷದಲ್ಲಿ ತಮಗೆ ಬಿಟ್ಟು ಹೋದ ಪ್ರತಿಯೊಂದು ಉಪವಾಸದ ಬದಲಿಗೆ ಒಬ್ಬ ನಿರ್ಗತಿಕನಿಗೆ ಅನ್ನದಾನ ಮಾಡಬೇಕೆಂದು ಇಸ್ಲಾಂ ಆಜ್ಞಾಪಿಸುತ್ತದೆಯೆಂದು ಮೊದಲು ಹೇಳಿದೆಯಷ್ಟೆ. ಮಾತ್ರವಲ್ಲ, ಉಪವಾಸ ಕಾಲದಲ್ಲಿ ಬಡಬಗ್ಗರಿಗೆ ದಾನಧರ್ಮ ಮಾಡಲು ಮುಹಮ್ಮದ್ ಪೈಗಂಬರರು ನಿಷ್ಕರ್ಷಿಸುತ್ತಾ ಪಾವನ ಮಾದರಿ ಮೂಲಕ ದಾನಧರ್ಮದ ಮಹಿಮೆಯನ್ನು ಪ್ರಕಟಪಡಿಸಿದ್ದಾರೆ. ಈ ಅನುಶಾಸನಗಳೆಲ್ಲಾ ಸಮಾಜದ ಬಡಜನರ ಕಷ್ಟಜೀವನವನ್ನು ಲಘೂಕರಿಸಲಿಕ್ಕೂ ಅವರಿಗೆ ಆಶ್ವಾಸನೆ ಈಯಲಿಕ್ಕೂ ಇರುವ ಮಾರ್ಗಗಳಾಗಿವೆ. ಜನರ ಕ್ಷೇಮ ಈ ಪ್ರಕಾರ ಸಾಧ್ಯವಾಗಿ ಬರುವಾಗ ಸಮಾಜದ ಕ್ಷೇಮ ವೃದ್ಧಿಗೊಳ್ಳುತ್ತದೆಯೆಂಬುದು ಸ್ಪಷ್ಟ.

ವ್ರತಾನುಷ್ಠಾನದ ಕುರಿತು ವಿವರಿಸುತ್ತಾ, ಪವಿತ್ರ ಖುರ್‌ಆನ್ ಅದಕ್ಕೆ ರಂಝಾನ್ ಮಾಸದೊಂದಿಗಿರುವ ಸಂಬಂಧವನ್ನು ಹೀಗೆ ಹೇಳುತ್ತದೆ: "ಜನರಿಗೆ ಮಾರ್ಗದರ್ಶಕವಾದ ಖುರ್‌ಆನ್ ಅವತೀರ್ಣಗೊಂಡುದು ರಂಝಾನ್ ಮಾಸದಲ್ಲಾಗಿದೆ" (2:186). ಇದರಿಂದ. ಮನುಷ್ಯ ಕುಲಕ್ಕೆ ಮಾರ್ಗದರ್ಶಕವಾಗಿರುವ ಪವಿತ್ರ ಖುರ್‌ಆನ್ ಮುಹಮ್ಮದ್ ಪೈಗಂಬರರಿಗೆ ಅವತೀರ್ಣಗೊಳ್ಳಲು ತೊಡಗಿದ್ದು ರಂಝಾನ್ ಮಾಸದಲ್ಲಾಗಿತ್ತೆಂದು ತಿಳಿದು ಬರುತ್ತದೆ. ಇನ್ನೊಂದು ರೀತಿಯಲ್ಲಿ, ಇಸ್ಲಾಮಿನ ಜನ್ಮದಿನ ರಂಝಾನ್ ಮಾಸದಲ್ಲಾಗಿದೆ. ಜನರು ತಮ್ಮ ಜನ್ಮದಿನಗಳನ್ನು ಸಂತೋಷ ದಿನಗಳಾಗಿ ಆಚರಿಸುವ ರೀತಿಯಲ್ಲಿ ಸಮುದಾಯಗಳು ತಮ್ಮ ರಚನಾತ್ಮಕವಾದ ಕೆಲವು ವಿಶಿಷ್ಟ ಘಟ್ಟಗಳನ್ನು ಸಂತೋಷದಿನಗಳಾಗಿ ಆಚರಿಸುತ್ತವೆ. ಅದೇ ರೀತಿ, ಮಾನವ ಕುಲದ ಧರ್ಮಮಾರ್ಗವಾದ ಇಸ್ಲಾಮಿನ ಶಿಲಾನ್ಯಾಸದಿನ ಒಳಗೊಂಡ ರಂಝಾನ್ ತಿಂಗಳನ್ನು, ಈ ಮಹತ್ತಾದ ಅನುಗ್ರಹಲಬ್ಧಿಗಾಗಿ ದೇವನಿಗೆ ಕೃತಜ್ಞತೆ ಸಲ್ಲಿಸಲು ಪುಣ್ಯದಿನಗಳಾಗಿ ಆಚರಿಸಲು ಮುಸ್ಲಿಮರಿಗೆ ಆಜ್ಞಾಪಿಸಲಾಗಿದೆ. ಈ ರಂಝಾನ್ ಆಚರಣೆಗೆ ವಿಶೇಷ ಕರ್ಮಾನುಷ್ಠಾನವನ್ನೂ ವಿಧಿಸಲಾಗಿದೆ. ಈ ಕುರಿತು ಪ್ರಸ್ತುತ ಖುರ್‌ಆನ್ ವಾಕ್ಯದಲ್ಲೇ ಹೀಗೆ ಹೇಳಲಾಗಿದೆ: "ಅಲ್ಲಾಹು ನಿಮಗೆ ಸತ್ಪಥ ತೋರಿಸಿದುದಕ್ಕಾಗಿ ನೀವು ಅವನ ಮಹತ್ವವನ್ನು ಪ್ರಕೀರ್ತನಮಾಡಿ ಕೃತಜ್ಞತೆ ಸಲ್ಲಿಸಿರಿ" (2:186). ಪ್ರತಿಯೊಬ್ಬ ಮುಸ್ಲಿಂ ತನ್ನ ದಿನ ರಾತ್ರಿಗಳನ್ನು ಸದ್ವಿಚಾರಗಳಿಂದಲೂ ಸದಾಚಾರಗಳಿಂದಲೂ ಸುಶೋಭಿತಗೊಳಿಸಬೇಕೆಂಬುದು ಈ ರಂಝಾನ್ ಆಚರಣೆಯ ಉದ್ದೇಶ. ಪೈಗಂಬರರು ಮಾಡಿ ತೋರಿಸಿದ ಉತ್ತಮ ಮಾದರಿಗಳನ್ನು ನಾವು ಸಹ ನಮ್ಮ ಜೀವನದಲ್ಲಿ ಅಳವಡಿಸಿ ರಂಝಾನ್ ಮಾಸವನ್ನು ಜೀವಂತಮಾಡಲು ಪರಿಶ್ರಮಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ರಂಝಾನ್ ಮಾಸದ ಚಂದ್ರದರ್ಶನದ ಬಳಿಕ ಪ್ರತಿಯೊಬ್ಬ ಮುಸ್ಲಿಂ ವ್ರತಾನುಷ್ಠಾನದ ದೃಢ ನಿಶ್ಚಯದೊಂದಿಗೆ ಬೇಕಾದ ಏರ್ಪಾಡು ಮಾಡಿಕೊಂಡು ನಿದ್ರೆ ಹೋಗುತ್ತಾನೆ. ರಾತ್ರಿಯ ಅಪರಾಂಶದಲ್ಲಿ ಆತನು ಎದ್ದು 'ತಹಜ್ಜುದ್' ನಮಾಜು ಸಲ್ಲಿಸುತ್ತಾನೆ. ಅನಂತರ,

ಉಪವಾಸದಿಂದ ತನ್ನ ಶರೀರಕ್ಕೆ ಅನಾವಶ್ಯ ಪೀಡೆಯುಂಟಾಗದಿರಲಿಕ್ಕೆ, ಇಸ್ಲಾಂ ನಿರ್ದೇಶಿಸಿದ ಪ್ರಕಾರ, ಮುಂಜಾವಕ್ಕೆ ಮೊದಲು ಆಹಾರವನ್ನೇನಾದರೂ ಸೇವಿಸುತ್ತಾನೆ. ಅದರ ಬಳಿಕ ಪ್ರಭಾತ ಪ್ರಾರ್ಥನೆಯ ವರೆಗಿನ ಕಾಲವನ್ನು ದೇವಸ್ಮರಣೆಯಲ್ಲಿ ಕಳೆಯುತ್ತಾನೆ. ಪ್ರಭಾತ ಪ್ರಾರ್ಥನೆಯ ನಂತರ ಖುರ್‌ಆನ್ ಪಾರಾಯಣದಲ್ಲೂ ಇತರ ಅತ್ಯಾವಶ್ಯ ಕಾರ್ಯಗಳಲ್ಲೂ ತೊಡಗುತ್ತಾನೆ. ಆತನು ತನ್ನ ಉಪಜೀವನ ಮಾರ್ಗದಲ್ಲಿ ಇತರರೊಡನೆ ಸಂಪರ್ಕಿಸುವಾಗ ತಾನು ವ್ರತಾನುಷ್ಠಾನಿಯೆಂಬ ಪ್ರಜ್ಞೆಯನ್ನಿಟ್ಟುಕೊಂಡು ತನ್ನ ವ್ರತಕ್ಕೆ ಭಂಗಕರವಾಗಿ ಏನೂ ವರ್ತಿಸದಂತೆ ಜಾಗ್ರತೆ ವಹಿಸುತ್ತಾನೆ. ಇತರರೊಡನೆ ಜಗಳಾಡದಂತೆ, ಅನಗತ್ಯ ಕಾರ್ಯಗಳಲ್ಲಿ ತೊಡಗದಂತೆ, ನಿರರ್ಥಕ ಮಾತುಗಳನ್ನಾಡದಂತೆ ಅವನು ಎಚ್ಚರವಹಿಸುತ್ತಾನೆ. ಲೌಕಿಕವಾದ ಚಟುವಟಿಕೆಗಳಲ್ಲೆಲ್ಲಾ ತನ್ನ ವ್ರತವನ್ನು ಮುಂದಿಟ್ಟು, ದೈವ ಸಂತುಷ್ಟಿಗೆ ವಿರೋಧವಾಗಿ ವರ್ತಿಸಲು ನಾಚಿಕೆಪಟ್ಟುಕೊಳ್ಳುತ್ತಾನೆ. ಅಷ್ಟಾಗುವಾಗ ಮಧ್ಯಾಹ್ನ ಪ್ರಾರ್ಥನೆಗೆ ಸಮಯವಾಗುತ್ತದೆ. ಪ್ರಾರ್ಥನೆ ಸಲ್ಲಿಸಿದ ನಂತರ ಮೊದಲಿನಂತೆ ತನ್ನ ಕೆಲಸದಲ್ಲಿ ನಿರತನಾಗುತ್ತಾನೆ. ತುಸು ಸಮಯದ ನಂತರ ಸಾಯಾಹ್ನ ಪ್ರಾರ್ಥನೆಗೆ ಸಮಯವಾಗುತ್ತದೆ. ಕೂಡಲೇ ದೇವಶಾಸನಕ್ಕೆ ವಿಧೇಯನಾಗಿ ನಮಾಜು ನಿರ್ವಹಿಸುತ್ತಾನೆ. ಅದರ ಬಳಿಕ ದಿನಾಂತ್ಯ ಸಮೀಪಿಸುವುದಾಗಿಯೂ ತನ್ನ ವ್ರತ ಪೂರ್ಣಗೊಳ್ಳುವ ಸಮಯವಾಯಿತೆಂದೂ ಆತನು ಮನಗಾಣುತ್ತಾನೆ. ಆತನು ತುಂಬಾ ಪ್ರಜ್ಞಾವಂತನಾಗಿ ತನ್ನ ವ್ರತದ ಸಮಾಪ್ತಿ ಅಮಂಗಳವಾಗದಂತೆ ಬಹಳ ಎಚ್ಚರಿಕೆಯಿಂದ ದೇವಸ್ಮರಣೆ ಮಾಡುತ್ತಾ ಪ್ರಾರ್ಥಿಸುತ್ತಾ ಇರುತ್ತಾನೆ. ಹಾಗಿರುವಾಗ ಸೂರ್ಯ ಅಸ್ತಮಿಸಿ 'ಮಗ್‌ರಿಬ್' ನಮಾಜಿನ ಕರೆಯ ಮಧುರಧ್ವನಿ ಆತನಿಗೆ ಕೇಳಿಸುತ್ತದೆ. ಆಗ ಆತನು– ಓ ಅಲ್ಲಾಹ್, ನಿನ್ನ ಅಭೀಷ್ಟಕ್ಕಾಗಿ ನಾನು ಉಪವಾಸ ಮಾಡಿದೆ; ನೀನು ನೀಡಿದ ಆಹಾರದಿಂದ ನಾನು ಉಪವಾಸವನ್ನು ಕೊನೆಗೊಳಿಸಿದೆ ಎಂಬ ಪ್ರಾರ್ಥನಾ ವಾಕ್ಯ ಉಚ್ಚರಿಸುತ್ತಾ ಏನಾದರೂ ಆಹಾರ ಸೇವಿಸಿ ವ್ರತವನ್ನು ಪೂರ್ಣಗೊಳಿಸುತ್ತಾನೆ. ತುಸು ಹೊತ್ತಿನ ಬಳಿಕ 'ಇಶಾ' ಎಂಬ ನಿಶಾ ನಮಾಜಿಗೆ ಸಮಯವಾಗುತ್ತದೆ. ಇಶಾ ನಮಾಜಿನ ನಂತರ 'ತರಾವೀಹ್' ಪ್ರಾರ್ಥನೆ ಸಲ್ಲಿಸುತ್ತಾನೆ. ಅಷ್ಟಾಗುವಾಗ ಪುನಃ ನಿದ್ರೆಗೆ ಹೊತ್ತಾಗುತ್ತದೆ. ಹೀಗೆ ವ್ರತಾನುಷ್ಠಾನಿ ಹಗಲು ಹೊತ್ತು ಪಾನಾಶನಾದಿಗಳಿಂದೆಲ್ಲಾ ವಿರಮಿಸಿ, ನಿಶ್ಚಿತ ಸಮಯಗಳಲ್ಲಿ ಪ್ರಾರ್ಥನಾದಿಗಳಲ್ಲಿ ನಿರತನಾಗಿ, ಸಚ್ಚಿಂತನೆಯಲ್ಲೂ ಮಂಗಳಾಚರಣೆಯಲ್ಲೂ ಕಳೆದು, ರಾತ್ರಿಯಾಗುವಾಗ ಆ ಹೊತ್ತಿನಲ್ಲೂ ಶಿಷ್ಟಾಚಾರಣೆಯಲ್ಲಿ ಮಗ್ನನಾಗುತ್ತಾನೆ.

ಈ ಪ್ರಕಾರ ಉತ್ತಮ ಜೀವನ ನಡೆಸುವ ದೇವ ಭಕ್ತರಿಗೆ ಸ್ವರ್ಗದ ಬಾಗಿಲು ತೆರೆಯಲ್ಪಡುತ್ತದೆ. ಇವರು ಪ್ರಶಾಂತ ಸುಂದರವಾದ ಒಂದು ಅಭೌಮ ಜೀವನದ ಹಕ್ಕುದಾರರಾಗುತ್ತಾರೆ. ಇವರ ಸಂಬಂಧಿಸಿದ ಮಟ್ಟಿಗೆ ಪೈಶಾಚಿಕ ಶಕ್ತಿಗಳೆಲ್ಲ ಶೃಂಖಲೆಯ ಬಂಧನಕ್ಕೊಳಗಾಗುತ್ತವೆ. ಈ ಮನೋಜ್ಞವಾದ ಸನ್ನಿವೇಶವನ್ನು ಸೂಚಿಸುತ್ತಾ ಪೈಗಂಬರರು ಹೀಗೆ ಹೇಳಿದ್ದಾರೆ: "ರಮಝಾನ್ ಆರಂಭಿಸುವಾಗ ಸ್ವರ್ಗದ ಬಾಗಿಲುಗಳು ತೆರೆಯಲ್ಪಟ್ಟು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ; ಪಿಶಾಚಿಗಳು ಸಂಕಲೆಯಿಂದ ಬಂಧಿಸಲ್ಪಡುತ್ತವೆ" (ಮಿಶ್ಕಾತ್). ಒಟ್ಟಿನಲ್ಲಿ, ಇಸ್ಲಾಂ ನೀಡಿರುವ ನಿರ್ದೇಶಗಳನ್ನು ಅನುಸರಿಸಿ ವ್ರತಾನುಷ್ಠಾನವನ್ನು ಜೀವಂತಗೊಳಿಸದೆ ಕೇವಲ ಒಂದು ಸಂಪ್ರದಾಯವೆಂಬಂತೆ ಅಥವಾ ಸಮಾಜದ ನಿಂದೆಗೆ ಗುರಿಯಾಗಬಹುದೆಂಬ ಭೀತಿಯಿಂದ ಮಾತ್ರ ಆಚರಿಸುವುದಾದರೆ ಯಥಾರ್ಥ ವ್ರತದ ಗುಣಗಳು ಗೋಚರಿಸಲ್ಪಡಲಿಕ್ಕಿಲ್ಲ. ಹಾಗೆ ಆಚಾರ ಮಾತ್ರವಾಗಿರುವ ವ್ರತ ಅದನ್ನು ಅನುಷ್ಠಿಸುವವರಲ್ಲಿ ದೈವಭಕ್ತಿಯನ್ನೂ ದೈವನಿರೀಕ್ಷಣ ಸ್ವಭಾವವನ್ನೂ ಉಂಟುಮಾಡುವರೆ ಪರ್ಯಾಪ್ತವಲ್ಲ. ಶಾಂತಿ–ಸಮಾಧಾನ ಅವರ ಜೀವಿತ ವ್ಯವಹಾರದಲ್ಲಿ ಪ್ರತಿಫಲಿಸಿ ಕಾಣಲಿಕ್ಕಿಲ್ಲ. ಆದ್ದರಿಂದಲೇ ಉಪವಾಸಮಾಡುವ ಕೆಲವರನ್ನು ಬೇರೆ ಸಮಯದಲ್ಲಿ ಕಾಣಲ್ಪಡದ ದುಸ್ವಭಾವಗಳಿಂದ ಕೂಡಿದವರಾಗಿಯೂ ಶೀಘ್ರಕೋಪಿಗಳಾಗಿಯೂ ಕಾಣಲಾಗುತ್ತದೆ. ಅಂಥವರ ವ್ರತ ಕೇವಲ ಹಸಿವಿನ ವ್ರತ ಮಾತ್ರವಾಗುತ್ತದೆ. "ಅವರ ಪಾನಾಶನಾದಿ ವರ್ಜನವನ್ನು ದೇವನು ಲಕ್ಷಿಸಲಾರ" ಎಂದು ಪೈಗಂಬರರು ನುಡಿದಿರುವರು. ಅಂದರೆ, ದೇವನು ಅವರ ಉಪವಾಸವನ್ನು ಸ್ವೀಕರಿಸಲಾರ.

ಸಂಕ್ಷಿಪ್ತವಾಗಿ, ಯಥಾರ್ಥ ವ್ರತ ಎಂಬುದು ರಮಝಾನ್ ಮಾಸದಲ್ಲಿಡೀ ಲೌಕಿಕವಾದ ಎಲ್ಲಾ ಸುಖಾನುಭೋಗಗಳನ್ನು ದೈವಸಂತುಷ್ಟಿಗಾಗಿ ವರ್ಜಿಸಿ ಶಾರೀರಿಕವಾಗಿ ಒಂದು ಬಗೆಯ ತಾಪವನ್ನು ಅನುಭವಿಸುವುದರೊಂದಿಗೆ

# ಇಸ್ಲಾಮ್ ಮತ್ತು ಸಾಮಾಜಿಕ ನ್ಯಾಯ

—ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ (ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ)

ಇಸ್ಲಾಮ್ ಧರ್ಮ ಮಾನವನ ಜೀವಿತದ ಪ್ರತಿಯೊಂದು ಸನ್ನಿವೇಶದ ಕುರಿತು ಮಾರ್ಗದರ್ಶನ ನೀಡುತ್ತಿದ್ದು ಪ್ರತಿಯೊಬ್ಬ ಮುಸ್ಲಿಮನು ಸಮಗ್ರವಾದೊಂದು ವ್ಯಕ್ತಿತ್ವವನ್ನು ಬೆಳೆಸುವಂತೆ ಅದು ಸಹಾಯ ಮಾಡುತ್ತದೆ. ಪ್ರತಿಯೊಬ್ಬ ಮುಸ್ಲಿಮನು "ತಖ್ವಾ" ಹೊಂದಲು ಪ್ರಯತ್ನಶೀಲನಾಗಬೇಕೆಂದು ಅದು ಒತ್ತಾಯಿಸುತ್ತದೆ. ದೇವರ ಕುರಿತು ಮನುಷ್ಯನಿಗಿರುವ ಕರ್ತವ್ಯಬೋಧ ಸದಾ ಜಾಗರೂಕವಾಗಿರುವಂತೆ ಮಾಡುವ ಧಾರ್ಮಿಕ ಪ್ರಜ್ಞೆಯೇ "ತಖ್ವಾ" ಎಂಬುದರ ಅನೇಕ ಅರ್ಥಗಳಲ್ಲಿ ಒಂದು. "ತಖ್ವಾ"ವನ್ನು ಹೊಂದಿದ ಮುಸ್ಲಿಮನು ಪ್ರತಿಯೊಬ್ಬನಿಗೂ ಆತನ ನ್ಯಾಯವಾದ ಹಕ್ಕನ್ನು ನೀಡಲು ಸದಾ ಉತ್ಸುಕನಾಗಿರುತ್ತಾನೆ. ಇದು ಪ್ರತಿಯೊಂದು ಸಂಬಂಧದಲ್ಲಿಯೂ ಪ್ರತಿಯೊಂದು ಸನ್ನಿವೇಶದಲ್ಲಿಯೂ ನ್ಯಾಯವನ್ನು ನೆಲೆನಿಲ್ಲಿಸುತ್ತದೆ.

ಅಲ್ಲಾಹನು ನ್ಯಾಯಯುತವಾಗಿ ವರ್ತಿಸಲು ಆಜ್ಞಾಪಿಸಿರುವನು (ಪವಿತ್ರ ಖುರ್‌ಆನ್ 7:30). ಅವನು ನ್ಯಾಯಯುತವಾಗಿ ನಡೆಯುವವರನ್ನು ಪ್ರೀತಿಸುತ್ತಾನೆ. (ಪ. ಖು. 5:43;49:10;60:9). ಅವನು ಅನ್ಯಾಯವಾಗಿ ವರ್ತಿಸುವವರನ್ನೂ ದೌರ್ಜನ್ಯಗಾರರನ್ನೂ ಸ್ನೇಹಿಸುವುದಿಲ್ಲ (ಪ. ಖು. 3:58;3:141).

ಇಸ್ಲಾಮ್ ಧರ್ಮ ಉದ್ದೇಶಿತ ಗುರಿಯನ್ನು ತಲುಪಲು ಕೇವಲ ಉಪದೇಶ ಮಾತ್ರ ನೀಡುವುದಲ್ಲ, ಅದು ಮಾಗದರ್ಶಕ ದಾರಿಗಂಭಗಳನ್ನು ಸ್ಥಾಪಿಸಿ ಎಚ್ಚರಿಕೆಗಳನ್ನೂ ನೀಡುತ್ತದೆ:

"ನಮ್ಮ ದಾರಿಯಲ್ಲಿ ಪ್ರಯತ್ನಶೀಲರಾಗುವವರಿಗೆ ನಾವು ಮಾರ್ಗದರ್ಶನ ನೀಡುವೆವು; ಸತ್ಕರ್ಮಶೀಲರ ಜೊತೆ ದೇವರಿದ್ದಾನೆ." (ಪ.ಖು. 29:70).

"ಖಂಡಿತವಾಗಿಯೂ ನಿನ್ನ ಬಳಿಗೆ ಅಲ್ಲಾಹನಿಂದ ಪ್ರಕಾಶವೂ ಸುಸ್ಪಷ್ಟವಾದ ಗ್ರಂಥವೂ ಬಂದಿದೆ. ಅದರ ಮುಖಾಂತರ ಅಲ್ಲಾಹು ಅವನ ತೃಪ್ತಿಯನ್ನು ಶಾಂತಿಯುತವಾದ ದಾರಿಯಿಂದ ಗಳಿಸಲೆತ್ನಿಸುವವರಿಗೆ ಮಾರ್ಗದರ್ಶನ ನೀಡಿ ಅವರನ್ನು ಪ್ರತಿಯೊಂದು ವಿಧದ ಕತ್ತಲೆಯಿಂದ ಬೆಳಕಿನೆಡೆಗೆ ತನ್ನಿಚ್ಛೆಯಂತೆ ಮಾರ್ಗದರ್ಶನ ನೀಡುತ್ತಾ ನೇರವಾದ ಪಥದ ಕಡೆಗೊಯ್ಯುತ್ತಾನೆ. (ಪ. ಖು. 15:16,17).

ಇಸ್ಲಾಮ್ ಧರ್ಮ ನಿರ್ಬಂಧಕರವಾದ ನಿಯಮಗಳ ಮೂಲಕ ಸಮಾಜದ ಮೂಲಭೂತ ಚೌಕಟ್ಟನ್ನು ನಿರ್ಮಿಸಿ ಅದು ಜನರ ಸ್ವಯಂ ಸ್ಫೂರ್ತಿಯಿಂದ ಮಾಡಬಹುದಾದ ಕೆಲಸಗಳಿಂದ ಪೂರ್ಣಗೊಳ್ಳುವಂತೆ ಒತ್ತಾಯ

---

( 11ನೇ ಪುಟದಿಂದ )

ದೈವಾಜ್ಞೆಗಳನ್ನು ಅನುಸರಿಸಲು ಸಿದ್ಧನಾಗಿದ್ದುಕೊಂಡು ಹೃದಯದಲ್ಲಿ ಆಧ್ಯಾತಿಕ ತಾಪವನ್ನು ಉಂಟುಮಾಡುವಾಗ ರೂಪಗೊಳ್ಳುವುದಾಗಿದೆ. ಎರಡು ಕಡೆಗಳಿಂದಿರುವ ಈ ತಾಪ ವ್ರತಾನುಷ್ಠಾನಿಯಲ್ಲಿ ಸಮ್ಮಿಳಿತಗೊಳ್ಳುವಾಗ ಆತನ ಜೀವನದಲ್ಲಿ 'ರಮಝಾನ್' ಉಪಸ್ಥಿತವಾಗುತ್ತದೆ. ಈ ಆಧ್ಯಾತ್ಮಿಕವಾದ ರಮಝಾನಿನ ಕುರಿತು ಹಝ್ರತ್ ಅಹ್ಮದ್ ನೀಡಿದ ಪಾಠ ಇದಾಗಿದೆ:

"ರಮಝ್ ಎಂದರೆ ಸೂರ್ಯತಾಪ ಎಂದರ್ಥ. ರಮಝಾನಿನಲ್ಲಿ ವ್ರತಾನುಷ್ಠಾನಿ ಒಂದು ಕಡೆಯಲ್ಲಿ ಹಗಲಿಡೀ ಭಕ್ಷ್ಯಪೇಯಾದಿಗಳನ್ನೂ ಶಾರೀರಿಕವಾದ ಎಲ್ಲಾ ಸುಖಾನುಭೋಗಗಳನ್ನೂ ಪರಿತ್ಯಜಿಸುವಾಗ, ಇನ್ನೊಂದು ಕಡೆಯಲ್ಲಿ ದೈವಶಾಸನಗಳನ್ನು ಅನುಸರಿಸಲಿಕ್ಕಾಗಿ ತನ್ನಲ್ಲಿ ಒಂದು ಬಗೆಯ ತಾಪವನ್ನೂ ಆವೇಶವನ್ನೂ ಉಂಟುಮಾಡುತ್ತಾನೆ. ಈ ಆಧ್ಯಾತ್ಮಿಕವೂ ಶಾರೀರಿಕವೂ ಆದ 'ತಾಪದ್ವಯ'ದ ಸಂಯೋಜನೆಯಲ್ಲಿ 'ರಮಝಾನ್' ಉತ್ಪನ್ನವಾಗುತ್ತದೆ" (ಮಲ್‌ಫೂಝಾತ್, ಸಂಪುಟ 1, ಪುಟ 201–202).

ಪೂರ್ವಕವಾದ ನಿರ್ದೇಶನಗಳನ್ನು ನೀಡುತ್ತದೆ. ಇದರಿಂದಾಗಿ ಬಹಳ ದೊಡ್ಡ ಮನೋವೈಜ್ಞಾನಿಕ ಪರಿಣಾಮ ಉಂಟಾಯಿತು. ಸಾಮಾಜಿಕ ಕರ್ತವ್ಯಗಳು ಯೋಗ್ಯ ರೀತಿಯಲ್ಲಿ ಪೂರ್ತಿಯಾಗಿ ನಿರ್ವಹಿಸಲ್ಪಡಬೇಕಾದರೆ ಅವುಗಳ ನೈತಿಕ ಮೌಲ್ಯಗಳ ಕುರಿತು ಉತ್ಸಾಹಶಾಲಿ ಪ್ರಜ್ಞೆ ಅತ್ಯಾವಶ್ಯಕವೆಂದೂ ಕೇವಲ ನಿಯಮಗಳನ್ನು ರಚಿಸುವುದರಿಂದ ಮಾತ್ರ ಇದು ಸಾಧ್ಯವಾಗಲಾರದೆಂದೂ ಇಲ್ಲಿ ನಾವು ಒತ್ತಿ ಹೇಳಬೇಕಾಗುತ್ತದೆ. ಇಸ್ಲಾಮ್ ಧರ್ಮ ಇವೆರಡನ್ನೂ ಒದಗಿಸಿ ಕೊಡುತ್ತದೆ.

ಮಾನವ ಸಮಾಜ ಹಲವು ಮುಖಗಳನ್ನು ಹೊಂದಿದ್ದು ಮನುಷ್ಯನ ಕರ್ತವ್ಯಗಳು ವಿವಿಧ ವಿಭಾಗಗಳಿಗೆ ವಿಸ್ತರಿಸಿವೆ. ನಾವು ಕೆಲವು ಉದಾಹರಣೆಗಳನ್ನು ಸಂಕ್ಷಿಪ್ತವಾಗಿ ನೀಡಬಯಸುತ್ತೇವೆ. ಮಾನವ ಚರಿತ್ರೆಯ ಆರಂಭ ದಶೆಯಲ್ಲಿ ಮನುಷ್ಯನಿಗೆ ಅವನ ಅತಿ ಪ್ರಾಥಮಿಕ ಆವಶ್ಯಕತೆಗಳ ಕುರಿತು ಏರ್ಪಾಡು ಮಾಡಲು ಆಜ್ಞಾಪಿಸಲಾಯಿತು. ಆಹಾರ, ಬಟ್ಟೆ ಮತ್ತು ವಸತಿ ಇವುಗಳೇ ಮಾನವನ ಪ್ರಾಥಮಿಕ ಆವಶ್ಯಕತೆಗಳಾಗಿವೆ. (ಪ. ಖು. 20:119,120). ಈ ಉಪದೇಶದ ಪ್ರಕಾರ ಇಸ್ಲಾಮ್ ಧರ್ಮ ಜಗತ್ತಿನಲ್ಲಿ 14 ನೂರು ವರ್ಷಗಳ ಹಿಂದೆಯೇ ಪ್ರಥಮ ಕಲ್ಯಾಣ ರಾಷ್ಟ್ರ (Welfare State) ಸ್ಥಾಪಿಸಿ ಅದು ಪ್ರತಿಯೊಬ್ಬ ವ್ಯಕ್ತಿಯ ಈ ಆವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿ ವಹಿಸಿತು.

ರಾಜ್ಯದ ಈ ಸಾಮಾಜಿಕ ಸೇವೆಗೆ ಏರ್ಪಡಿಸಿದ ಆರ್ಥಿಕ ಮೂಲ ಝಕಾತ್ ತೆರಿಗೆಯಾಗಿದ್ದು ಅದು ಸಂಪತ್ತಿನ ಮೇಲೆ ಶೇಕಡ 2½ ಯಂತೆ ವಿಧಿಸಲ್ಪಡುತ್ತಿದೆ. ಝಕಾತ್ ಎಂಬುದರ ಅರ್ಥ "ಪರಿಶುದ್ಧಗೊಳಿಸುವಿಕೆ ಮತ್ತು ಪೋಷಣೆ" ಎಂದಾಗಿದೆ. ಇಸ್ಲಾಮಿನ ಆರ್ಥಿಕ ನೀತಿಯ ಪ್ರಕಾರ ಎಲ್ಲಾ ವಿಧದ ಸಂಪತ್ತಿನ ಪಾಲು ಸಮಾಜದ ಸರ್ವರಿಗೂ ದೊರೆಯಬೇಕಾಗಿದ್ದು ಅದು ಧನಿಕನಿಗೂ ಆತನ ಕೆಲಸಗಾರರಿಗೂ ಮಾತ್ರವಲ್ಲ ಅದರ ಒಂದು ಪಾಲು ಸಮಾಜಕ್ಕೂ ದೊರೆಯುವುದು ಅತ್ಯಾವಶ್ಯಕವಾಗಿದೆ. ಝಕಾತ್ ಮೂಲಕ ಸಮಾಜಕ್ಕೆ ಪಾಲು ದೊರೆಯುತ್ತದೆ. ಇದನ್ನು ಪಾವತಿ ಮಾಡಿದ ನಂತರ ಬಾಕಿ ಉಳಿಯುವ ಮೊಬಲಗು ಪರಿಶುದ್ಧಗೊಂಡು ಅದು ಭಂಡವಾಳಗಾರರೂ ಕೆಲಸಗಾರರೂ ಹಂಚಿಕೊಳ್ಳುವುದು ನ್ಯಾಯಸಮ್ಮತವಾಗುತ್ತದೆ.

ಝಕಾತ್ ಎಂಬುದು ನಿರ್ಬಂಧಕರವಾದ ಮತ್ತು ಹೋಲಿಸಿ ನೋಡಿದರೆ ಕಮ್ಮಿ ಪ್ರಮಾಣದ ಏರ್ಪಾಡಾಗಿದೆ. ಆದರೆ ಸ್ವಯಂ ಸ್ಫೂರ್ತಿಯಿಂದ ನೀಡಬಹುದಾದ ದಾನಗಳು ಹೆಚ್ಚು ವಿಸ್ತಾರವಾದುದೂ ವಿವಿಧ ರೀತಿಯವುಗಳೂ ಆಗಿವೆ. ಇದು ಕೇವಲ ಹಣ ಸಂಬಂಧವಾದ ಅನುಗ್ರಹಗಳ ಹಂಚುವಿಕೆ ಮಾತ್ರವಲ್ಲ ಇತರ ದೈವಿಕ ಅನುಗ್ರಹಗಳ ವಿತರಣೆಯನ್ನೂ ಒಳಗೊಂಡಿದೆ: ಧನ, ಆಸ್ತಿ, ಐಶ್ವರ್ಯ, ಬುದ್ಧಿಶಕ್ತಿ, ಜ್ಞಾನ, ಶಕ್ತಿ, ಭಾವೋದ್ವೇಗಗಳು ಮತ್ತು ಸ್ವಯಂ ಆತ್ಮ ಇವುಗಳನ್ನು ಸಾಮಾಜಿಕ ಮೇಲ್ಮೆಗಾಗಿ ಉಪಯೋಗಿಸುವುದು. "ನಾವು ನೀಡಿದುದರಿಂದ ಖರ್ಚು ಮಾಡುವವರು" (ಪ. ಖು. 2:4) ಎಂದು ದೇವರು ವಿವರಿಸಿದಂತೆ ನಿಜವಾದ ಭಕ್ತರು ತಮಗೆ ದೇವರು ಕೊಟ್ಟುದನ್ನೆಲ್ಲಾ ಸಮಾಜದ ಏಳಿಗೆಗೆ ಖರ್ಚು ಮಾಡುತ್ತಾರೆ. ಸ್ವಯಂ ಸ್ಫೂರ್ತಿಯಿಂದ ಸಮಾಜಕ್ಕಾಗಿ ಖರ್ಚು ಮಾಡಲು ಪವಿತ್ರ ಖುರ್‌ಆನ್ ನೀಡುವ ಉಪದೇಶಗಳ ಒಂದು ಮಾದರಿಯನ್ನು ನೋಡಿರಿ:

> "ದೇವರ ಮಾರ್ಗದಲ್ಲಿ ಖರ್ಚು ಮಾಡುವವರ ಉದಾಹರಣೆ ಒಂದು ಧಾನ್ಯದಿಂದ ಅಂಕುರಿಸಿದ ಏಳು ತೆನೆಗಳಿಗೆ ಸಮಾನ; ಪ್ರತಿಯೊಂದು ತೆನೆಯಲ್ಲಿ ಒಂದು ನೂರು ಧಾನ್ಯಗಳು; ದೇವರು ತಾನಿಚ್ಛಿಸುವವರಿಗೆ ಅದಕ್ಕಿಂತಲೂ ಹೆಚ್ಚಿನ ಗುಣಕಗಳಲ್ಲಿ ನೀಡುವನು; ದೇವರು ಅನುಗ್ರಹದಾತನೂ ಸರ್ವಜ್ಞನೂ ಆಗಿರುವನು." (2:262)

ಖರ್ಚು ಮಾಡುವುದು ಸೇವೆ ಮತ್ತು ನಮ್ರತಾ ಭಾವನೆಯಿಂದಾಗಿದ್ದು ದೇವರ ಪ್ರೀತಿಯನ್ನು ಗಳಿಸುವ ಏಕಮಾತ್ರ ಉದ್ದೇಶದಿಂದಾಗಿರಬೇಕು.

> "ದೇವರ ಮಾರ್ಗದಲ್ಲಿ ಖರ್ಚು ಮಾಡುವವರು ಅನಂತರ ತಾವು ಖರ್ಚು ಮಾಡಿದುದರ ಕುರಿತು ಯಾವುದೇ ನಿಂದನೆ ಅಥವಾ ಕೀಟಲೆಯನ್ನುಂಟು ಮಾಡದಿದ್ದರೆ ಅವರಿಗೆ ದೇವರು ಪ್ರತಿಫಲ ನೀಡುವನು. ಅವರಿಗೆ ಯಾವುದೇ ಭಯವಾಗಲೀ ಚಿಂತೆಯಾಗಲೀ ಇರದು. ದಯಾಭರಿತವಾದ ಮಾತು ಮತ್ತು ಕ್ಷಮಾಪಣೆ ದಾನ ನೀಡಿದ ನಂತರ ಉಪಟಳಕ್ಕಿಂತ ಉತ್ತಮವಾಗಿದೆ. ದೇವರು ಸ್ವಯಂ ಪೂರ್ಣನೂ ಸಹನೆಯುಳ್ಳವನೂ ಆಗಿರುವನು. ಓ ಸತ್ಯ ವಿಶ್ವಾಸಿಗಳೇ, ನೀವು ನಿಮ್ಮ ದಾನಗಳನ್ನು

ನಿಂದನೆಯ ಮೂಲಕವೂ ಉಪದ್ರ ನೀಡುವ ಮೂಲಕವೂ ವ್ಯರ್ಥಗೊಳಿಸಬೇಡಿರಿ. ಜನರಿಗೆ ತೋರಿಸಿಕೊಳ್ಳಲಿಕ್ಕಾಗಿ ಧನವನ್ನು ವ್ಯಯಮಾಡುವ, ದೇವರಲ್ಲಾಗಲೀ ಅಂತಿಮ ದಿನದ ಕುರಿತಾಗಲೀ ವಿಶ್ವಾಸವಿಲ್ಲದವನಂತೆ ನೀವು ಆಗಬೇಡಿರಿ. ಆತನ ಉದಾಹರಣೆ ನುಣುಪಾದ ಬಂಡೆಗಲ್ಲಿನ ಮೇಲಿರುವ ಮಣ್ಣಿನಂತಾಗಿದ್ದು ಅದರ ಮೇಲೆ ಜಡಿ ಮಳೆ ಸುರಿದಾಗ ಮಣ್ಣೆಲ್ಲಾ ಕೊಚ್ಚಿಹೋಗಿ ಬಾಕಿಯಾಗುವ ಕಠಿಣವಾದ ಬಂಡೆಗಲ್ಲಿನಂತೆ. ಅಂತಹ ಜನರು ತಾವು ಮಾಡಿದುದರ ಪ್ರತಿಫಲ ಗಳಿಸಲು ಅಸಮರ್ಥರಾಗುತ್ತಾರೆ." (2:263-265)

ತದ್ವಿರುದ್ಧವಾಗಿ,

"ದೇವರ ಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ತಮ್ಮ ಆತ್ಮಸ್ಥೈರ್ಯ ಕಾಪಾಡಲಿಕ್ಕಾಗಿ ಧನ ವ್ಯಯಮಾಡುವವರ ಉದಾಹರಣೆ ಎತ್ತರವಾದ ಸ್ಥಳದಲ್ಲಿರುವ ಒಂದು ತೋಟದಂತೆ. ಜಡಿಮಳೆ ಅದರ ಮೇಲೆ ಸುರಿದರೆ ಆ ತೋಟ ಇಮ್ಮಡಿಯಾಗಿ ಫಲಭೂಯಿಷ್ಠವಾಗುತ್ತದೆ. ಜಡಿಮಳೆ ಸುರಿಯದಿದ್ದರೆ ಹನಿಮಳೆ ಸಾಕಾಗುತ್ತದೆ. ನೀವು ಮಾಡುವುದನ್ನೆಲ್ಲಾ ಅಲ್ಲಾಹನು ನೋಡುತ್ತಿರುವನು"

(2:266)

ಜಿಪುಣತನವನ್ನು ಪವಿತ್ರ ಖುರ್‌ಆನ್ ಬಲವತ್ತಾಗಿ ಖಂಡಿಸಿದೆ:

"ಒಬ್ಬನಿಗೊಂದು ಖರ್ಜೂರ ಮತ್ತು ದ್ರಾಕ್ಷೆಯ ತೋಟವಿದ್ದು ಅದರ ಕೆಳಭಾಗದಲ್ಲಿ ನದಿಗಳು ಹರಿಯುತ್ತಿದ್ದು ಆ ತೋಟದಲ್ಲಿ ಸರ್ವವಿಧದ ಫಲಗಳು ದೊರಕುತ್ತಾ ಇದ್ದು, ಆತ ವೃದ್ಧಾಪ್ಯ ಹೊಂದಿ ಎಳೆಯ ಮಕ್ಕಳಿದ್ದು, ಉಷ್ಣಭರಿತ ಬಿರುಗಾಳಿ ಬೀಸಿ ಆ ತೋಟ ಬೆಂದು ಹೋದರೆ ನಿಮ್ಮ ಪೈಕಿ ಯಾರಾದರೂ ಇಷ್ಟಪಡುವಿರೋ ? ಈ ಪ್ರಕಾರ ದೇವರು ತನ್ನ ದೃಷ್ಟಾಂತಗಳನ್ನು ನಿಮ್ಮ ಚಿಂತನೆಗಾಗಿ ಸ್ಪಷ್ಟಪಡಿಸುತ್ತಾನೆ." (2:267)

ದಾನ ಮಾಡುವುದರಿಂದ ದೇವರ ಪ್ರೀತಿಯನ್ನು ಗಳಿಸಬೇಕಾದರೆ ಆ ದಾನದ ವಸ್ತು ದಾನಿಯ ದೃಷ್ಟಿಯಲ್ಲಿ ಉಪಯೋಗ ಶೂನ್ಯವಾಗಿರಬಾರದು :

"ನೀವು ಪ್ರೀತಿಸುವುದನ್ನು ತ್ಯಾಗ ಮಾಡುವ ತನಕ ನೀವು ಸತ್ಕರ್ಮಶೀಲರಾಗಲಾರಿರಿ. ನೀವು ಯಾವ ವಸ್ತುಗಳನ್ನೆಲ್ಲಾ ಖರ್ಚು ಮಾಡುತ್ತೀರೋ ಅದನ್ನೆಲ್ಲಾ ಅಲ್ಲಾಹು ತಿಳಿದಿರುತ್ತಾನೆ." (3:93)

"ಓ ಸತ್ಯ ವಿಶ್ವಾಸಿಗಳೇ, ನೀವು ಗಳಿಸಿದ ಉತ್ತಮ ವಸ್ತುಗಳಿಂದಲೂ ನಿಮಗಾಗಿ ನಾವು ಭೂಮಿಯಿಂದ ಬೆಳೆಯಿಸಿ ಕೊಟ್ಟುದರಿಂದಲೂ ಖರ್ಚು ಮಾಡಿರಿ. ನೀವು ಸ್ವತಃ ಸ್ವೀಕರಿಸಲು ಇಷ್ಟಪಡದ ನಿಕೃಷ್ಟ ವಸ್ತುಗಳನ್ನು ದಾನವಾಗಿ ನೀಡಬೇಡಿರಿ. ನಿಮ್ಮ ಕಣ್ಣು ತಪ್ಪಿ ಆ ರೀತಿ ಆದರೆ ಹೊರತು. ದೇವನು ಸ್ವಯಂಪೂರ್ಣನೂ ಸ್ತುತ್ಯನೂ ಆಗಿರುವನೆಂದು ತಿಳಿಯಿರಿ. ಶೈತಾನನು ನಿಮಗೆ ದಾರಿದ್ರ್ಯದ ಬೆದರಿಕೆ ನೀಡಿ ನಿಮ್ಮನ್ನು ಅನೀತಿಯಿಂದ ವರ್ತಿಸಲು ಪ್ರೇರೇಪಿಸುತ್ತಾನೆ. ದೇವನು ನಿಮಗೆ ಕ್ಷಮೆಯ ಮತ್ತು ಅನುಗ್ರಹದ ವಚನ ನೀಡುತ್ತಾನೆ. ದೇವನು ಅನುಗ್ರಹದಾತನೂ ಸರ್ವಜ್ಞನೂ ಆಗಿದ್ದಾನೆ. ತಾನು ಇಚ್ಛಿಸುವವನಿಗೆ ಅವನು ಜ್ಞಾನವನ್ನು ನೀಡುತ್ತಾನೆ. ವಿವೇಚನೆ ನೀಡಲ್ಪಟ್ಟವನಿಗೆ ಅತ್ಯಧಿಕ ಅನುಗ್ರಹ ನೀಡಲ್ಪಟ್ಟಿದೆ. ತಿಳುವಳಿಕೆಯಿದ್ದವರು ಹೊರತು ಬೇರೆ ಯಾರೂ ಗಮನಿಸುವುದಿಲ್ಲ." (2:268–270).

ಬಹಿರಂಗವಾಗಿ ದಾನ ಮಾಡುವುದು ಉತ್ತಮ. ಆದರೆ ರಹಸ್ಯವಾಗಿ ದಾನ ನೀಡುವುದು ಇನ್ನಷ್ಟು ಉತ್ತಮ. (ಪ. ಖು. 2:272).

"ತಮ್ಮ ಐಶ್ವರ್ಯವನ್ನು ರಾತ್ರೆ, ಹಗಲು, ರಹಸ್ಯವಾಗಿಯೂ ಬಹಿರಂಗವಾಗಿಯೂ ವ್ಯಯ ಮಾಡುವವರಿಗೆ ದೇವರು ಉಡುಗೊರೆ ನೀಡುವನು. ಅವರಿಗೆ ಯಾವುದೇ ಭಯವಾಗಲೀ ಚಿಂತೆಯಾಗಲೀ ಇರದು." (2:275)

ಹಣದ ಕೊರತೆಯಿರುವವನಿಗೆ ಸಾಲ ನೀಡುವುದು ಪ್ರಶಂಸಾರ್ಹವಾಗಿದೆ. ಈ ರೀತಿ ಕೊಡುವ ಸಾಲ ಕೇವಲ ಸಹಾಯ ರೂಪದಲ್ಲಿರಬೇಕು. ಸಾಲ ಪಡಕೊಂಡವನನ್ನು ಸಾಲವನ್ನು ನಿಶ್ಚಿತ ಸಮಯದಲ್ಲಿ ಮರಳಿ ಕೊಡುವ ಕರ್ತವ್ಯದ ಹೊರತು ಇನ್ನಾವುದೇ ಒತ್ತಾಯಕ್ಕೆ ಗುರಿ ಮಾಡಬಾರದು. (2:283). ಯಾವುದೇ ಬಡ್ಡಿ ವಸೂಲು

ಮಾಡಬಾರದು (2:276,279); ಬೇರೆ ಯಾವುದೇ ಲಾಭ ಅಥವಾ ಪ್ರತಿಫಲ ಕೇಳಲೂ ಬಾರದು ಅಥವಾ ಸ್ವೀಕರಿಸಲೂ ಬಾರದು (74:7).

ಸಾಲದ ಹಣ ಹಿಂದಿರುಗಿಸಬೇಕಾದ ತಾರೀಕು ಹತ್ತಿರವಾದಾಗ ಸಾಲಪಡಕೊಂಡವ ತನ್ನ ಕರ್ತವ್ಯವನ್ನು ಪೂರೈಸಲು ಅಸಮರ್ಥನಾದರೆ,

"ಆತನಿಗೆ ಸಾಲ ಮರುಪಾವತಿ ಮಾಡಲು ಸಾಧ್ಯ ವಾಗುವ ವರೆಗೆ ವಾಯಿದೆ ನೀಡಿರಿ. ನೀವು ಸಾಲ ವನ್ನು ದಾನವನ್ನಾಗಿ ನೀಡಿದರೆ ಆ ಸಂಗತಿ ನಿಮಗೆ ಮನದಟ್ಟಾಗುವುದಾದರೆ ಅತ್ಯುತ್ತಮವಾಗಿರು ವುದು. ನೀವು ದೇವನ ಕಡೆಗೆ ಹಿಂದಿರುಗಬೇಕಾದ ದಿನದ ಕುರಿತು ಭಯಭೀತರಾಗಿರಿ. ಪ್ರತಿಯೊಂದು ಆತ್ಮ ಗಳಿಸಿದುದನ್ನು ಆ ದಿನ ಪೂರ್ಣವಾಗಿ ನೀಡ ಲಾಗುವುದು; ಆದರೆ ಯಾವುದೇ ದೌರ್ಜನ್ಯ ನಡೆ ಯದು" (2:281,282).

ಜಿಪುಣತೆಯನ್ನೂ ದುಂದುವೆಚ್ಚವನ್ನೂ ಪವಿತ್ರ ಖುರ್‌ಆನ್‌ನಲ್ಲಿ ತೀವ್ರವಾಗಿ ಖಂಡಿಸಲಾಗಿದೆ:

"ನಿಮ್ಮ ಸಂಬಂಧಿಕರಿಗೆ ಅವರ ಹಕ್ಕುಗಳನ್ನು ನೀಡಿರಿ, ಅದೇ ರೀತಿ ಬಡವರಿಗೂ ದಾರಿ ಹೋಕ ರಿಗೂ ನೀಡಿರಿ. ಆದರೆ ಅನಾವಶ್ಯವಾಗಿ ದುಂದು ವೆಚ್ಚ ಮಾಡಬೇಡಿರಿ." (17:27)

ಒಬ್ಬನಿಗೆ ಸಹಾಯ ನೀಡಲು ಸಾಧ್ಯವಿಲ್ಲದಿದ್ದರೆ ಅವನು ಸಹಾನುಭೂತಿಯನ್ನಾದರೂ ತೋರಿಸಬೇಕು (17:29). ಮಧ್ಯ ಮಾರ್ಗವನ್ನು ಸ್ವೀಕರಿಸಲು ಪವಿತ್ರ ಖುರ್‌ಆನ್ ನಿರ್ದೇಶಿಸುತ್ತದೆ (17:30;25:68). ಆದರೆ ದಾನವನ್ನು ಅಪೇಕ್ಷಿಸುವವನನ್ನು ಎಂದಿಗೂ ನಿಂದಿಸ ಬಾರದು (93:11).

ಐಶ್ವರ್ಯ ವಿಶಾಲವಾಗಿ ಚಲಾವಣೆ ಹೊಂದ ಬೇಕು. ಅದು ಕೆಲವೇ ಜನರ ಸ್ವಾಮಿತ್ವಕ್ಕೆ ಸೀಮಿತವಾಗಿ ರಬಾರದು (59:8). ದಾಸ್ತಾನುಗಾರಿಕೆಯನ್ನು ತೀವ್ರ ವಾಗಿ ಖಂಡಿಸಲಾಗಿದ್ದು ಅತ್ಯಂತ ವೇದನಕರವಾದ ಶಿಕ್ಷೆಯ ಮುನ್‌ಸೂಚನೆ ನೀಡಲಾಗಿದೆ.

"ಬಂಗಾರ ಮತ್ತು ಬೆಳ್ಳಿಯನ್ನು ಸಂಗ್ರಹಿಸಿ ಅವು ಗಳನ್ನು ದೈವಪಥವಲ್ಲಿ ವಿನಿಯೋಗಿಸದವರಿಗೆ ದೊರಕುವ ವೇದನೆಯಿಂದ ಕೂಡಿದ ಶಿಕ್ಷೆಯ ಕುರಿತು ಮುನ್ನೆಚ್ಚರಿಕೆ ನೀಡು. ಅವರು ಶೇಖರಿಸಿಟ್ಟ ನಿಧಿ ಯನ್ನು ನರಕಾಗ್ನಿಯಿಂದ ಕಾಯಿಸಿ ಅವರ ಹಣೆ ಗಳನ್ನೂ ಅವರ ಪಾರ್ಶ್ವಗಳನ್ನೂ ಅವರ ಬೆನ್ನು ಗಳನ್ನೂ ಕಾದ ಆ ವಸ್ತುಗಳಿಂದ ಮುದ್ರೆಯೊತ್ತ ಲಾಗುವುದು. ಅವರಿಗೆ ಹೇಳಲಾಗುವುದು: ನೀವು ನಿಮಗಾಗಿ ಶೇಖರಿಸಿದ ವಸ್ತುಗಳು ಇವುಗಳಾಗಿವೆ. ಆದ್ದರಿಂದ ನೀವು ಶೇಖರಿಸಿದ ವಸ್ತುಗಳಿಂದಲೇ ಶಿಕ್ಷೆ ಅನುಭವಿಸಿರಿ." (9 : 34, 35)

ಇಸ್ಲಾಮಿನ ಆರ್ಥಿಕ ನೀತಿಯ ಮೂಲ ತತ್ವವನ್ನು ಕೇವಲ ಒಂದು ಶಬ್ದದಿಂದ ವ್ಯಕ್ತಗೊಳಿಸಲಾಗಿದೆ.

"ದೇವರ ಮಾರ್ಗದಲ್ಲಿ ಏನನ್ನು ಖರ್ಚು ಮಾಡ ಬೇಕೆಂದು ಅವರು ಕೇಳುತ್ತಾರೆ. (ಓ ಪೈಗಂಬರ್) ನೀನು ಹೇಳು: 'ಮಿಗಿತೆಯಾದುದು'. ದೇವರು ತನ್ನ ಆಜ್ಞೆಗಳನ್ನು ಈ ರೀತಿ ವ್ಯಕ್ತಗೊಳಿಸಿ ನೀವು ಚಿಂತಿ ಸುವಂತೆ ಮಾಡುತ್ತಾನೆ." (2:220).

ಸುಖಲೋಲುಪತೆ ಮತ್ತು ದುಂದುವೆಚ್ಚವನ್ನು ಇಸ್ಲಾಮ್ ಧರ್ಮ ಖಂಡಿಸಿರುವುದರಿಂದ "ಮಿಗತೆಯಾ ದುದು" (ಅಲ್ ಅಫ್‌ವ್) ಎಂಬ ಶಬ್ದದ ಅರ್ಥ ಒಬ್ಬನ ಸ್ವಂತ ಮತ್ತು ಆತನನ್ನು ಹೊಂದಿಕೊಂಡಿರುವವರ ಸಾಮಾನ್ಯ ಆವಶ್ಯಕತೆಗಳನ್ನು ಪೂರೈಸಿ ಮಿಗತೆಯಾಗುವ ಅಥವಾ ಉಳಿಯುವ ಸಂಪತ್ತು ಎಂದರ್ಥ.

ದೇವರ ಮಾರ್ಗದಲ್ಲಿ ಖರ್ಚು ಮಾಡುವ ರೀತಿಗಳು ವಿವಿಧವಾಗಿವೆ:

"ಅಲ್ಲಾಹನನ್ನು ಮಾತ್ರ ಆರಾಧಿಸಬೇಕು. ಆತ ನಿಗೆ ಸಾಟಿಯಾಗಿ ಯಾವುದನ್ನೂ ಗ್ರಹಿಸಬಾರದು. ನಿಮ್ಮ ತಂದೆ ತಾಯಂದಿರಿಗೆ ದಯೆದೋರಿರಿ. ಅದೇ ರೀತಿ ಸಂಬಂಧಿಕರಿಗೂ ಅನಾಥರಿಗೂ ಬಡವರಿಗೂ ನಿಮ್ಮ ಸಂಬಂಧಿಯಾದ ನೆರೆ ಹೊರೆಯವರಿಗೂ ನಿಮ್ಮ ಸಂಬಂಧಿಗಳಲ್ಲದ ನೆರೆ ಹೊರೆಯವರಿಗೂ ನಿಮ್ಮ ಸಹ ಯಾತ್ರಿಕರಿಗೂ ದಾರಿ ಹೋಕರಿಗೂ ನಿಮ್ಮ ಅಧೀನವಿರುವವರಿಗೂ ದಯೆದೋರಿರಿ. ಅಹಂಕಾರಿಗಳಾದವರನ್ನೂ ತಮ್ಮನ್ನೇ ತಾವು ಹೊಗಳುವವರನ್ನೂ ಅಲ್ಲಾಹು ಖಂಡಿತವಾಗಿಯೂ ಸ್ನೇಹಿಸುವುದಿಲ್ಲ. ಅವರು ಸ್ವತಃ ಜಿಪುಣರಾಗಿದ್ದು ಕೊಂಡು ಇತರರನ್ನು ಜಿಪುಣರಾಗಲು ಪ್ರೇರೇಪಿಸು

ತ್ತಾರೆ ಮತ್ತು ದೇವರು ಅವರಿಗೆ ನೀಡಿದ ಅನುಗ್ರಹಗಳನ್ನು ಅಡಗಿಸುತ್ತಾರೆ" (4:37,38).

"ನೀವು ನಿಮ್ಮ ಮುಖವನ್ನು ಪೂರ್ವಕ್ಕೋ ಪಶ್ಚಿಮಕ್ಕೋ ತಿರುಗಿಸುವುದು ಸತ್ಕರ್ಮವಲ್ಲ. ನಿಜವಾದ ಸತ್ಕರ್ಮಿಗಳು ದೇವರನ್ನೂ ಅಂತಿಮ ದಿನವನ್ನೂ ದೇವದೂತರನ್ನೂ ದೇವಗ್ರಂಥಗಳನ್ನೂ ದೇವರ ಪ್ರವಾದಿಗಳನ್ನೂ ನಂಬಿ ದೇವರ ಪ್ರೀತಿಯನ್ನು ಸಂಪಾದಿಸಲಿಕ್ಕಾಗಿ ತಮ್ಮ ಧನವನ್ನು ಸಂಬಂಧಿಕರಿಗೂ ಅನಾಥರಿಗೂ ಬಡವರಿಗೂ ದಾರಿಹೋಕರಿಗೂ ಸಹಾಯಯಾಚಿಸುವವರಿಗೂ ದಾಸ್ಯ ವಿಮೋಚನೆಗಾಗಿಯೂ ವಿನಿಯೋಗಿಸುತ್ತಾ ಪ್ರಾರ್ಥನೆಯನ್ನು ನೆಲೆಗೊಳಿಸಿ ಝಕಾತ್ ಕೊಡುತ್ತಾ, ವಾಗ್ದಾನಗಳನ್ನು ಪಾಲಿಸುತ್ತಾ, ಬಡತನದಲ್ಲಿಯೂ ಕಷ್ಟ ಕಾರ್ಪಣ್ಯಗಳಲ್ಲಿಯೂ ಯುದ್ಧ ಕಾಲಗಳಲ್ಲಿಯೂ ಸಹನೆ ದೋರುತ್ತಾರೆ. ಇವರೇ ಸತ್ಯ ವಿಶ್ವಾಸಿಗಳು, ಇವರೇ ಸತ್ಕರ್ಮಿಗಳು. (2:178)

ನೆರೆ ಹೊರೆಯವರ ಹಕ್ಕುಗಳ ಕುರಿತು ಹಲವಾರು ಬಾರಿ ದೇವರಿಂದ ಒತ್ತಾಯ ಪೂರ್ವಕವಾದ ನಿರ್ದೇಶಗಳು ದೊರೆತ ಕಾರಣ ನೆರೆ ಹೊರೆಯವರನ್ನೂ ಮೃತರ ವಾರೀಸುದಾರರ ಪಟ್ಟಿಯಲ್ಲಿ ಸೇರಿಸಬಹುದೆಂದು ತಾನು ಭಾವಿಸಿದುದಾಗಿ ಪೈಗಂಬರರು ಹೇಳಿರುವರು. ನೆರೆ ಹೊರೆಯವರಿಗೆ ದಯೆದೋರುವುದು ಸುಲಭವೆಂದು ಪ್ರವಾದಿಗಳು ಹೇಳಿರುವರು. ಒಬ್ಬನ ಬಳಿ ರಾತ್ರೆಯೂಟಕ್ಕೆ ಸಾರು ಮಾತ್ರವಿದ್ದರೆ ಅದಕ್ಕೆ ಒಂದು ಕಪ್ ನೀರು ಸೇರಿಸಿ ಅದನ್ನು ತನ್ನ ನೆರೆ ಹೊರೆಯವನೊಂದಿಗೆ ಹಂಚಬಹುದಾಗಿದೆಯೆಂದು ಪೈಗಂಬರರು ಹೇಳಿರುವರು.

ಕುಟುಂಬವು ಸಮಾಜದ ಮೂಲ ಘಟಕವಾಗಿದೆ. ಕುಟುಂಬದ ಸಮಗ್ರತೆಯನ್ನು ಕಾಪಾಡಲು ಇಸ್ಲಾಮ್ ಧರ್ಮ ಸವಿಸ್ತಾರವಾದ ನಿರ್ದೇಶಗಳನ್ನು ನೀಡಿದೆ. ಮನುಷ್ಯ ವರ್ಗ ತನ್ನ ವರ್ಗದಲ್ಲಿಯೇ ದಾಂಪತ್ಯ ಜೀವನವನ್ನು ಕೈಗೊಳ್ಳಲು ಏರ್ಪಡಿಸಿದುದು ಮತ್ತು ಮನುಷ್ಯ ವರ್ಗದಲ್ಲಿ ಪರಸ್ಪರ ಪ್ರೇಮ ಮತ್ತು ಅನುಕಂಪ ಹೃದಯಗಳಲ್ಲಿ ಅಂಕುರಿಸುವಂತೆ ಮಾಡಿದುದು ದೈವಾನುಗ್ರಹವಾಗಿದೆ (ಪ. ಖು. 30:22). ಪತಿ ಪತಿಯರ ಸಂಬಂಧವನ್ನು ಚಿತ್ರವತ್ತಾದ ಭಾಷೆಯಲ್ಲಿ ವಿವರಿಸಲಾಗಿದೆ: "ನೀವು ಅವರಿಗೆ ವಸ್ತ್ರ ಭೂಷಣವಾಗಿದ್ದೀರಿ ಅವರು ನಿಮಗೆ ವಸ್ತ್ರ ಭೂಷಣರಾಗಿದ್ದಾರೆ" (2:188). ಬಟ್ಟೆಯುಡುಗೆಗೆ ಹಲವು ಉಪಯೋಗಗಳಿವೆ. ಅದು ಅದನ್ನು ಧರಿಸಿದವನ ಅತ್ಯಂತ ಸಮೀಪವಿರುತ್ತದೆ. ಅದು ಆತನಿಗೆ ಅಲಂಕಾರವನ್ನೂ ರಕ್ಷೆಯನ್ನೂ ನೀಡುತ್ತದೆ. ಆತನ ನ್ಯೂನತೆಗಳನ್ನೂ ದೋಷಗಳನ್ನೂ ಅದು ಮರೆಮಾಡುತ್ತದೆ. ನಮಗೆ ಈ ರೀತಿ ಉಪದೇಶ ನೀಡಲಾಗಿದೆ: "ನೀವು ಅವರೊಡನೆ ದಯೆಯಿಂದ ಸಹ ಬಾಳ್ವೆಮಾಡಿರಿ. ನೀವು ಅವರನ್ನು ಮೆಚ್ಚದಿದ್ದರೆ, ನೀವು ಒಂದು ವಸ್ತುವನ್ನು ಮೆಚ್ಚದೆ ಇದ್ದರೂ ಅಲ್ಲಾಹು ಮಹತ್ತಾದ ಅನುಗ್ರಹವನ್ನು ಅದರಲ್ಲಿ ಇಟ್ಟಿರಬಹುದೆಂಬುದನ್ನು ಗ್ರಹಿಸಿರಿ" (4:20).

ದಂಪತಿಗಳು ಅತಿ ನಿಕಟವಾದ ಒಂದು ಪಾಲುಗಾರಿಕೆಯಲ್ಲಿ ಏರ್ಪಟ್ಟಿರುತ್ತಾ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಹೊಂದಿರುತ್ತಾರೆ (2:229). ಗಂಡಸು ಗಡಸು ಪ್ರಕೃತಿಯನ್ನು ಹೊಂದಿರುತ್ತಾನೆ. ಹೆಂಗಸು ಕೋಮಲತೆಯನ್ನೂ ನಮ್ರತೆಯನ್ನೂ ಹೊಂದಿರುತ್ತಾಳೆ. ಹೆಂಗಸಿಗೆ ಸಂರಕ್ಷಣೆಯೂ ಪ್ರೀತ್ಯಾದರಗಳೂ ಅವಶ್ಯಕ. ಇದನ್ನು ಪತಿಯಾದವನು ಏರ್ಪಡಿಸಬೇಕಾಗಿದ್ದು ಆತನಿಗೆ ಹೆಚ್ಚಿನ ಶಾರೀರಿಕ ಶಕ್ತಿ ಸಾಮರ್ಥ್ಯಗಳು ನೀಡಲ್ಪಟ್ಟಿದ್ದು ಆತನು ಸುಲಭವಾಗಿಯೂ ಯೋಗ್ಯವಾಗಿಯೂ ಜೀವಿತದ ಕಠಿಣ ಹೋರಾಟದಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಕುಟುಂಬದ ಸಂರಕ್ಷಣೆಗೆ ಬೇಕಾದ ಏರ್ಪಾಡು ಮಾಡಬೇಕಾದುದು ಆತನ ಕರ್ತವ್ಯವಾಗಿದೆ. "ಗಂಡಸರು ಹೆಂಗಸರ ಸಂರಕ್ಷಕರಾಗಿರುವುದು ಅಲ್ಲಾಹು ಅವರ ಪೈಕಿ ಕೆಲವರನ್ನು ಕೆಲವರಿಗಿಂತ ಹೆಚ್ಚು ಅನುಗ್ರಹಿಸಿರುವುದರಿಂದ ಮತ್ತು ಅವರು (ಗಂಡಸರು) ತಮ್ಮ ಧನವನ್ನು ಖರ್ಚು ಮಾಡುವುದರಿಂದಾಗಿದೆ" (4:35). ಗಂಡಸರು ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ನಿರ್ವಹಿಸುವಂತೆ ಅವರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ (2:229).

ವಿವಾಹ ವಿಚ್ಛೇದನೆಗೆ ಇಸ್ಲಾಮ್ ಧರ್ಮದಲ್ಲಿ ಅನುಮತಿ ನೀಡಲಾಗಿದ್ದರೂ ಇದು ಬಹಳ ದೀರ್ಘ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ಏರ್ಪಡಿಸಿ ಪತ್ನಿಯ ಹಕ್ಕುಗಳನ್ನು ಕಾಪಾಡಲು ಸವಿಸ್ತಾರವಾದ ನಿಯಮಗಳನ್ನು ರೂಪಿಸಲಾಗಿದೆ. (2:230-238; 65:2-8). ನಿಯಮ ಸಂಬಂಧವಾದ ಆಜ್ಞೆಗಳ ನಂತರ ನೈತಿಕವಾದ ಈ ಉಪದೇಶ ನೀಡಲಾಗಿದೆ: "ವಿವಾಹ ವಿಚ್ಛೇದನೆಯನ್ನು ಹೊಂದಿದ ಸ್ತ್ರೀಯರಿಗೆ ಯೋಗ್ಯ ಜೀವನಾಂಶ ನೀಡ

ಬೇಕು. ದೈವ ಭಕ್ತಿಯಿರುವವರಿಗೆ ಇದೊಂದು ಕರ್ತವ್ಯವಾಗಿದೆ." (2 : 242).

ತಂದೆ ತಾಯಂದಿರಿಗೆ ಕರುಣೆ ದೋರುವುದು ಬಹಳ ಒತ್ತಾಯ ಪೂರ್ವಕವಾಗಿ ಹೇಳಲಾಗಿದೆ:

"ದೇವರ ಆಜ್ಞೆ ಆತನನ್ನು ಬಿಟ್ಟು ಬೇರೆ ಯಾರನ್ನೂ ಆರಾಧಿಸಬಾರದೆಂದಾಗಿದೆ ಮತ್ತು ತಂದೆ ತಾಯಂದಿರಿಗೆ ಕರುಣೆದೋರಬೇಕು. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧಾಪ್ಯವನ್ನು ಪಡೆದರೆ ಅವರೊಡನೆ 'ಛೀ' ಎಂದು ಸಹ ಹೇಳದಿರು. ಅವರನ್ನು ನಿಂದಿಸದಿರು; ಅವರೊಡನೆ ದಯಾಭರಿತವಾದ ಮಾತುಗಳನ್ನು ನುಡಿ. ಅವರ ಕಡೆಗೆ ನಿನ್ನ ವಿನಯದ ರೆಕ್ಕೆಗಳನ್ನು ಚಾಚಿ ದಯೆ ದೋರುತ್ತಾ ಪ್ರಾರ್ಥಿಸು: ನನ್ನ ಪೋಷಕನಾದ ದೇವನೇ, ಇವರು ನನ್ನ ಚಿಕ್ಕ ವಯಸ್ಸಿನಲ್ಲಿ ನನ್ನ ಮೇಲೆ ದಯೆದೋರಿ ಪೋಷಿಸಿದಂತೆ ನೀನು ಇವರಿಗೆ ದಯೆದೋರು." (17: 24, 25)

ಪೈಗಂಬರರು ಹೀಗೆ ಹೇಳಿರುವರು: ನಮ್ಮ ಕಿರಿಯರ ಮೇಲೆ ದಯೆದೋರದವನೂ ನಮ್ಮ ಹಿರಿಯರನ್ನು ಆದರಿಸದವನೂ ನಮ್ಮ ಪೈಕಿ ಸೇರಿದವನಲ್ಲ.

ಯುದ್ಧ ಕೈದಿಗಳನ್ನು ಯಾವುದೇ ಧನ ಸ್ವೀಕರಿಸದೆ ಸಹಾಯದ ರೂಪದಲ್ಲಾಗಲೀ ಅಥವಾ ಪರಿಹಾರ ಧನ ಸ್ವೀಕರಿಸಿ ಬಿಡುಗಡೆ ಮಾಡಬಹುದು (47:5). ಕೈದಿಗಳ ಪರಸ್ಪರ ಬದಲಾವಣೆ ಪರಿಹಾರ ಧನಕ್ಕೆ ಬದಲಾಗಿ ಮಾಡಬಹುದು. ಬಿಡುಗಡೆಮಾಡಲ್ಪಡದವರನ್ನು ಸಮಾಜದಲ್ಲಿ ಹಂಚಬಹುದು. ಪೈಗಂಬರ್ ಈ ರೀತಿ ಹೇಳಿರುವರು: ನಿಮಗೆ ತಾತ್ಕಾಲಿಕ ಅಧಿಕಾರ ಅವರ ಮೇಲೆ ದೇವರು ನೀಡಿರುವನು. ಅವರು ನಿಮ್ಮ ಸಹೋದರರಾಗಿದ್ದಾರೆ. ನಿಮ್ಮ ಪೈಕಿ ಒಬ್ಬ ಸಹೋದರನಿಗೆ ಇನ್ನೊಬ್ಬ ಸಹೋದರನ ಮೇಲೆ ಅಧಿಕಾರ ನೀಡಲ್ಪಟ್ಟರೆ ಅಧಿಕಾರ ಹೊಂದಿದವನು ತನ್ನಂತೆಯೇ ತನ್ನ ಅಧೀನಕ್ಕೊಳಪಟ್ಟವನಿಗೆ ತಿನಿಸಬೇಕು, ತನ್ನ ಹಾಗೆಯೇ ಆತನಿಗೂ ಉಡುಗೆ ತೊಡುಗೆಗಳನ್ನು ನೀಡಬೇಕು, ಆತನ ಸಾಮರ್ಥ್ಯಕ್ಕೆ ಅತೀತವಾದ ಕೆಲಸಗಳನ್ನು ನೀಡಬಾರದು. ಕಠಿಣವಾದ ಯಾವುದಾದರೂ ಕೆಲಸ ನೀಡಿದರೆ ಆ ಕೆಲಸ ಪೂರ್ಣಗೊಳಿಸಲಿಕ್ಕಾಗಿ ಆತನಿಗೆ ಸಹಾಯ ಮಾಡಬೇಕು.

ಯುದ್ಧ ಕೈದಿ ತನ್ನ ಬಿಡುಗಡೆಗೆ ಪರಿಹಾರ ಧನ ನೀಡಲು ಮುಂದೆ ಬಂದರೆ ಅದರ ಕುರಿತು ನ್ಯಾಯ ಸಮ್ಮತವಾದ ಒಂದು ತೀರ್ಮಾನ ಕೈಗೊಂಡು ಅದನ್ನು ಬರೆಯಿಸಬೇಕು ಮತ್ತು ಕರಾರು ಪಾಲನೆಗಾಗಿ ಆತನಿಗೆ ಧನ ಸಹಾಯವನ್ನೂ ಮಾಡಬೇಕು (ಪ. ಖು. 24:34)

ಯಜಮಾನ ಮತ್ತು ಕೆಲಸಗಾರನ ಸಂಬಂಧವನ್ನು ಇಬ್ಬರಿಗೂ ಸಹಾಯಕವಾದ ರೀತಿಯಲ್ಲಿ ಏರ್ಪಡಿಸಲಾಗಿದೆ. ಕೆಲಸಗಾರನಿಗೆ ಆತನ ಶರೀರದ ಬೆವರು ಆರಿಹೋಗುವ ಮೊದಲೇ ಆತನ ಕೂಲಿ ನೀಡಬೇಕೆಂದು ಪೈಗಂಬರರು ಆಜ್ಞಾಪಿಸಿದ್ದಾರೆ.

ಇಸ್ಲಾಮ್ ಎಲ್ಲಾ ವಿಧದ ವಿಶೇಷ ಸೌಲಭ್ಯಗಳನ್ನು ರದ್ದುಗೊಳಿಸಿದೆ. ದೊರೆತನ, ಪೌರೋಹಿತ್ಯ, ಜಮೀನ್ದಾರಿಕೆ, ವರ್ಣ ಸಂಬಂಧ, ಧನಿಕ ಪ್ರಭುತ್ವ, ಸ್ವಲ್ಪ ಜನಾಧಿಪತ್ಯ, ಮತ್ತು ಅಧಿಕಾರಗಳ ವಿಶೇಷ ಸೌಲಭ್ಯಗಳನ್ನು ಅದು ನೀಡುವುದಿಲ್ಲ. ಒಬ್ಬನ ವ್ಯವಹಾರದಲ್ಲಿ ದೈವಭಕ್ತಿ ಪ್ರಧಾನವಾಗಿರುವುದೇ ಆತನು ಆದರಣೀಯನಾಗಲಿರುವ ಏಕಮಾತ್ರ ಕಾರಣವಾಗಿದೆ.

"ಓ ಮನುಷ್ಯರೇ, ನಿಮ್ಮನ್ನು ನಾವು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲಿಕ್ಕಾಗಿ ಗೋತ್ರಗಳನ್ನಾಗಿಯೂ ಉಪಗೋತ್ರಗಳನ್ನಾಗಿಯೂ ವಿಂಗಡಿಸಿದೆವು. ನಿಮ್ಮ ಪೈಕಿ ಅತ್ಯಂತ ಸಾತ್ವಿಕನು ಪರಮಾತ್ಮನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನಾಗಿದ್ದಾನೆ, ಅಲ್ಲಾಹು ಸರ್ವಜ್ಞನೂ ಸೂಕ್ಷ್ಮಜ್ಞನೂ ಆಗಿದ್ದಾನೆ." (49:14)

ಕೊನೆಗೆ,

"ಸತ್ಯ ವಿಶ್ವಾಸಿಗಳೇ, ನೀವು ನ್ಯಾಯಕ್ಕಾಗಿ ಸ್ಥಿರವಾಗಿ ನಿಲ್ಲುವವರಾಗಿರಿ. ಅಲ್ಲಾಹನಿಗಾಗಿ ಮಾತ್ರ ಸಾಕ್ಷಿ ನುಡಿಯಿರಿ. ಸಾಕ್ಷ್ಯ ನಿಮ್ಮ ವಿರುದ್ಧವಾಗಿದ್ದರೂ ನಿಮ್ಮ ತಂದೆ ತಾಯಂದಿರ ವಿರುದ್ಧವಾಗಿದ್ದರೂ ಹತ್ತಿರದ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿ. ನೀವು ಯಾರ ವಿರುದ್ಧ ಸಾಕ್ಷ್ಯ ನುಡಿಯಬೇಕಾಗಿದೆಯೋ ಅವರು ಬಡವರಾಗಿದ್ದರೂ ಧನಿಕರಾಗಿದ್ದರೂ ಸರಿ, ಅಲ್ಲಾಹನು ನಿಮಗಿಂತ ಹೆಚ್ಚು ಅವರ ಹಿತಕಾಂಕ್ಷಿಯಾಗಿದ್ದಾನೆ. ನೀವು ಯಾವುದೇ

ನೀಚವಾದ ಆಶೆಯಿಂದ ದಾರಿ ತಪ್ಪಿ ಹೋಗಬೇಡಿರಿ. ನೀವು ಸತ್ಯವನ್ನು ಮರೆಮಾಚಿದರೆ ಅಥವಾ ಸಾಕ್ಷ್ಯ ತಪ್ಪಿಸಿದರೆ ನೀವು ಏನೆಲ್ಲಾ ಮಾಡುತ್ತಿರುವನೆಂಬುದನ್ನು ಅಲ್ಲಾಹನು ತಿಳಿದಿರುವನೆಂದು ನೆನಪಿಡಿರಿ." (4:136)

"ಓ ಸತ್ಯ ವಿಶ್ವಾಸಿಗಳೇ, ನೀವು ನ್ಯಾಯಯುತವಾಗಿ ಸಾಕ್ಷ್ಯ ನೀಡುತ್ತಾ ಅಲ್ಲಾಹನಿಗಾಗಿ ಸ್ಥಿರಚಿತ್ತರಾಗಿರಿ. ಯಾವುದೇ ಜನಾಂಗದ ವೈರವು ನಿಮ್ಮನ್ನು ಅನ್ಯಾಯ ವರ್ತನೆಗೆ ಪ್ರೇರೇಪಿಸದಿರಲಿ. ನೀವು ನ್ಯಾಯಯುತವಾಗಿಯೇ ವರ್ತಿಸಿರಿ. ಅದು ಭಕ್ತಿ ಮಾರ್ಗವಾಗಿದೆ. ನೀವು ಅಲ್ಲಾಹನಿಗೆ ಭಯಪಡಿರಿ, ನೀವು ಮಾಡುವುದನ್ನೆಲ್ಲಾ ಅಲ್ಲಾಹು ಚೆನ್ನಾಗಿ ತಿಳಿದಿರುವನು" (5:9).

(ಅನುವಾದಕ: M. U. ರಶೀದ್)


**Read Ahmadiyya Periodicals in different languages to study different religions.**

# BADR

URDU WEEKLY

Single Copy: 0-60 Paise — Annual Subscription: Rs. 26/-

Apply to: The Manager, "BADR" Urdu Weekly, P. O. QADIAN-143 516 [Punjab]

# MINARET

ENGLISH QUARTERLY JOURNAL

Apply to: Mr. M. P. Koyatty
Minaret Accounting Section
14/346, Francis Road, CALICUT-670 003 [Kerala]

Single Copy: 2-50
Annual Subscription: Rs. 10/-

# SATYADOOTHAN

MALAYALAM MONTHLY

Apply to: The Manager,
Satyadoothan Monthly,
CANNANORE-670 001

Single Copy: 1-00
Annual Subscription: Rs. 10/-

# SAMADHANA VAZHI

TAMIL MONTHLY

Single Copy: 0-50 Paise — Annual Subscription: Rs. 6/-

Apply to: The Manager, Samadhan Vazhi Monthly
3, United India Colony
Kodambakkam, MADRAS-600 024

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ಇಂಗ್ಲೆಂಡಿನಲ್ಲಿ ಅಹ್ಮದಿಯಾ ವಿದ್ಯಾರ್ಥಿಗಳ 3ನೇ ವಾರ್ಷಿಕ ಸಮ್ಮೇಳನ

ಇಂಗ್ಲೆಂಡಿನ ಅಹ್ಮದಿಯಾ ವಿದ್ಯಾರ್ಥಿಗಳ ಮೂರನೆ ವಾರ್ಷಿಕ ಸಮ್ಮೇಳನ ಡಿಸೆಂಬರ್ 28ರಿಂದ ಐದು ದಿನಗಳ ವರೆಗೆ ಲಂಡನ್ ಅಹ್ಮದಿಯಾ ಮಸೀದಿಯ ಅಂಗಣದಲ್ಲಿ ಸಮಾವೇಶಗೊಂಡಿತು. ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕ ಗಣ್ಯರಲ್ಲಿ ನೋಬೆಲ್ ಬಹುಮಾನ ವಿಜೇತ ಪ್ರಥಮ ಅಹ್ಮದೀ ಮುಸ್ಲಿಂ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಂ ಸಾಹೇಬರೂ ಇದ್ದರು.

## ಬ್ರಾಡ್‌ಫೋರ್ಡಿನ ಹೋಟೆಲ್ ಕೊಠಡಿಗಳಲ್ಲಿ ಖುರ್‌ಆನ್

ಬೃಹತ್ ಹೋಟೆಲುಗಳ ಕೊಠಡಿಗಳಲ್ಲಿ ಪವಿತ್ರ ಖುರ್‌ಆನಿನ ಪ್ರತಿಗಳನ್ನು ಇರಿಸುವ ಹಝ್ರತ್ ಖಲೀಫತುಲ್ ಮಸೀಹ್ III ರ ನಿರ್ದೇಶನದ ಅಂಗವಾಗಿ ಬ್ರಾಡ್‌ಫೋರ್ಡಿನ (ಇಂಗ್ಲೆಂಡ್) ನಾಲ್ಕು ದೊಡ್ಡ ಹೋಟೆಲುಗಳಲ್ಲಿಡಲಿಕ್ಕಾಗಿ ಬ್ರಿಟನಿನ ಅಹ್ಮದಿಯಾ ಜಮಾಅತಿನ ವತಿಯಿಂದ ಪವಿತ್ರ ಖುರ್‌ಆನಿನ 289 ಇಂಗ್ಲೀಷ್ ಭಾಷಾಂತರ ಪ್ರತಿಗಳನ್ನು ನೀಡಲಾಗಿದೆ. 'ಬ್ರಾಡ್‌ಫೋರ್ಡ್ ಸ್ಟಾರ್' ಎಂಬ ಪತ್ರಿಕೆ ಈ ಕುರಿತುಳ್ಳ ವಾರ್ತೆಯನ್ನು ಫೋಟೋ ಸಹಿತ, ಪ್ರಾಶಸ್ತ್ಯ ನೀಡಿ ಪ್ರಕಟಿಸಿದೆ.

## ನೈಜೀರಿಯಾದ ಹೋಟೆಲಿನಲ್ಲೂ ಖುರ್‌ಆನ್

ನೈಜೀರಿಯಾದ ಕೋರಾ ಸ್ಟೇಟಿನ ಸರಕಾರಿ ಹೋಟೆಲೊಂದರ 60 ಕೊಠಡಿಗಳಲ್ಲಿ ಇರಿಸಲಿಕ್ಕಾಗಿ ಖುರ್‌ಆನಿನ ಪ್ರತಿಗಳನ್ನು ನೈಜೀರಿಯಾ ಅಹ್ಮದಿಯಾ ಜಮಾಅತಿನ ವತಿಯಿಂದ ನೀಡಲಾಗಿದೆ. ಇದರ ಸಂಬಂಧಿಸಿ ಜರಗಿದ ಒಂದು ಸಮಾರಂಭದಲ್ಲಿ ಹೋಟೆಲಿನ ಜನರಲ್ ಮೇನೆಜರ್, ನಿರ್ಮಾಣದಲ್ಲಿರುವ ಕಾಂಪ್ಲೆಸಿಗೆ ಸಹ ಅಹ್ಮದಿಯಾ ಜಮಾಅತ್ 100 ಖುರ್‌ಆನ್ ಪ್ರತಿಗಳನ್ನು ನೀಡಬೇಕೆಂದು ವಿನಂತಿಸಿದರು. ಜಮಾಅತ್ ಆ ಅಪೇಕ್ಷೆಯನ್ನು ಸಂತೋಷ ಸಹಿತ ಒಪ್ಪಿದೆ.

## ಬ್ರಿಟನಿನಲ್ಲಿ ಮತ್ತೊಂದು ಪ್ರಚಾರ ಕೇಂದ್ರ

ಇಂಗ್ಲೆಂಡಿನ "ಜಲಂಗಂ" ಎಂಬಲ್ಲಿ ಅಹ್ಮದಿಯಾ ಜಮಾಅತ್ ಇನ್ನೊಂದು ಮಿಶನ್ ಕೇಂದ್ರವನ್ನು ಸ್ಥಾಪಿಸಿದೆ. ಕಳೆದ ವರ್ಷ ಇಂಗ್ಲೆಂಡಿನಲ್ಲಿ ಐದು ಪ್ರಚಾರ ಕೇಂದ್ರಗಳು ಸ್ಥಾಪಿಸಲ್ಪಟ್ಟಿದ್ದವು.

## 10 ವರ್ಷಗಳಲ್ಲಿ 100 ಮಸೀದಿಗಳು ನಿರ್ಮಿಸಲ್ಪಟ್ಟವು

ನೈಜೀರಿಯಾದ ವಿವಿಧ ಸ್ಥಳಗಳಲ್ಲಿ ಅಹ್ಮದಿಯಾ ಜಮಾಅತ್ ಕಳೆದ 10ವರ್ಷಗಳಲ್ಲಿ 100 ಮಸೀದಿಗಳನ್ನು ನಿರ್ಮಿಸಿರುವುದಾಗಿ ನೈಜೀರಿಯಾದ ಅಹ್ಮದಿಯಾ ಮಿಶನರಿ ಮೌಲನಾ ಮುಹಮ್ಮದ್ ಅಜ್ಮಲ್ ಶಾಹಿದ್ ತಿಳಿಸಿರುವರು.

## ಜರ್ಮನಿಯಲ್ಲಿ ಪ್ರವಾಸಿಗಳಿಗೆ ಫೋಲ್ಡರ್ ವಿತರಣೆ

ಪಶ್ಚಿಮ ಜರ್ಮನಿಯ ಅಹ್ಮದಿಯಾ ಮಿಶನಿನ ವತಿಯಿಂದ ಸುವ್ಯವಸ್ಥಿತವಾದ ಒಂದು ಕಾರ್ಯಕ್ರಮದ ಅಂಗವಾಗಿ 12 ರಾಜ್ಯಗಳ 43000 ವಿನೋದ ಸಂಚಾರಿಗಳಿಗೆ ಅವರ ಮಾತೃ ಭಾಷೆಗಳಲ್ಲಿರುವ, ಅಹ್ಮದಿಯಾ ಜಮಾಅತನ್ನು ಪರಿಚಯ ಪಡಿಸುವ ಫೋಲ್ಡರ್‌ಗಳನ್ನು ನೀಡಲಾಯಿತು.

## ಚಿಕಾಗೋ ಲೈಬ್ರರಿಗೆ ಅಹ್ಮದಿಯಾ ಸಾಹಿತ್ಯಗಳು

ಚಿಕಾಗೋ ಅಹ್ಮದಿಯಾ ಮಿಶನಿನ ವತಿಯಿಂದ ಚಿಕಾಗೋದ ಒಂದು ಬೃಹತ್ ಗ್ರಂಥಾಲಯಕ್ಕೆ ಅಹ್ಮದಿ

ಯಾ ಸಾಹಿತ್ಯಗಳನ್ನೂ ಪವಿತ್ರ ಖುರ್‌ಆನಿನ ಭಾಷಾಂತರ ಪ್ರತಿಗಳನ್ನೂ ನೀಡಲಾಯಿತು. ತಮ್ಮ ಅಧೀನದಲ್ಲಿರುವ 82 ಶಾಖೆಗಳಿಗೆ ಸಹ ಅಹ್ಮದಿಯಾ ಸಾಹಿತ್ಯಗಳನ್ನು ಖರೀದಿಸಲಾಗುವುದೆಂದು ಲೈಬ್ರರಿ ಮೆನೇಜರ್ ಆ ಸಂದರ್ಭದಲ್ಲಿ ವಾಗ್ದಾನ ಮಾಡಿದರು.

## ನೈಜೀರಿಯಾದಲ್ಲಿ ಆಸ್ಪತ್ರೆ

ಫೆಬ್ರವರಿ 22ರಂದು ನೈಜೀರಿಯಾದ ಓಜಿ ಎಂಬಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಡುವ ಆಸ್ಪತ್ರೆಯೊಂದಕ್ಕೆ ಅಡಿಗಲ್ಲು ಹಾಕಲಾಗಿದೆ. ಇದು ನುಸ್ರತ್ ಜಹಾನ್ ಸ್ಕೀಮಿನ ವತಿಯಿಂದ ನೈಜೀರಿಯಾದಲ್ಲಿ ಸ್ಥಾಪಿಸಲ್ಪಡುವ ಎಂಟನೆಯ ಆಸ್ಪತ್ರೆಯಾಗಿದೆ.

## ಸಿರಾಲಿಯೋನಿನಲ್ಲಿ ಆಸ್ಪತ್ರೆ

ಸಿರಾಲಿಯೋನಿನ ಗ್ರಾಮವೊಂದರಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿತವಾದ 4ನೆ ಆಸ್ಪತ್ರೆ ಇತ್ತೀಚೆಗೆ ಉದ್ಘಾಟಿಸಲ್ಪಟ್ಟಿದೆಯೆಂದು ತಿಳಿದು ಬಂದಿದೆ.

## ಗಾಂಬಿಯಾ ಅಧ್ಯಕ್ಷರಿಂದ ಆಸ್ಪತ್ರೆಗೆ ಶಿಲಾನ್ಯಾಸ

ಗಾಂಬಿಯಾದಲ್ಲಿ ತಾಲ್‌ಸಿಂಗ್ ಕಂಗಾಂಗ್ ಎಂಬಲ್ಲಿ ಅಹ್ಮದಿಯಾ ಜಮಾಅತ್ ನಿರ್ಮಿಸುವ ಆಸ್ಪತ್ರೆಯೊಂದಕ್ಕೆ ಗಾಂಬಿಯಾ ಅಧ್ಯಕ್ಷ ದಾವೂದ್ ಕೇರ್ಬ ಶಿಲಾನ್ಯಾಸ ಮಾಡಿದ್ದಾರೆ. ಆ ಸಂದರ್ಭದಲ್ಲಿ ಕ್ಯಾಬಿನೆಟ್ ಸಚಿವರೂ ಅನೇಕ ರಾಷ್ಟ್ರಗಳ ರಾಯಭಾರಿಗಳೂ ಅಂತಾರಾಷ್ಟ್ರೀಯ ಸಂಸ್ಥೆಗಳ ಹಲವು ಪ್ರತಿನಿಧಿಗಳೂ ಇನ್ನಿತರ ಅನೇಕ ಗಣ್ಯರೂ ಉಪಸ್ಥಿತರಿದ್ದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಗಾಂಬಿಯಾ ಅಹ್ಮದಿಯಾ ಜಮಾಅತಿನ ಚರಿತ್ರೆಯನ್ನು ವಿವರಿಸಿ, ಜಮಾಅತ್ ಮಾಡುತ್ತಿರುವ ಸೇವೆಗಳನ್ನು ಶ್ಲಾಘಿಸಿದರು.

## ಮೊರಿಷ್ಯಸ್‌ನಲ್ಲಿ ಪೈಗಂಬರ ದಿನಾಚರಣೆ

1982 ಜನವರಿ ತಿಂಗಳಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಮೊರಿಷ್ಯಸ್‌ನಲ್ಲಿ ಪೈಗಂಬರ ದಿನವನ್ನು ಆಚರಿಸಲಾಯಿತು. ವಿದ್ಯಾಭ್ಯಾಸ ಸಚಿವರಾದ ಶ್ರೀ ಜಗತ್ ಸಿಂಗ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದರು. ಇತರ ಹಲವು ಮುಸ್ಲಿಮೇತರ ಪ್ರಮುಖರು ಪೈಗಂಬರರ ಪವಿತ್ರ ಜೀವನದ ಕುರಿತು ಭಾಷಣ ಮಾಡಿದರು. ಈ ವಾರ್ತೆಯನ್ನು ಮೋರಿಷ್ಯಸ್ ರೇಡಿಯೋ ಮತ್ತು ಟೆಲಿವಿಶನ್ ಬಿತ್ತರಿಸಿವೆ.

## ಕೆನ್ಯಾದಲ್ಲಿ ಮತ್ತೊಂದು ಘಟಕ

ಕೆನ್ಯಾದ ಸೌಟಿ ಎಂಬಲ್ಲಿ ಅಹ್ಮದಿಯಾ ಜಮಾಅತಿನ ಇನ್ನೊಂದು ಘಟಕ ಸ್ಥಾಪಿಸಲ್ಪಟ್ಟಿದೆಯೆಂದು ತಿಳಿದು ಬಂದಿದೆ.

## ಸ್ವಿಟ್ಸರ್ಲೇಂಡ್‌ನಲ್ಲಿ ಪ್ರಚಾರ

ಹಝ್ರತ್ ಖಲೀಫತುಲ್ ಮಸೀಹ್ IIIರ ಆದೇಶಾನುಸಾರ ನಿಶ್ಚಯಿಸಿದ ಕಾರ್ಯಕ್ರಮ ಪ್ರಕಾರ ಸ್ವಿಟ್ಸರ್ಲೇಂಡ್‌ನ ಗಣ್ಯ ವಕ್ತಿಗಳಿಗೆಲ್ಲಾ ಖಲೀಫತುಲ್ ಮಸೀಹ್‌ರವರ 'ಶಾಂತಿ ಸಂದೇಶವೂ ಮುನ್ನೆಚ್ಚರಿಕೆಯೂ' ಎಂಬ ಕಿರುಕೃತಿಯ 5000 ಪ್ರತಿಗಳನ್ನು ವಿತರಣೆ ಮಾಡಲಾಯಿತು. ಸ್ವಿಟ್ಸರ್ಲೇಂಡಿನ ಅಧ್ಯಕ್ಷರು, ಕೇಂದ್ರ ಸಚಿವರು, ಪಾರ್ಲಿಮೆಂಟ್ ಸದಸ್ಯರು, ಸೆನೆಟರುಗಳು, ಜರ್ಮನಿ ಭಾಷೆ ಮಾತನಾಡುವ ಎಲ್ಲಾ ಸಂಸ್ಥಾನ ಅಸೆಂಬ್ಲಿ ಸದಸ್ಯರು, ಮುನ್ಸಿಪಲ್ ಚೇರ್‌ಮ್ಯಾನ್‌ಗಳು, ಜರ್ಮನಿ ಮಾತನಾಡುವ ಪ್ರದೇಶಗಳಲ್ಲಿರುವ ಪತ್ರಕರ್ತರು, ಜ್ಯೂರಿಕ್ ಪಟ್ಟಣದ ಸೆಕಂಡರಿ ಸ್ಕೂಲ್ ಅಧ್ಯಾಪಕರು ಮೊದಲಾದವರು ಅವರಲ್ಲಿ ಸೇರುತ್ತಾರೆ.

## ದ. ಅಮೇರಿಕದಲ್ಲಿ ಸಮ್ಮೇಳನ

ದ. ಅಮೇರಿಕದ ಸೂರಿನಾಂ, ಗಿಯಾನ ಮತ್ತು ಟ್ರಿನಿಡಾಡ್ ಎಂಬ ರಾಜ್ಯಗಳ ಸಂಯುಕ್ತ ಅಹ್ಮದಿಯಾ 6ನೇ ವಾರ್ಷಿಕ ಸಮ್ಮೇಳನ ಕಳೆದ ನವೆಂಬರ್ 22ರಂದು ಟ್ರಿನಿಡಾಡಿನ ಫ್ರೀಪೋರ್ಟ್‌ನಲ್ಲಿ ಸಮಾವೇಶಗೊಂಡಿತೆಂದು ತಿಳಿದು ಬಂದಿದೆ.

## ರೇಡಿಯೋ ಭಾಷಣ

"ಇಸ್ಲಾಂ ಮತ್ತು ಸರ್ವಸಾಹೋದರ್ಯ" ಎಂಬ ವಿಷಯದಲ್ಲಿ ಅಹ್ಮದಿಯಾ ಮುಸ್ಲಿಂ ಮಿಶನರಿ ಮೌಲವಿ ಮಹಮ್ಮದ್ ಉಮರ್ ಸಾಹೇಬ್ H. A. ಅವರು ತಮಿಳಿನಲ್ಲಿ ಮಾಡಿದ ಭಾಷಣವನ್ನು ಆಕಾಶವಾಣಿಯ ಮದ್ರಾಸ್ ಕೇಂದ್ರ ಮೇ 28ರಂದು ರಾತ್ರಿ 8-30ಕ್ಕೆ ಬಿತ್ತರಿಸಿದೆ.

## ನೈಜೀರಿಯಾದಲ್ಲಿ 32ನೇ ವಾರ್ಷಿಕ ಸಮ್ಮೇಳನ 10,000 ಪ್ರತಿನಿಧಿಗಳು

ಡಿಸೆಂಬರ್ 25, 26 ಮತ್ತು 27ರಂದು ನೈಜೀರಿಯಾದ ಅಹ್ಮದಿಯಾ ಕಾಲನಿಯಲ್ಲಿ 32ನೇ ವಾರ್ಷಿಕ ಸಮ್ಮೇಳನವು ಬಹಳ ವಿಜಯಕರವಾಗಿ ಸಮಾವೇಶಗೊಂಡಿತು. ಈ ಸಮ್ಮೇಳನದಲ್ಲಿ ಸುಮಾರು 10 ಸಾವಿರ ಅಹ್ಮದೀ ಪ್ರತಿನಿಧಿಗಳು ಭಾಗವಹಿಸಿದ್ದರು.

## ಮೊರಿಷ್ಯಸ್‌ನಲ್ಲಿ ವಾರ್ಷಿಕ ಸಮ್ಮೇಳನ

ಡಿಸೆಂಬರ್ ತಾರೀಕು 5 ಮತ್ತು 6 ರಂದು ಮೊರಿಷ್ಯಸ್‌ನಲ್ಲಿ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಜರಗಿತು.

ಪ್ರಥಮ ದಿನ ರೋಸ್‌ಹಿಲ್ ಜಮಾಅತಿನ ಪ್ರೆಸಿಡೆಂಟ್ ಮುಬಾರಕ್ ರವ್‌ಜಾನ್ ಸಾಹೇಬರು ಅಧ್ಯಕ್ಷತೆ ವಹಿಸಿದರು. ಮೊರಿಷ್ಯಸ್‌ನ ಮಿಶನರಿ ಸಿದ್ದೀಖ್ ಅಹ್ಮದ್ ಮುನವ್ವರ್, ಮುಬಶ್ಶಿರ್ ಡೋಮನ್, ಅಹ್ಮದ್ ಸುಲ್ತಾನ್ ಗೌಸ್ ಮತ್ತು ಹನೀಫ್ ಜವಾಹರ್ ಭಾಷಣ ಮಾಡಿದರು.

ದ್ವಿತೀಯ ದಿನ ಮೊರಿಷ್ಯಸ್‌ನ ನೇಶನಲ್ ಪ್ರೆಸಿಡೆಂಟ್ ಇಸ್ಮಾಯಿಲ್ ಸುಬ್‌ಹಾನ್ ಸಾಹೇಬರು ಅಧ್ಯಕ್ಷತೆ ವಹಿಸಿದರು. ಹಮಿದ್ ಜಿಯಾದ್ ಅಲಿ ಮತ್ತು ಡಾ। ಮನಾಫ್ ಖುದಾರನ್ ಮಾತನಾಡಿದರು.

## ಟೋಕಿಯೋದಲ್ಲಿ ಸಮ್ಮೇಳನ

ಜಪಾನಿನ 2ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಜನವರಿ 1ರಂದು ಟೋಕಿಯೋದಲ್ಲಿ ಸಮಾವೇಶಗೊಂಡಿತೆಂದು ಅಹ್ಮದಿಯಾ ಮಿಶನರಿ ಅತಾವುಲ್ ಮುಜೀಬ್ ರಾಶಿದ್ ಸಾಹೇಬರು ತಿಳಿಸಿರುವರು.

## ಪೋಪರಿಗೆ ಖುರ್‌ಆನ್ ಪಾರಿತೋಷಕ

ಪೋಪ್ ಜಾನ್ ಪೌಲ್ ದ್ವಿತೀಯ ಅವರು ಇತ್ತೀಚೆಗೆ ಪ್ರಥಮವಾಗಿ ನೈಜೀರಿಯಾ ಸಂದರ್ಶಿಸಿದಾಗ ಸ್ಥಳೀಯ ಅಹ್ಮದಿಯಾ ಘಟಕದ ವತಿಯಿಂದ ಅವರಿಗೆ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಮತ್ತು ಅಹ್ಮದಿಯಾ ಸಾಹಿತ್ಯಗಳನ್ನು ನೀಡಲಾಯಿತು.

## ಹಾಲೇಂಡಿನಲ್ಲಿ ಪ್ರಚಾರ

ಹಾಲೇಂಡಿನ ಅಹ್ಮದಿಯಾ ಮಿಶನಿನ ವತಿಯಿಂದ ಎಪ್ರಿಲ್ ತಿಂಗಳಲ್ಲಿ ಪ್ರಚಾರ ದಿನವನ್ನು ಆಚರಿಸಲಾಯಿತು. ಅಹ್ಮದಿಯಾ ಮಿಶನರಿ ಅಬ್ದುಲ್ ಹಕೀಂ ಸಾಹೇಬರ ನಿರ್ದೇಶನಾನುಸಾರ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿಗೆ ಅಹ್ಮದಿಯಾ ಕಿರುಹೊತ್ತಗೆಗಳನ್ನು ವಿತರಣೆ ಮಾಡಲಾಯಿತು.

## ಯಾಸರ್ ಅರಫಾತರಿಗೆ ಅಹ್ಮದಿಯಾ ಸಾಹಿತ್ಯಗಳು

ಪೆಲಸ್ತೀನ್ ವಿಮೋಚನಾ ಸಂಸ್ಥೆಯ ನಾಯಕ ಯಾಸರ್ ಅರಫಾತರು ಮೇ 22 ರಂದು ಹೈದರಾಬಾದಿಗೆ ಆಗಮಿಸಿದ್ದಾಗ ಅವರಿಗೆ ಅಹ್ಮದಿಯಾ ಮಿಶನರಿ ಮೌಲವಿ ಹಮೀದುದ್ದೀನ್ ಶಮ್ಸ್ ಸಾಹೇಬರು ಅರಬಿ ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಅಹ್ಮದಿಯಾ ಸಾಹಿತ್ಯಗಳನ್ನು ನೀಡಿದರು.

## ಕಲ್ಕತ್ತಾ ಪುಸ್ತಕ ಮೇಳದಲ್ಲಿ ಅಹ್ಮದಿಯಾ ಬುಕ್‌ಸ್ಟಾಲ್

ಮಾರ್ಚ್ 19 ರಿಂದ 28ರ ವರೆಗೆ ಕಲ್ಕತ್ತದಲ್ಲಿ ನಡೆದ ಪುಸ್ತಕ ಮೇಳದಲ್ಲಿ ಅಹ್ಮದಿಯಾ ಬುಕ್ ಸ್ಟಾಲೊಂದನ್ನು ತೆರೆಯಲಾಗಿತ್ತು. ವಿವಿಧ ಭಾಷೆಗಳಲ್ಲಿರುವ ಖುರ್‌ಆನ್ ಭಾಷಾಂತರಗಳೂ ಅಹ್ಮದಿಯಾ ಸಾಹಿತ್ಯಗಳೂ ಮಾರಲ್ಪಟ್ಟವು. ನಾನಾ ಭಾಷೆಗಳಲ್ಲಿರುವ ಅಹ್ಮದಿಯಾ ಪತ್ರಿಕೆಗಳೂ ವಿದೇಶಗಳಲ್ಲಿರುವ ಅಹ್ಮದಿಯಾ ಮಸೀದಿಗಳ ಛಾಯಾಚಿತ್ರಗಳೂ ಪ್ರದರ್ಶಿಸಲ್ಪಟ್ಟಿದ್ದವು.

## ಉತ್ತರ ಪ್ರದೇಶದಲ್ಲಿ ಸಮ್ಮೇಳನ

ಉತ್ತರ ಪ್ರದೇಶದ 16ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಫತಹ್‌ಪುರಿನ ಬಪ್ಪದಲ್ಲಿ ಮಾರ್ಚ್ 27 ಮತ್ತು 28ರಂದು ವಿಜೃಂಭಣೆಯಿಂದ ಜರಗಿತು.

## ಒರಿಸ್ಸಾದಲ್ಲಿ ಸಮ್ಮೇಳನ

ಒರಿಸ್ಸಾದ 18ನೆ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಕೇರಂಗ್‌ನಲ್ಲಿ ಮಾರ್ಚ್ 4 ಮತ್ತು 5ರಂದು ಸಮಾವೇಶಗೊಂಡಿರುತ್ತದೆ. 4ರಂದು ಸಂಜೆ ಅಹ್ಮದಿಯಾ ಮಹಿಳಾ ಸಭೆ ಸಹ ಜರಗಿತು.

## ಮುರ್ಶಿದಾಬಾದಿನಲ್ಲಿ ಮಸೀದಿ

ಪ. ಬಂಗಾಳದ ಮುರ್ಶಿದಾಬಾದಿನಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ ಮಸೀದಿಯೊಂದು ಮೇ 1ರಂದು ಉದ್ಘಾಟಿಸಲ್ಪಟ್ಟಿರುತ್ತದೆ.

## ಕಬೀರಾದಲ್ಲಿ ಮಸೀದಿ

ಕಲ್ಕತ್ತಕ್ಕೆ ಸಮೀಪದ ಕಬೀರಾ ಎಂಬಲ್ಲಿ ಅಹ್ಮದಿಯಾ ಮಸೀದಿಯೊಂದನ್ನು ಮಾರ್ಚ್ 7 ರಂದು ಮಧ್ಯಾಹ್ನ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿರುವರು.

## ಕೊಯಂಬತ್ತೂರಿನಲ್ಲಿ ಜಮಾಅತ್

ತಮಿಳುನಾಡಿನ ಕೊಯಂಬತ್ತೂರಿನಲ್ಲಿ ಎಪ್ರಿಲ್ 10 ರಂದು ಅಹ್ಮದಿಯಾ ಜಮಾಅತಿನ ಘಟಕವೊಂದು ಸ್ಥಾಪಿಸಲ್ಪಟ್ಟಿದೆಯೆಂದು ತಮಿಳುನಾಡಿನ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬರು ತಿಳಿಸಿರುವರು.

## ಮತ ಮತ್ತು ವಿಚಾರವಾದ ಸಿಂಪೋಸಿಯಂ

ಕರುನಾಗಪಳ್ಳಿ ಅಹ್ಮದಿಯಾ ಯುವಜನರ ವತಿಯಿಂದ ಎಪ್ರಿಲ್ 18ರಂದು ಕರುನಾಗಪಳ್ಳಿ ಟೌನ್ ಕ್ಲಬ್ನಲ್ಲಿ "ಮತ ಮತ್ತು ವಿಚಾರವಾದ" ಎಂಬ ಸಿಂಪೋಸಿಯುಮನ್ನು ಏರ್ಪಡಿಸಲಾಗಿತ್ತು. ಬ್ಲೋಕ್ ಡೆವಲಪ್‌ಮೆಂಟ್ ಆಫಿಸರ್ ಹಾಗೂ ಅಹ್ಮದಿ ಯುವ ಕಾರ್ಯಕರ್ತ ಎ. ನಸೀಮುದ್ದೀನ್ ಅಧ್ಯಕ್ಷತೆ ವಹಿಸಿದರು. ಕೇರಳ ರಾಜ್ಯ ಅಹ್ಮದಿಯಾ ಮುಸ್ಲಿಂ ಜನರಲ್ ಸೆಕ್ರೆಟರಿ ಇ. ತಾಹಿರ್, ವಿಚಾರವಾದಿಗಳಾದ ಎ. ಪಿ. ಕಳಯ್ಕಾಡ್, ಸಜೀವ್, ನಾಸಿರ್ ಮೊದಲಾದವರು ಭಾಷಣ ಮಾಡಿದರು.

## ಎರ್ನಾಕುಳಂನಲ್ಲಿ ಪ್ರಚಾರ

ಎಪ್ರಿಲ್ 4ರಂದು ಎರ್ನಾಕುಳಂನಲ್ಲಿ ಸಮಾವೇಶಗೊಂಡ ವಿಶಾಲ ಹಿಂದೂ ಸಮ್ಮೇಳನ ಸಂದರ್ಭದಲ್ಲಿ ಸ್ಥಳೀಯ ಅಹ್ಮದಿಯಾ ಜಮಾಅತಿನ ವತಿಯಿಂದ ಅಹ್ಮದಿಯಾ ಕಿರುಕೃತಿಗಳನ್ನು ವಿತರಣೆ ಮಾಡಲಾಯಿತು.

## ಕಾವಶ್ಯೇರಿಯಲ್ಲಿ ಜಮಾಅತ್

ಕೇರಳದ ಕಾವಶ್ಯೇರಿ (ಪಾಲ್ಘಾಟ್) ಎಂಬಲ್ಲಿ ಎಪ್ರಿಲ್ 2ರಂದು ಅಹ್ಮದಿಯಾ ಜಮಾಅತಿನ ಘಟಕವೊಂದನ್ನು ಸ್ಥಾಪಿಸಲಾಗಿದೆ. ಜ| ಎ. ಎಸ್. ಹಮೀದ್ ಸಾಹೇಬರು ಅಧ್ಯಕ್ಷರು.

## ಮೊಗ್ರಾಲಿನಲ್ಲಿ ಬ್ಯಾಡ್ಮಿಂಟನ್ ಟೂರ್ನಮೆಂಟ್

ಮೊಗ್ರಾಲ್ ಜಮಾಅತಿನ ಯುವಜನ ಸಂಘಟನೆಯು (ಖುದ್ದಾಮುಲ್ ಅಹ್ಮದಿಯಾ) ವತಿಯಿಂದ ಮೇ 9ನೇ ತಾರೀಕಿನಂದು ಏರ್ಪಡಿಸಲಾಗಿದ್ದ ಶಟ್ಲ್ ಬಾಡ್ಮಿಂಟನ್ (ಸಿಂಗಲ್ಸ್) ಟೂರ್ನಮೆಂಟಿನಲ್ಲಿ ನಾಸಿರ್ ಅಹ್ಮದ್ ಸಿದ್ದೀಖ್ ಚ್ಯಾಂಪಿಯನ್‌ಶಿಪ್ ಪಡೆದರು. ರನ್ನರ್ ಅಪ್– ಮುಹಮ್ಮದ್ ಯೂಸುಫ್.

---

**ನಿಧನ ವಾರ್ತೆ**


## ಜನಾಬ್ ಜಿ. ಕೆ. ಫಖ್ರುದ್ದೀನ್ ಸಾಹೇಬ್

ಮಡಿಕೇರಿಯ ಜನಾಬ್ ಜಿ. ಕೆ. ಫಖ್ರುದ್ದೀನ್ ಸಾಹೇಬರು ತಾರೀಕು 27–5–1982ರಂದು ಅಲ್ಪ ಕಾಲದ ಅಸ್ವಸ್ಥತೆಯ ನಂತರ ನಿಧನ ಹೊಂದಿದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಮಡಿಕೇರಿಯಲ್ಲಿ ಒಟ್ಟು ಮೊದಲು ನಾಲ್ಕು ಜನ ಅಹ್ಮದಿಯತ್ ಸ್ವೀಕರಿಸಿದ ನಂತರ ಸುನ್ನೀ ಮುಸ್ಲಿಮರು ಕೇರಳದ ಅಂದಿನ ದೊಡ್ಡ ಸುನ್ನೀ ವಿದ್ವಾಂಸರಾದ ಪದಿ ಅಬ್ದುಲ್ ಖಾದರ್ ಮುಸಲಿಯಾರರ ನೇತೃತ್ವದಲ್ಲಿ 1951ರಲ್ಲಿ ಒಂದು ವಾದ ಪ್ರತಿ ವಾದವನ್ನು ಮಡಿಕೇರಿ ಜುಮಾ ಮಸೀದಿಯಲ್ಲಿ ಏರ್ಪಡಿಸಿದ್ದರು. ಅಹ್ಮದಿಯಾ ಜಮಾಅತಿನ ಪರವಾಗಿ ಹಝ್ರತ್ ಮೌಲಾನ ಅಬ್ದುಲ್ಲಾ ಸಾಹೇಬ್ H. A. (ರ. ಅ.) ವಾದಿಸಿದ್ದರು. ಈ ವಾದ ಪ್ರತಿವಾದ ನಡೆದ ನಂತರ ಅಹ್ಮದಿಯರ ವಾದಗಳ ಸತ್ಯತೆಯನ್ನು ಮನಗಂಡು ಜನಾಬ್ ಜಿ. ಕೆ. ಫಖ್ರುದ್ದೀನ್ ಸಾಹೇಬರು ಬೇರೆ ಕೆಲವರ ಜೊತೆ ಅಹ್ಮದಿಯತ್ ಸ್ವೀಕರಿಸಿದರು. ಇವರು 1951ರಿಂದ 1960ರ ವರೆಗೆ ಮಡಿಕೇರಿ ಜಮಾಅತಿನ ಪ್ರಸಿಡೆಂಟರಾಗಿ ಸೇವೆ ಸಲ್ಲಿಸಿರುವರು. ಮೃತರು ಮಡಿಕೇರಿಯಲ್ಲಿ ಮೊದಲು ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು. ಮೃತರಿಗೆ ಮರಣ ಹೊಂದುವಾಗ ಸುಮಾರು 70 ವರ್ಷ ಪ್ರಾಯವಾಗಿತ್ತು. ಅವರು ಇಬ್ಬರು ಪುತ್ರರನ್ನೂ ಐವರು ಪುತ್ರಿಯರನ್ನೂ ಪತ್ನಿಯನ್ನೂ ಅಸಂಖ್ಯಾತ ಬಂಧು ಮಿತ್ರರನ್ನೂ ಅಗಲಿ ಹೋಗಿರುವರು. ಮೃತರಿಗೆ ಅಲ್ಲಾಹು ನಿತ್ಯ ಶಾಂತಿಯನ್ನೂ ದುಃಖ ಸಂತಪ್ತರಿಗೆ ಸಮಾಧಾನವನ್ನೂ ಕರುಣಿಸಲಿ.

**ಪುಸ್ತಕ ವಿಭಾಗ**

# ಅಬ್ದುಸ್ ಸಲಾಮ್*



★ ಎ. ಪಿ. ರಾಧಾಕೃಷ್ಣ

ಪ್ರೊ. ಅಬ್ದುಸ್ ಸಲಾಮ್ ನೋಬೆಲ್ ಬಹುಮಾನ ವಿಜೇತರಾದ ಕೆಲವೇ ಏಶಿಯನ್ನರಲ್ಲಿ ತೀರ ಇತ್ತೀಚಿನವರು. ಮನುಷ್ಯನ ಮೂಲಭೂತ ಸಜ್ಜನಿಕೆಯಲ್ಲಿ ವಿಶ್ವಾಸವಿರಿಸಿಕೊಂಡ ಅವರು ಪ್ರಖ್ಯಾತ ಭೌತವಿಜ್ಞಾನಿಯಾಗಿರುವಾಗಲೂ ದೇವರ ಅಸ್ತಿತ್ವದಲ್ಲಿ ಶ್ರದ್ಧೆಯುಳ್ಳವರಾಗಿದ್ದಾರೆ. ಅವರ ಕುರಿತು ಒಂದು ಕಿರುಲೇಖನ ಕಸ್ತೂರಿಯಲ್ಲಿ ಆಗಲೇ (ಜನವರಿ 1980) ಬಂದಿದೆ.

ಯುದ್ಧದಲ್ಲಿ ಬಳಸಲ್ಪಡುವ ವಿನಾಶ ಸಾಮಾಗ್ರಿಗಳ ಸಂಶೋಧನೆ ಮತ್ತು ಅವುಗಳ ತಯಾರಿಕೆಯನ್ನೇ ಉದ್ಯಮವಾಗಿಸಿಕೊಂಡು ಅಪಾರ ಧನ ಸಂಗ್ರಹ ಮಾಡಿದ ಸ್ವೀಡನ್ನಿನ ಉಪಜ್ಞಕಾರ ಆಲ್ಫ್ರೇಡ್ ನೊಬೆಲ್ ಕೊನೆಕೊನೆಗೆ ಮನಶ್ಶಾಂತಿ ಕಳೆದುಕೊಳ್ಳಲಾರಂಭಿಸಿದ. ಅವನನ್ನು ಕಾಡುತ್ತಿದ್ದುದು ಸಂಚಿತ ಧನವನ್ನು ಕಾದಿಡುವ ಬಗೆ ಹೇಗೆ? ಎಂಬ ಚಿಂತೆಯಲ್ಲ; ತಾನು ಸಂಶೋಧಿಸಿ ತಯಾರಿಸಿದ ಸಲಕರಣೆಗಳು ಹಿಂಸಾಕೃತ್ಯಗಳಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತಿವೆಯಲ್ಲ, ಅಮಾನುಷ ಕೃತ್ಯಗಳ ಮೂಲಪುರುಷ ತಾನಾದೆನಲ್ಲ ಎಂಬ ಮಾನವೀಯ ಚಿಂತೆ. ಇದಕ್ಕೇನು ಪರಿಹಾರ? ಕೂಡಲೇ ಹೊಳೆಯಿತು. ಆತ ತನ್ನ ಸಂಪತ್ತನ್ನೆಲ್ಲ ಬಹುಮಾನ ನಿಧಿಯಾಗಿ ಮುಡಿಪಿಟ್ಟ. ಜಾತಿ, ಮತ, ಪಂಥ, ವರ್ಣ, ದೇಶಗಳ ಭೇದ ಮರೆತು ವ್ಯಕ್ತಿಯ ಸಾಮರ್ಥ್ಯವೊಂದೇ ಅಳತೆಗೋಲೆಂದು ನಿರ್ಣಯಿಸಿ ಬಹುಮಾನಕ್ಕೆ ಅರ್ಹನೆಂದು ಆರಿಸುತ್ತಿರುವುದರಿಂದ, ಇಂದಿಗೂ ನೊಬೆಲ್ ಪ್ರಶಸ್ತಿ ಜಗತ್ತಿನ ಅತ್ಯುನ್ನತ ಪ್ರಶಸ್ತಿ ಎಂಬ ಹೆಸರಿಗೆ ಪಾತ್ರವಾಗಿದೆ.

ವಿಜ್ಞಾನಕ್ಕಾಗಿ ನೊಬೆಲ್ ಬಹುಮಾನವನ್ನು ಸ್ವೀಕರಿಸಿದ ಮಹನೀಯರ ಸಾಲಿಗೆ ಮೊತ್ತಮೊದಲ ಬಾರಿಗೆ ಮುಸ್ಲಿಂ ವಿಜ್ಞಾನಿಯೊಬ್ಬರ ಹೆಸರು 1979ರಲ್ಲಿ ಸೇರಿಕೊಂಡಿತು. ನಮ್ಮ ನೆರೆಯವರೇ ಆದ ಪಾಕಿಸ್ತಾನದ ಪ್ರಜೆ ಅಬ್ದುಸ್ ಸಲಾಮ್ ತಮ್ಮಿಬ್ಬರು ಸಹಯೋಗಿಗಳಾದ ಸ್ಟೀವೆನ್‌ವೈನ್ ಬರ್ಗ್ ಮತ್ತು ಶ್ಲೀಡನ್ ಗ್ಲಾಷೋ ಇವರೊಂದಿಗೆ ಸೇರಿ 'ಏಕೀಕೃತ ಕ್ಷೇತ್ರ ಸಿದ್ಧಾಂತ'ವನ್ನು ಪ್ರತಿಪಾದಿಸಿ, ನೋಬೆಲ್ ಪ್ರಶಸ್ತಿ ಹಂಚಿಕೊಂಡು ಹೊಸತೊಂದು ಮನ್ವಂತರಕ್ಕೆ ಕಾರಣರಾದರು ಅಬ್ದುಸ್ ಸಲಾಂ. ಭೌತಶಾಸ್ತ್ರಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಪಡೆದು ತೃತೀಯ ಜಗತ್ತಿನ ಪ್ರಪ್ರಥಮ ನೋಬೆಲ್ ವಿಜೇತ 'ಮುಸ್ಲಿಂ ವಿಜ್ಞಾನಿ' ಹೊಸತೊಂದು ಯುಗ ಪ್ರಾರಂಭಿಸಿದ್ದಲ್ಲದೆ, ಏಕೀಕೃತ ಕ್ಷೇತ್ರ ಸಿದ್ಧಾಂತದ ಮೂಲಕ ವೈಜ್ಞಾನಿಕ ಪರಿಕಲ್ಪನೆಗಳಿಗೆ ಹೊಸ ತಿರುವು ನೀಡಿದ್ದಾರೆ.

ನಿಶಿತ ಬುದ್ಧಿವಂತಿಕೆ, ಅಗಾಧ ಕಾರ್ಯದಕ್ಷತೆ, ಸೈದ್ಧಾಂತಿಕ ಮನೋಭಾವ, ಆಳ ಅಧ್ಯಯನ ಸಲಾಮರಿಗೆ ನೊಬೆಲ್ ಪ್ರಶಸ್ತಿಯನ್ನು ಗಳಿಸಿ ಕೊಟ್ಟವು. ಈ ಪ್ರಶಸ್ತಿ ಅವರ ಕಾರ್ಯಕ್ಷಮತೆಗೆ ಸಿಗಲೇಬೇಕಿದ್ದ ಗೌರವ.

ಇದೀಗ 55ನೆಯ ವರ್ಷಕ್ಕೆ ಕಾಲಿಟ್ಟಿರುವ ಅಬ್ದುಸ್ ಸಲಾಮ್, ನೋಡುವುದಕ್ಕೆ ಬಹಳ ಆಕರ್ಷಕ ವ್ಯಕ್ತಿ. ಗೋಧಿ ವರ್ಣದ ಅಗಲ ಮುಖಕ್ಕೆ ನೀಳ ನಾಸಿಕ ಶೋಭಾಯಮಾನ. ಎತ್ತರವಾದ ಸದೃಢ ಮೈಕಟ್ಟು, ಕಣ್ಣುಗಳಲ್ಲಿ ಅಪೂರ್ವ ಬುದ್ಧಿವಂತಿಕೆಯ ಮಿಂಚು. ಕಪ್ಪು ಕೇಶದ

* ಕಸ್ತೂರಿ, ಜುಲೈ 1982ರ ಸಂಚಿಕೆಯಿಂದ.

ಮಧ್ಯೆ ಅಲ್ಲೊಂದು ಇಲ್ಲೊಂದು ನರೆ. ಅರೆ ಬರೆಯ ಬಿಳಿ ಗಡ್ಡ ಗಾಂಭೀರ್ಯ ಹೆಚ್ಚಿಸುತ್ತದೆ. ಮುಗ್ಧ ಮುಖದಲ್ಲಿ ಸ್ನಿಗ್ಧ ನಗು! ಚಿಂತನೆಯ ಪ್ರವಾಹ ಒಮ್ಮೆ ವಿಜ್ಞಾನಿಯಾಗಿ, ಮತ್ತೊಮ್ಮೆ ತತ್ವಶಾಸ್ತ್ರಜ್ಞರಾಗಿ, ಮಗುದೊಮ್ಮೆ ಸಮಾಜ ಶಾಸ್ತ್ರಜ್ಞರಾಗಿ ಕಾಣುವ ಸಲಾಮರು ಜ್ಞಾನ ಸಮುದ್ರ. ಮಾತಿನ ಮಧ್ಯೆ ಹಾಸ್ಯ ಚಟಾಕಿ. ಸರಾಗವಾಗಿ ಬರುವ ಉರ್ದು, ಹಿಂದಿ, ಭಾರತೀಯ ಪ್ರಾಧ್ಯಾಪಕರುಗಳ ಇಂಗ್ಲೀಷು ಶೈಲಿ, ಪಾಕಿಸ್ತಾನದವರಾದರೂ ನೋಡುವುದಕ್ಕೆ ಅಪ್ಪಟ ಭಾರತೀಯ!

## ಬೆಳೆಯ ಸಿರಿ ಮೊಳಕೆಯಲ್ಲೆ

ಅಬ್ದುಸ್ ಸಲಾಮ್ 1926 ಜನವರಿ 29ರಂದು ಲಾಹೋರಿನಿಂದ 200 ಕಿಲೋಮೀಟರ್ ದೂರದ ಝಾಂಗ್ ಎಂಬಲ್ಲಿ ಮನೆಯ ಹಿರಿಯ ಮಗನಾಗಿ ಜನಿಸಿದರು. ತಂದೆ ಚೌಧರಿ ಮಹ್ಮದ ಹುಸೇನರು ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಸ್ವಾಭಾವಿಕವಾಗಿಯೇ ಅವರಿಗೆ ಮಕ್ಕಳ ಶಿಕ್ಷಣದ ಬಗ್ಗೆ ತೀವ್ರ ಕಾಳಜಿ. ಸಲಾಮ್ ಆಗಾಗ ನೆನಪಿಸಿಕೊಳ್ಳುತ್ತಾರೆ: "ನನ್ನ ತಂದೆ ಎಡೆಬಿಡದೆ ನನ್ನ ವಿದ್ಯಾಭ್ಯಾಸದ ಬಗ್ಗೆ ಎಚ್ಚರಿಕೆಯಿಂದ ಗಮನ ಹರಿಸುತ್ತಿದ್ದರು. ಪ್ರತಿದಿನವೂ ನಾನು ಮನೆಗೆ ಆಗಮಿಸುತ್ತಲೇ ಅಧ್ಯಾಪಕರ ವಿಷಯವಾಗಿ ಮತ್ತು ನಾನು ಆ ದಿನ ಶಾಲೆಯಲ್ಲಿ ಏನೆಲ್ಲಾ ಮಾಡಿದೆ ಎಂಬ ವಿಚಾರವಾಗಿ ಕುತೂಹಲದಿಂದ ಪ್ರಶ್ನಿಸುತ್ತಿದ್ದರು. ನನ್ನ ಬಗ್ಗೆ ಗುರುಗಳೊಂದಿಗೆ ಮುಕ್ತವಾಗಿ ಸಮಾಲೋಚಿಸುತ್ತಿದ್ದರು. ಇದೆಲ್ಲದರ ಫಲವಾಗಿ ನಾನು ನನ್ನ ಅಧ್ಯಯನದಲ್ಲಿ ಅತಿ ಹೆಚ್ಚು ಗಮನ ಕೊಡುವುದಕ್ಕೆ ಸಾಧ್ಯವಾಯಿತು." ಸಲಾಮರ ತಾಯಿಯೂ ಸಂಸಾರ ನಿಭಾಯಿಸುವುದರೊಂದಿಗೆ ಮಗನ ಭವಿಷ್ಯತ್ತನ್ನು ಕುರಿತು ಚಿಂತಿಸಿ ಮಾರ್ಗದರ್ಶನ ಮಾಡುತ್ತಿದ್ದರು.

ಸಲಾಮರ ದೊಡ್ಡಪ್ಪ ಚೌಧರಿ ಗುಲಾಮ್ ಹುಸೇನರು ಶಾಲಾ ಪರೀಕ್ಷಾಧಿಕಾರಿಯೂ ಚಿಕ್ಕ ನ್ಯಾಯಾಧೀಶರೂ ಆಗಿದ್ದರು. "ನನ್ನ ತಂದೆ ಮತ್ತು ಇಡೀ ಕುಟುಂಬ ಅವರನ್ನು ಭಯ, ಭಕ್ತಿ ಗೌರವದಿಂದ ನೋಡುತ್ತಿತ್ತು. ಅವರು ನನ್ನ ಮೇಲೆ ಆಳ ಪ್ರಭಾವ ಬೀರಿದರು," ಎನ್ನುತ್ತಾರೆ ಸಲಾಮ್. ದೊಡ್ಡಪ್ಪನ ಘನ, ಗಂಭೀರ ವ್ಯಕ್ತಿತ್ವ ಸಲಾಮರ ಮೇಲೆ ಪರಿಣಾಮ ಬೀರಿತಂತೆ. ವ್ಯಕ್ತಿತ್ವದ ಸಂಪೂರ್ಣ ಬೆಳವಣಿಗೆ ಸುತ್ತಲಿನ ಸಮಾಜ, ಪರಿಸರದಿಂದ ಪ್ರಭಾವಿಸಲ್ಪಡುತ್ತದೆಂಬ ಮಾತು ಎಷ್ಟು ನಿಜವೋ, ಮನೆಯ ವಾತಾವರಣದಿಂದ ಪ್ರಭಾವಿಸಲ್ಪಡುತ್ತದೆಂಬುದೂ ಅಷ್ಟೇ ನಿಜ. ಅಬ್ದುಸ್ ಸಲಾಮರ ತಂದೆ ಆಳವಾಗಿ ಧಾರ್ಮಿಕ ನಂಬುಗೆಯುಳ್ಳವರಾಗಿದ್ದು, ಖುರಾನನ್ನು ಗೌರವದಿಂದ ಕಾಣುತ್ತಿದ್ದುದರಿಂದ ಮನೆಯ ವಾತಾವರಣ ಧರ್ಮ ನಿಷ್ಠೆಗೂ, ಅಧ್ಯಯನಕ್ಕೂ ಸಹಕಾರಿಯಾಗಿತ್ತು.

ಸಲಾಮರ ಹುಟ್ಟೂರು ಝಾಂಗ್ ಜಿಲ್ಲೆ ಒಂದು ರೀತಿಯಲ್ಲಿ ಅಪೂರ್ವ ಸ್ಥಳ. ಮೂಲ ಭಾರತೀಯರಾಗಿ, ಸದ್ಯ ಅಮೇರಿಕದ ಪ್ರಜೆಯಾಗಿ ಅಲ್ಲಿಯೇ ನೆಲೆಸಿರುವ ನೋಬೆಲ್ ಪ್ರಶಸ್ತಿ ವಿಜೇತ ಡಾ। ಹರಗೋವಿಂದ ಖೊರಾನಾ ಹುಟ್ಟಿದ್ದು ಝಾಂಗಿನಲ್ಲಿಯೆ. ಸಲಾಮರು ಆಗಾಗ ಹೆಮ್ಮೆಯಿಂದ ಈ ವೈಶಿಷ್ಟ್ಯವನ್ನು ಹೇಳಿಕೊಳ್ಳುತ್ತಾರೆ. ಝಾಂಗಿನಲ್ಲಿ ಹಿಂದುಗಳು ಮತ್ತು ಮುಸ್ಲಿಮರು ಸಮಸಂಖ್ಯೆಯಲ್ಲಿ ಇದ್ದರೂ ಜಾತಿಮತಗಳ ಸಂಘರ್ಷವಿಲ್ಲದೆ ಮಧುರವಾದ ಸಾಮರಸ್ಯದಿಂದ ಬಾಳುತ್ತಿದ್ದರು. ಈ ಆದರ್ಶ ಸಮಾಜ ಸಲಾಮರ ಜಾತ್ಯತೀತ ವಿಶಾಲ ಮನೋಭಾವನೆಯ ಬೆಳವಣಿಗೆಗೆ ಅನುವಾಯಿತು.

ಆ ಕಾಲದಲ್ಲಿ ವಿಶ್ವವಿದ್ಯಾನಿಲಯ ನಡೆಸುವ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗುವ ವಿದ್ಯಾರ್ಥಿಯನ್ನು ದೊಡ್ಡ ಯುದ್ಧದಲ್ಲಿ ವಿಜಯ ಗಳಿಸಿದ ಯೋಧನನ್ನು ಕಾಣುವಂತೆ ಗೌರವದಿಂದ ಕಾಣುತ್ತಿದ್ದರು. ಶಿಕ್ಷಣ ರಂಗ ಅಷ್ಟು ಪುನೀತವೂ ಪ್ರಧಾನವೂ ಆದ ಕ್ಷೇತ್ರವಾಗಿತ್ತು.

1940ರ ಮೇ 20 ಸಲಾಮರ ಪಾಲಿಗೆ ಸುದಿನ. ಮೆಟ್ರಿಕ್ ಪರೀಕ್ಷೆಯ ಹಣೆಬರಹ ಆ ದಿನ ಬಹಿರಂಗಗೊಳ್ಳಲಿತ್ತು. ಅಳುವುದಕ್ಕೊ ನಗುವುದಕ್ಕೊ ವಿದ್ಯಾರ್ಥಿಗಳು ಉದ್ವೇಗದಿಂದ ಸಿದ್ಧರಾಗುತ್ತಿದ್ದರು. ಕೆಲವರ ಮುಖದಲ್ಲಿ ಪ್ರೇತಕಲೆ—ಮತ್ತೆ ಕೆಲವರ ಮೊಗದಲ್ಲಿ ಆತ್ಮ ವಿಶ್ವಾಸದ ಸೆಲೆ. ಸಲಾಮರು ನಿರ್ವಿಕಾರಚಿತ್ತದಿಂದ ಶಾಂತರಾಗಿ ಫಲಿತಾಂಶವನ್ನು ಎದುರು ನೋಡುತ್ತಿದ್ದರು. ಮಧ್ಯಾಹ್ನ ಒಂದು ಗಂಟೆಯ ಸುಮಾರಿಗೆ ಸಲಾಮರ ತಂದೆಯ ಸಹಾಯಕ ಓಡೋಡಿ ಬಂದು ಫಲಿತಾಂಶ ಹೊತ್ತ ಪುಸ್ತಕ ನೀಡಿದ. ಪುಸ್ತಕದ ಹಾಳೆ ತಿರುಗಿಸಿದ್ದೇ ತಡ, ನೋಡುವುದೇನು? ಸಲಾಮರ ಭಾವಚಿತ್ರ ಪ್ರಕಟವಾಗಿತ್ತು. 14 ವರ್ಷದ ಪೋರ ಆ ವರೆಗೆ ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಯಾರೂ ಪಡೆಯದಷ್ಟು ಅಂಕಗಳನ್ನು ಗಳಿಸಿ ಪ್ರಪ್ರಥ

ಮ ಶ್ರೇಣಿಯಲ್ಲಿ ಉತ್ತೀರ್ಣನಾಗಿ ಅದ್ಭುತವನ್ನೇ ಸಾಧಿಸಿದ್ದ. ಹಿಂದುಗಳೆಲ್ಲ ಒಟ್ಟುಗೂಡಿ ಈ ಕಿರಿಯ ಮುಸ್ಲಿಂ ಸೋದರನ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಕೋಮು ಗಲಭೆಯ ದಳ್ಳುರಿಯಿಂದ ಸಂಪೂರ್ಣವಾಗಿ ಬೇರೆಯಾದ ಝೂಂಗಿನ ಹಿಂದೂ–ಮುಸ್ಲಿಂ ಬಾಂಧವ್ಯಕ್ಕೆ ಇದು ನಿದರ್ಶನ. ಸಲಾಮರು ಈ ತಮ್ಮ ಅಪೂರ್ವ ಸಾಧನೆಯನ್ನು ಪದವಿ ಶಿಕ್ಷಣದ ಎಲ್ಲ ವರ್ಷಗಳಲ್ಲೂ ಎಡೆಬಿಡದೆ ಸಾಧಿಸುತ್ತಲೇ ಬಂದರು !

### ಇಂಗ್ಲೆಂಡಿನತ್ತ

ಸಲಾಮರು ಭೌತಶಾಸ್ತ್ರ ರಂಗಕ್ಕೆ ಪ್ರವೇಶಿಸಿದ್ದು ಆಕಸ್ಮಿಕವೇ. 1946ರಲ್ಲಿ ಎಂ. ಎ. ಪದವಿ ಗಳಿಸಿದ ನಂತರ ಐ.ಸಿ.ಎಸ್. ಪರೀಕ್ಷೆಗೆ ಕುಳಿತುಕೊಳ್ಳಲು ನಿಶ್ಚಯ ಮಾಡಿದಾಗ ಅವರ ಬದುಕಿನಲ್ಲಿ ಒಂದು ಹೊಸ ತಿರುವು ಮೂಡಿತು. ಆ ಪ್ರಸಂಗವನ್ನು ಅವರು ಈಗಲೂ ನೆನಪಿಸಿಕೊಳ್ಳುತ್ತಾರೆ. "1946ರಲ್ಲಿ ನಡೆಯಲಿದ್ದ ಐ. ಸಿ. ಎಸ್. ಪರೀಕ್ಷೆಗೆ ಹಾಜರಾಗಲು ನಿಶ್ಚಯಿಸಿದಾಗ ನನ್ನ ಭೌತಶಾಸ್ತ್ರ ಮರಣದಂಡನೆಗೆ ಬಂದಿತ್ತು. ಅದೃಷ್ಟವಶಾತ್ ಆ ವರ್ಷ ಐ. ಸಿ. ಎಸ್. ಪರೀಕ್ಷೆ ನಡೆಯದೆ ಹೋದದ್ದರಿಂದ ನಾನು ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಾರ್ಥಿಯಾಗಲು ಅರ್ಜಿ ಸಲ್ಲಿಸಿದೆ." ಐ. ಸಿ. ಎಸ್. ಅಧಿಕಾರಿಯಾಗಬೇಕಾಗಿದ್ದ ಸಲಾಮರು ವಿಜ್ಞಾನಿಯಾದದ್ದು ಹೀಗೆ.

1946 ಸಪ್ಟೆಂಬರ್ 6ರ ಸುಮಾರಿಗೆ ಕೇಂಬ್ರಿಜ್ ವಿಶ್ವವಿದ್ಯಾನಿಲಯವು ಸಲಾಮರ ಸಾಮರ್ಥ್ಯವನ್ನು ಮನಗಂಡು ಅವರನ್ನು ವಿದ್ಯಾರ್ಥಿಯಾಗಿ ಸ್ವೀಕರಿಸಿತು. ಇದೇ ಕಾಲಕ್ಕೆ ಸಲಾಮರು ಖಿಜರ್ ಹೈಯತ್‌ಖಾನ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಗುಜರಾಯಿಸಿದ್ದರು. ಹೈಯತ್‌ಖಾನರು ಪಂಜಾಬಿನ ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ಯುದ್ಧ ಪೀಡಿತ ಜನರಿಗಾಗಿ ಲಕ್ಷಾಂತರ ರೂಪಾಯಿ ಹಣವನ್ನು ವಂತಿಗೆಯ ಮೂಲಕ ಸಂಗ್ರಹಿಸಿದ್ದರು. ಆದರೆ ಅಕಸ್ಮಾತ್ತಾಗಿ ಯುದ್ಧ ನಿಂತುಹೋದಾಗ ಸಂಗ್ರಹಿಸಿದ ಹಣವನ್ನು ಜನರ ಯೋಗಕ್ಷೇಮಕ್ಕೆಂದು ವಿಧ ವಿಧವಾದ ರಚನಾತ್ಮಕ ಕಾರ್ಯಗಳಿಗೆ ಬಳಸತೊಡಗಿದರು. ಇದರಲ್ಲಿ ವಿದ್ಯಾರ್ಥಿವೇತನವೂ ಒಂದು. ಸಲಾಮರಿಗೆ ಅದು ಮಂಜೂರಾಯಿತು.

ಇಂಗ್ಲೆಂಡಿಗೆ ಹೋಗಲು ಅನುಮತಿ (ವೀಸಾ) ಪಡೆಯುವುದಕ್ಕಾಗಿ ಸಲಾಮರು ರೈಲು ಬಂಡಿಯಲ್ಲಿ ದೆಹಲಿಗೆ ಧಾವಿಸಿದರು. ಆ ದಿನ ಶನಿವಾರ ವಾದುದರಿಂದ ಕ್ರಮದಂತೆ ಕಚೇರಿಗೆ ಅರ್ಧ ದಿನದ ಕೆಲಸ. ಸಲಾಮರು ಕಚೇರಿಯನ್ನು ತಲಪಿದಾಗ ಕಚೇರಿ ಇನ್ನೇನು ಮುಚ್ಚಲಿತ್ತು. ಅಲ್ಲಿ ಜಾರ್ಜ್ ಎನ್ನುವ ವ್ಯಕ್ತಿಯ ಭೇಟಿಯಾಯಿತು. "ಸ್ವಾಮಿ ನೀವು ಈ ಕೊನೆ ಕ್ಷಣದಲ್ಲಿ ಯಾಕಾಗಿ ಪ್ರತ್ಯಕ್ಷರಾದಿರಿ! ನೀವು ಮುಂದಿನ ವಾರ ಪ್ರಯಾಣಿಸಲು ಇಚ್ಛಿಸುತ್ತಿರುವುದು ಶುದ್ಧ ಹುಚ್ಚುತನ. ಏಕೆಂದರೆ ಹಲವಾರು ಆಂಗ್ಲ ಕುಟುಂಬಗಳು ವರ್ಷಗಳಿಂದ ಇಂಗ್ಲೆಂಡಿಗೆ ಹೋಗುವ ಸರದಿಗಾಗಿ ಕಾಯುತ್ತಿವೆ," ಸಲಾಮರ ಆಶೆಯ ಮೇಲೆ ತಣ್ಣೀರೆರಚಿದಂತಾಗಿತ್ತು.

ಆಗ ಅದೆಲ್ಲಿಂದಲೋ ಜಾರ್ಜನ ಮುಖ್ಯ ಗುಮಾಸ್ತ ಓಡೋಡಿ ಬಂದು, ಸಲಾಮರನ್ನು ದೂರ ಕರೆದೊಯ್ದು ಗುಟ್ಟಿನಲ್ಲಿ ಜಾರ್ಜನನ್ನು ಹೀಯಾಳಿಸಿ, ಒಂದು ಚೀಟಿ ನೀಡಿ ತಾರೀಖು, 8ರಂದು 'ಎಂಟೋನಿಯೋ' ಎಂಬ ಹಡಗಿನಲ್ಲಿ ಹೋಗುವಂತೆ ಸೂಚಿಸಿದ. ಬಹುಶಃ ಸಲಾಮರ ಮುಗ್ಧ ಮುಖ, ತೇಜಪೂರ್ಣ ಕಣ್ಣು, ಪ್ರಾಮಾಣಿಕ ನಗು ಅವನಲ್ಲಿ ಅದೇನೋ ಮಧುರ ಭಾವನೆಯನ್ನು ಹುಟ್ಟಿಸಿರಬೇಕು.

ದೂರದ, ಅಪರಿಚಿತ ನಾಡಿಗೆ ತೆರಳುವ ಮುನ್ನ ತಂದೆಯನ್ನು ನೋಡುವುದಕ್ಕಾಗಿ ದಿಲ್ಲಿಯಿಂದ ನೇರವಾಗಿ ಅವರು ತಂದೆ ಕಾರ್ಯ ನಿರ್ವಹಿಸುತ್ತಿದ್ದ ಮುಲ್ತಾನಿಗೆ ತೆರಳಿದರು. ತಂದೆಯಿಂದ ಬೀಳ್ಕೊಂಡು ಏಳರ ರಾತ್ರಿ ಮುಂಬಯಿಗೆ ಬಂದು ವಸತಿ ಗೃಹವೊಂದರಲ್ಲಿ ತಂಗಿದರು. ಬಂದು ಹೋಗುವವರ ಗಲಾಟೆ, ಪಕ್ಕದ ರೂಮಿನ ಸಂಗೀತ-ಸುರೆಗಳ ಗದ್ದಲದ ಮಧ್ಯೆ ಚಿಗುರು ಮೀಸೆಯ ಸಲಾಮರು ಪ್ರಯಾಣದ ಮಧುರ ಕನಸನ್ನು ಕಾಣುತ್ತಿದ್ದರು. ನಡುರಾತ್ರಿಯ ಸಮಯದಲ್ಲಿ ಯಾರೋ ಬಾಗಿಲನ್ನು ತಟ್ಟಿದ ಸದ್ದಾದಾಗ ಮೆಲ್ಲನೆ ಸಲಾಮರು ಬಾಗಿಲು ತೆರೆದರು. ಸೈನಿಕನೊಬ್ಬ ಕಂಡ. "ನಮಗೆ ಬಂದ ಸುದ್ದಿಗಳ ಪ್ರಕಾರ ನೀನು ಸೈನ್ಯದಿಂದ ಪಲಾಯನ ಮಾಡಿದಾತ" ಎಂದು ಆತ ಗದರಿಸಿದಾಗ, ಸಲಾಮರು "ಇಲ್ಲ, ನಾನು ಇಂಗ್ಲೆಂಡಿಗೆ ಉಚ್ಚ ವಿದ್ಯಾಭ್ಯಾಸಕ್ಕಾಗಿ ತೆರಳುತ್ತಿದ್ದೇನೆ," ಎಂದು ತಮ್ಮ ಹೆಸರು ಹೇಳಿ ಪ್ರಯಾಣ ಪತ್ರಗಳನ್ನು ತೋರಿಸಿದರು. ಸೈನಿಕನಿಗೆ ತನ್ನ ತಪ್ಪು ಅರಿವಾಗಿ, ಮಾತೃಭೂಮಿಯ ಪ್ರೇಮ ಉಕ್ಕೇರಿ ಸಲಾಮರನ್ನು ತಬ್ಬಿ, ಭವಿಷ್ಯತ್ತಿನಲ್ಲಿ ಶುಭವಾಗಲೆಂದು ಹಾರೈಸಿದ.

ಮರುದಿನ ವಿಶಾಲವಾದ 'ಎಂಟೋನಿಯೋ' ಹಡಗಿನಲ್ಲಿ ಹೊಸ ಕನಸುಗಳನ್ನು ಹೊತ್ತ ಸಲಾಮರ ಪ್ರಯಾಣ ಆರಂಭವಾಯಿತು. ಹಡಗಿನಲ್ಲಿ 600 ಮಂದಿ ಇಟಲಿಯ ಸೆರೆಯಾಳುಗಳು ಮತ್ತೆ ಸುಮಾರು 600 ಬ್ರಿಟಿಷ್ ಜನ ಇಂಗ್ಲೆಂಡಿಗೆ ಪ್ರಯಾಣಿಸುತ್ತಿದ್ದರು. ಮೇಲೆ ಅನಂತವ್ಯಾಪಿಯಾಗಿ ಪಸರಿಸಿರುವ ಆಕಾಶ, ಕೆಳಗೆ ದಿಗಂತಕ್ಕೆ ದೂರ ಮೈ ಚೆಲ್ಲಿರುವ ಜಲರಾಶಿ. ಸಲಾಮರ ಮೊತ್ತ ಮೊದಲ ಸಮುದ್ರ ಪ್ರಯಾಣದ ಅನುಭವ ಅದಾಗಿತ್ತು.

## ಪ್ರತಿಭೆ ಮಿಂಚಿತು

ಗಣಿತ ಸಲಾಮರ ನೆಚ್ಚಿನ ಸಂಗಾತಿ. ಗಣಿತದಲ್ಲಿ ಅವರ ಪ್ರತಿಭೆ ಈ ಮೊದಲೇ ಪ್ರಕಟವಾಗಿತ್ತು. ವಿಜ್ಞಾನದ ಎಲ್ಲ ರಂಗಗಳಿಗೂ ಮೂಲ ಅಡಿಪಾಯ ಗಣಿತಶಾಸ್ತ್ರ. ಸಲಾಮರು ಗಣಿತದಲ್ಲಿ ಉಚ್ಚ ಪದವಿ ಪಡೆಯಲು ವ್ಯಾಸಂಗ ಪ್ರಾರಂಭಿಸಿದ್ದು ಪದವಿಯ ವ್ಯಾಮೋಹಕ್ಕಿಂತ ಹೆಚ್ಚಾಗಿ ಅದರ ಮೇಲಿನ ನಿರ್ವ್ಯಾಜ ಪ್ರೇಮದಿಂದ ಮತ್ತು ಗಣಿತದ ಅಂತರಾಳದ ಮರ್ಮವನ್ನು ಅರಿಯುವ ಕೌತುಕ ಬುದ್ಧಿಯಿಂದ. ಪರದೇಶದಲ್ಲೂ ಗಣಿತದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವುದರ ಮೂಲಕ ಅವರು ತಮ್ಮ ಗಣಿತ ವಿದ್ವತ್ತನ್ನು ಮೆರೆದರು.

ಇದೇ ಕಾಲದಲ್ಲಿ ಪಾಲ್ ಡಿರ್ಯಾಕ್, ವೂಲ್ಫ್‌ಗಾಂಗ್, ಪೌಲಿ ಮೊದಲಾದ ಶ್ರೇಷ್ಠ ಭೌತಶಾಸ್ತ್ರಜ್ಞರ ವಿದ್ವತ್ಪೂರ್ಣ ಭಾಷಣಗಳನ್ನು ಆಲಿಸುತ್ತಿದ್ದ ಸಲಾಮರ ಮನಸ್ಸು ನಿಧಾನವಾಗಿ ಭೌತಶಾಸ್ತ್ರದೆಡೆಗೆ ವಾಲತೊಡಗಿತು. ಸಲಾಮರ ಗಣಿತ ಅಧ್ಯಯನ ಆಗಲೇ ಮುಗಿದಿದ್ದರೂ ಮತ್ತೆ ಒಂದು ವರ್ಷದ ಶಿಷ್ಯವೇತನ ಬಾಕಿ ಉಳಿದಿದ್ದುದರಿಂದ ಸಲಾಮರ ಮೇಲಧಿಕಾರಿ ಫ್ರೆಡ್ ಹಾಯ್ಲ್ ಪ್ರಾಯೋಗಿಕ ಭೌತಶಾಸ್ತ್ರದಲ್ಲಿ ಸಂಶೋಧನೆ ಮಾಡುವಂತೆ ತಿಳಿಸಿದರು. "ಭೌತಶಾಸ್ತ್ರವೆನ್ನುವುದು ಪ್ರಾಯೋಗಿಕ ಸತ್ಯವೇ ಹೊರತು ಕೇವಲ ಸಿದ್ಧಾಂತವಲ್ಲ. "ಸಲಾಮ್, ಈ ಕೊನೆ ವರ್ಷವನ್ನು ಪ್ರಾಯೋಗಿಕ ಭೌತಶಾಸ್ತ್ರಕ್ಕೆಂದು ಮೀಸಲಿಡಿ" ಎಂಬ ಹಾಯ್ಲರ ಪ್ರಾಮಾಣಿಕ ಅನಿಸಿಕೆಯಿಂದ ಪ್ರಭಾವಿತರಾದ ಸಲಾಮರು ಪ್ರಾಯೋಗಿಕ ಭೌತಶಾಸ್ತ್ರದಲ್ಲಿ ಅಧ್ಯಯನ ಪ್ರಾರಂಭಿಸಿದರು. ಸಲಾಮರೇ ಹೇಳುವಂತೆ, "ಈ ಅವಧಿ ನನ್ನ ಜೀವಮಾನದ ಅತಿ ಜಟಿಲ ಸಮಸ್ಯೆಗಳನ್ನು ತಂದೊಡ್ಡಿದ ಕಾಲ. ನಾನು ಅಲ್ಪಕಾಲದಲ್ಲಿ ಪ್ರಾಯೋಗಿಕ ಭೌತಶಾಸ್ತ್ರದ ಎಲ್ಲ ನಾಜೂಕು ಕಲೆಗಳನ್ನು ಕರಗತಗೊಳಿಸಿಕೊಳ್ಳಬೇಕಾಗಿತ್ತು." ಆದರೆ ಸಲಾಮರು ತೀವ್ರ ಛಲದಿಂದ ತುಸು ಕಾಲದಲ್ಲಿ ಪ್ರಾಯೋಗಿಕ ಭೌತಶಾಸ್ತ್ರದ ಎಲ್ಲ ಸೂಕ್ಷ್ಮಗಳನ್ನು ಅಭ್ಯಸಿಕೊಂಡು ಅಭಿವ್ಯಕ್ತಗೊಳಿಸುವಲ್ಲಿ ಸಫಲರಾದರು.

ಫಲಿತಾಂಶಗಳನ್ನು ನೋಡುವುದಕ್ಕೆಂದು ಸಲಾಮರು ಕ್ಯಾವೆಂಡೀಷಿಗೆ ತೆರಳಿದರು. ಫಲಿತಾಂಶವನ್ನು ನೋಡಿ ಮರಳುವಾಗ ಡೆನ್ನಿಸ್ ವಿಲ್ಕಿನ್ಸನ್ ಎಂಬವರ ಭೇಟಿಯಾಯಿತು. ಸಲಾಮರು ಆರಂಭದಲ್ಲಿ ಪ್ರಾಯೋಗಿಕ ಭೌತಶಾಸ್ತ್ರಜ್ಞನಾಗಿ ಇತರರಂತೆ ಪ್ರತಿಭಾವಂತರಾಗಿಲ್ಲದ್ದುದರಿಂದ ಅವರು ಈತನೊಬ್ಬ 'ಬೇಡದ ವಿದ್ಯಾರ್ಥಿ'ಯೆಂದು ತಿಳಿದಿದ್ದರು. ಬಹುಶಃ ಸಲಾಮರು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರಬಹುದೆಂದು ಗ್ರಹಿಸಿ ವಿಲ್ಕಿನ್ಸನ್ನರು ಕಾತರದಿಂದ ಸಲಾಮರ ಫಲಿತಾಂಶದ ಬಗ್ಗೆ ವಿಚಾರಿಸಿದರು. "ನಾನು ಪ್ರಾಯೋಗಿಕ ಭೌತಶಾಸ್ತ್ರದಲ್ಲಿ ಪ್ರಥಮ ಸ್ಥಾನ ಗಳಿಸಿದ್ದೇನೆ" ಎಂದು ಸಲಾಮರು ನುಡಿದದ್ದೇ ತಡ ಆಶ್ಚರ್ಯಚಕಿತರಾಗಿ ವಿಲ್ಕಿನ್ಸನ್ ಉದ್ಗರಿಸಿದರು: "ಜನರನ್ನು ಅಳೆಯುವುದರಲ್ಲಿ ನಾವು ಅದೆಷ್ಟು ತಪ್ಪುತ್ತೇವೆಂಬುದು ಇದರಿಂದ ತಿಳಿಯುತ್ತದೆ."

ಸಲಾಮರು ಗಣಿತಶಾಸ್ತ್ರ, ಭೌತಶಾಸ್ತ್ರ ಎರಡರಲ್ಲೂ ಪ್ರಥಮ ಸ್ಥಾನ ಗಳಿಸಿ ಸೇಂಟ್ ಜಾನ್ ವಿದ್ಯಾಲಯದ ಇತಿಹಾಸ ಬರೆದರು. ಭೌತಶಾಸ್ತ್ರದಲ್ಲಿ ಹೊಸ ಹೊಸ ಸಂಶೋಧನೆಗಳನ್ನು ತರ್ಕಸಹಿತವಾಗಿ ಮಂಡಿಸುವುದಕ್ಕೆ ವಿಜ್ಞಾನಿಯಾದವನು ಗಣಿತಶಾಸ್ತ್ರದಲ್ಲಿ ವಿಶೇಷ ಜ್ಞಾನಿಯಾಗಿರಬೇಕಾದದ್ದು ಅನಿವಾರ್ಯ. ಸಲಾಮರು ಎರಡೂ ಕ್ಷೇತ್ರಗಳಲ್ಲಿ ಪ್ರತಿಭಾಪೂರ್ಣರಾಗಿದ್ದುದರಿಂದ ವಿಜ್ಞಾನ ಕ್ಷೇತ್ರದಲ್ಲಿ ಭವ್ಯ ಭವಿಷ್ಯತ್ತು ಕಾದಿತ್ತು.

ಸಲಾಮರು ಮೊದಲಿಗೆ ಟ್ರೀಟಿಯಮ್ ಮತ್ತು ಡ್ಯುಟೀರಿಯಮ್ಮಿನ ಚದರುವಿಕೆಯ ಮೇಲೆ ಸಂಶೋಧನೆ ಪ್ರಾರಂಭಿಸಿದರು. ದಿನೇ ದಿನೇ ಪ್ರಾಯೋಗಿಕ ಭೌತಶಾಸ್ತ್ರ 'ಕಬ್ಬಿಣದ ಕಡಲೆ'ಯಾಗತೊಡಗಿತು. ಅನುಸರಣೆಗೆ ಸಾಧ್ಯವಾಗದ ಪ್ರಾಯೋಗಿಕತೆಯಿಂದ ದೂರ ಸರಿದು ತಾತ್ವಿಕ ಭೌತಶಾಸ್ತ್ರಕ್ಕೆ ಮೊರೆ ಹೋಗತೊಡಗಿದರು. ಪಿ. ಟಿ. ಮ್ಯಾಥ್ಯೂ (ಈಗ ಬಾತ್ ವಿಶ್ವವಿದ್ಯಾನಿಲಯದ ಉಪಕುಲಪತಿಗಳು) ಎಂಬವರನ್ನು ಭೆಟ್ಟಿಯಾಗಲು ಸಲಾಮರಿಗೆ ಅವರ ಹಿತೈಷಿಗಳು, ಸಹೋದ್ಯೋಗಿಗಳು ಸೂಚಿಸಿದರು.

ಸಲಾಮರು ಮಾಥ್ಯೂ ಅವರನ್ನು ಭೇಟ್ಟಿಯಾಗಿ, "ಪರಿಹಾರವಾಗದೆ ಉಳಿದಿರುವ ಯಾವುವಾದರೂ ಸಮಸ್ಯೆ ಗಳಿವೆಯೆ?" ಎಂದು ಕೇಳುವಾಗ ಕಣ್ಣುಗಳಲ್ಲಿ ಕುತೂಹಲ, ಆತ್ಮವಿಶ್ವಾಸ ಮಿಂಚುತ್ತಿತ್ತು. ತರುಣದ ದಿಟ್ಟ ಪ್ರಶ್ನೆ, ಅದರ ಹಿಂದೆ ಅಡಗಿರುವ ಆತ್ಮ ವಿಶ್ವಾಸದಿಂದ ಖುಷಿ ಗೊಂಡ ವ್ಯಾಥ್ಯೂ ಈ ರೀತಿ ನುಡಿದರು: "ಜಟಿಲವಾದ ಅತಿ ದೊಡ್ಡ ಸಮಸ್ಯೆಗಳಲ್ಲಿ 'ಮಿಸಾನ್ ಸಿದ್ಧಾಂತದಲ್ಲಿ ಪುನರ್ ಪ್ರಾಕೃತೀಕರಣ ಪ್ರಕ್ರಿಯೆ' ಒಂದು. ನಾನು ಮೂರು ವರ್ಷಗಳಿಂದ ಇದಕ್ಕಾಗಿ ಶ್ರಮಿಸಿದೆ. ಎರಡು ಅಂತಸ್ತುಗಳಲ್ಲಿ ಮಾತ್ರ ಸಾಧಿಸಲು ಸಾಧ್ಯವಾಯಿತು. ಎಲ್ಲಾ ಅಂತಸ್ತುಗಳಲ್ಲಿ ಸಾಧಿಸಬೇಕಾದ್ದು ಅಗತ್ಯ..." ಸಲಾಮರು ಫ್ರೀಮೆಲಾ ಡೈಸನ್ ಎಂಬವರ ಸಹಕಾರದೊಂದಿಗೆ ಕೇವಲ ಮೂರು ತಿಂಗಳಲ್ಲಿ ತಕ್ಕ ಪರಿಹಾರ ಕಂಡುಹಿಡಿದರು. ಇವರ ಅಪೂರ್ವ ಸಂಶೋಧನೆಗೆ ಡಾಕ್ಟರೇಟ್ ಲಭಿಸಿತು. "ಆತ ನನ್ನ ಪ್ರತಿಭೆಯ ಪೂರ್ಣವಿಕಾಸಕ್ಕೆ ಜವಾಬುದಾರಿ," ಎಂದು ಸಲಾಮರು ಈಗಲೂ ಡೈಸನ್ನರನ್ನುಗೌರವಿಸುತ್ತಾರೆ. ಸಲಾಮರಿಗೆ ಡಾಕ್ಟರೇಟ್ ಪದವಿ ಸಿಗುವ ಮೊದಲೆ ಅಮೇರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯವು ಸಂಶೋಧನ ವೇತನವನ್ನು ನೀಡಿತು. ಸಲಾಮರು ಇದನ್ನು ಸದುಪಯೋಗಪಡಿಸಿಕೊಂಡು ಆರು ತಿಂಗಳ ವರೆಗೆ ಸಂಶೋಧನೆ ನಡೆಸಿದರು. ಅದಾಗಲೇ ಭೌತಶಾಸ್ತ್ರದಲ್ಲಿ ಆಳವಾದ ಮುದ್ರೆಯನ್ನೊತ್ತಿದ್ದ ಸಲಾಮರು, ಅಪರಿಹಾರ್ಯವಾಗಿ ಉಳಿದ ಹಲವು ಸಮಸ್ಯೆಗಳಿಂದ ಆಕರ್ಷಿತರಾದರು. ಆ 'ತಸ್ಕರಶೋಧನೆಗೆ' ತಮ್ಮ ಅಗಾಧ ಬುದ್ಧಿಶಕ್ತಿಯನ್ನು ವಿನಿಯೋಗಿಸಿದರು.

### ಐನ್‌ಸ್ಟೈನ್ ಕನಸು

ವಿಶ್ವದ ಪ್ರತಿ ವಸ್ತುವೂ ಮೂಲಭೂತ ಕಣಗಳಾದ ಧನಾವಿಷ್ಟ ಪ್ರೋಟಾನ್, ಋಣಾವಿಷ್ಟ ಇಲೆಕ್ಟ್ರಾನ್, ಆವೇಶರಹಿತ ಕಣಗಳಾದ ನ್ಯೂಟ್ರಾನ್ ಮತ್ತು ನ್ಯೂಟ್ರಾನಿಯೋಗಳಿಂದ ಮಾಡಲ್ಪಟ್ಟಿದೆ. ಈ ಪ್ರಾಥಮಿಕ ಕಣಗಳು ಗುರುತ್ವಾಕರ್ಷಣ ಬಲ, ವಿದ್ಯುತ್ಕಾಂತ ಬಲ, ದುರ್ಬಲ ಬೀಜ ಕೇಂದ್ರ ಬಲ (Weak nuclear force) ಮತ್ತು ಶಕ್ತಿಯುತ ಬೀಜ ಕೇಂದ್ರ ಬಲ (Strong nuclear force) ಎಂಬ ನಾಲ್ಕು ರೀತಿಯ ಬಲಗಳನ್ನು ಸೃಜಿಸಿ, ಆ ಮೂಲಕ ಭೌತಜಗತ್ತಿನ ಎಲ್ಲ ವಿದ್ಯಮಾನಗಳನ್ನೂ ನಿಯಂತ್ರಿಸುತ್ತವೆ. ತೋರಿಕೆಗೆ ಈ ಬಲಗಳು ಒಂದರಿಂದ ಇನ್ನೊಂದು ಬಹಳಷ್ಟು ವಿಭಿನ್ನವಾಗಿದ್ದರೂ ಸರಿಯಾಗಿ ಪರಿಶೀಲಿಸಿದಲ್ಲಿ ಅಷ್ಟೇ ಅನುರೂಪವೂ ಆಗಿವೆ. ಗುರುತ್ವಾಕರ್ಷಣ ಮತ್ತು ವಿದ್ಯುತ್ಕಾಂತ ಬಲಗಳು ಭೂಮಿಯನ್ನು ಹಿಡಿದು ದೂರದ ಗ್ರಹ, ನಕ್ಷತ್ರ, ಆಕಾಶಗಂಗೆಯ ವರೆಗೆ ಪಸರಿಸಿದ್ದರೆ ಉಳಿದೆರಡು ಬಲಗಳು ಪರಮಾಣುವಿನ ಚಿಕ್ಕ ಪ್ರಪಂಚದಲ್ಲಿ ಮಾತ್ರ ವಿಹರಿಸಬಲ್ಲವು.

ಮರದಲ್ಲಿದ್ದ ಸೇಬು ತೊಟ್ಟು ಕಡಿದು ಮೇಲೆ ಏರದೆ, ನೇರವಾಗಿ ಭೂಮಿಯ ಎಡೆಗೆ ಬೀಳುವುದಕ್ಕೆ ಕಾರಣ ಕಂಡು ಹಿಡಿದ ನ್ಯೂಟನ್ ಅದನ್ನು 'ಗುರುತ್ವಾಕರ್ಷಣ ಶಕ್ತಿ' ಎಂದು ಕರೆದದ್ದು ಸುಪರಿಚಿತ. ವಿಶ್ವದಲ್ಲಿ ಪ್ರತಿ ಕಾಯವು ಒಂದು ಇನ್ನೊಂದನ್ನು ಆಕರ್ಷಿಸುತ್ತಲೇ ಇರುತ್ತದೆ. ಈ ಆಕರ್ಷಣ ಬಲ ಗ್ರಹಗಳ ಚಲನೆಯನ್ನೂ ಜಗತ್ತಿನ ಎಲ್ಲ ಕ್ರಿಯೆಗಳನ್ನೂ ನಿಯಂತ್ರಿಸುತ್ತದೆ. ಈ ಆಕರ್ಷಣ ಬಲವನ್ನು

$$F = \frac{GM_1 x M_2}{d^2 \text{-} 1}$$

ಎಂಬ ಸಮೀಕರಣದಿಂದ ಕಂಡುಹಿಡಿಯಬಹುದು. ಇಲ್ಲಿ ಇಲ್ಲಿ ಎಂ.$^1$ ಎಂ.$^2$ ಎಂಬುದು ಆಯಾ ಕಾಯದ ರಾಶಿ ಮತ್ತು ಡಿ$^2$ ಅವುಗಳ ನಡುವಿನ ಅಂತರದ ವರ್ಗವಾದರೆ, ಜಿ ಎಂಬುದು ಸ್ಥಿರಾಂಕ.

ವಿದ್ಯುತ್ಕಾಂತ ಬಲವು ವಿದ್ಯುತ್ ಬುರುಡೆಯನ್ನು ಪ್ರಕಾಶಿಸುವ ವಿದ್ಯುದ್ಬಲ ಮತ್ತು ಗುಂಡು ಸೂಜಿಯನ್ನು ತನ್ನೆಡೆಗೆ ಸೆಳೆಯುವ ಕಾಂತ ಬಲಗಳ ಸಂಯೋಜನಾ ಬಲ. ಎರಡು ವಿಜಾತೀಯ ಆವೇಶಗಳ ನಡುವಣ ಆಕರ್ಷಣ ಬಲವನ್ನು

$$F = \frac{Cz_1 x z_2}{d^2}$$

ಎಂಬ ಗಣಿತೋಕ್ತಿಯಿಂದ ನಿಗಮಿಸಿದರೆ ಎರಡು ವಿಜಾತೀಯ ಕಾಂತ ಧ್ರುವಗಳ ನಡುವಣ ಆಕರ್ಷಣ ಬಲವನ್ನು

$$F = \frac{Km_1 x M_2}{d^2}$$

ಎಂಬ ಸಮೀಕರಣದಿಂದ ಕಂಡುಹಿಡಿಯಬಹುದು. ತಂತಿಯಲ್ಲಿ ವಿದ್ಯುತ್ ಪ್ರವಹಿಸಿದಾಗ ಕಾಂತಕ್ಷೇತ್ರವೂ ಕಾಂತ ಕ್ಷೇತ್ರದಲ್ಲಿ ತಂತಿ ಚಲಿಸಿದಾಗ ವಿದ್ಯುತ್ ಪ್ರವಾಹವೂ ಉತ್ಪತ್ತಿಯಾಗುವುದನ್ನು ಫ್ಯಾರಡೇ ಮತ್ತು ಮ್ಯಾಕ್ಸ್‌ವೆಲ್ಲರು ತೋರಿಸುವುದರ ಮೂಲಕ ಇವೆರಡು ಬಲಗಳು ವಿದ್ಯುತ್ಕಾಂತಬಲ ಎಂಬ ಒಂದು 'ನಾಣ್ಯ'ದ ಎರಡು ಮುಖಗಳು ಎಂದು ತಿಳಿದು ಬಂತು.

ವಿದ್ಯುತ್ಕಾಂತಬಲ ಮತ್ತು ಗುರುತ್ವಾಕರ್ಷಣ ಬಲಗಳಿರುವ ಸಾದೃಶ್ಯ (ಸಮೀಕರಣಗಳನ್ನು ಹೋಲಿಸಿ ನೋಡಿ) ಐನ್‌ಸ್ಟೈನರಿಗೆ ಈ ಎರಡು ಬಲಗಳು ಒಂದು ಮೂಲದ ಎರಡು ಶಾಖೆಗಳಿರಬೇಕೆಂಬ ಚಿಂತನೆಗೆ ದಾರಿ ಮಾಡಿತು. ಗುರುತ್ವಾಕರ್ಷಣೆಯನ್ನು ವಿದ್ಯುದ್ಗತಿ ವಿಜ್ಞಾನದೊಡನೆ ಏಕೀಕರಿಸಿ 'ಏಕೀಕೃತ ಕ್ಷೇತ್ರ ಸಿದ್ಧಾಂತ'ವನ್ನು ಮಂಡಿಸಲು ಐನ್‌ಸ್ಟೈನರು ತಮ್ಮ ಕೊನೆಯ ಕಾಲವನ್ನು ಮುಡಿಪಿಟ್ಟರು. ದುರದೃಷ್ಟವಶಾತ್ ಈ ಮಹಾ ವಿಜ್ಞಾನಿ ಗುರಿ ತಲುಪುವ ಮೊದಲೆ ಕಾಲರಾಯ ಕಟಕನಾದದ್ದು ನಮ್ಮೆಲ್ಲರ ದುರಂತ.

ಐನ್‌ಸ್ಟೈನರು ಸಂಶೋಧನ ನಡೆಸುತ್ತಿದ್ದ ಕಾಲದಲ್ಲಿ ಗುರುತ್ವಾಕರ್ಷಣ ಮತ್ತು ವಿದ್ಯುತ್ ಕಾಂತ ಬಲ ಅರಿವಿಗೆ ಬಂದಿದ್ದರೆ, ದುರ್ಬಲ ಬೀಜಕೇಂದ್ರಬಲ ಮತ್ತು ಪ್ರಬಲ ಬೀಜಕೇಂದ್ರಬಲಗಳು ಅವರ ಮರಣಾನಂತರ ಪತ್ತೆಯಾಗಿರುವುದರಿಂದ, ಇಂದು ಐನ್‌ಸ್ಟೈನರ ಕನಸು ನನಸು ಮಾಡಲು ಯತ್ನಿಸುವಾಗ ಈ ಎರಡು ಬಲಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಅಬ್ದುಸ್ ಸಲಾಮರು ಐನ್‌ಸ್ಟೈನರ ಪ್ರಯತ್ನದತ್ತ ತಮ್ಮ ಗಮನ ಹರಿಸಿದರು. ಸಲಾಮರು ಗುರುತ್ವಾಕರ್ಷಣ ಬಲ ಮತ್ತು ವಿದ್ಯುತ್‌ಕಾಂತ ಬಲವನ್ನು ಏಕೀಕರಿಸಲು ಸಫಲರಾಗದೆ ಹೋದರೂ ತನ್ನಿಬ್ಬರು ಸಹಕಾರಿಗಳಾದ ಶ್ಲೀಡನ್ ಮತ್ತು ವೈನ್‌ಬರ್ಗರೊಂದಿಗೆ ದುರ್ಬಲ ಬೀಜ ಕೇಂದ್ರಬಲವನ್ನು ವಿದ್ಯುತ್‌ಕಾಂತಬಲದೊಡನೆ ಸಂಯೋಗಿಸುವಲ್ಲಿ ಪೂರ್ಣ ಸಫಲರಾದರು. ಸಲಾಮರ ಏಕೀಕೃತ ಕ್ಷೇತ್ರ ಸಿತ್ಧಾಂತವನ್ನು ಸ್ಥೂಲವಾಗಿ ಅದರ ರೂಪರೇಷೆಗಳಿಂದ ಅರ್ಥವಿಸಿಕೊಳ್ಳಬಹುದೆ ಹೊರತು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಭೌತಶಾಸ್ತ್ರ ಮತ್ತು ಗಣಿತ ಶಾಸ್ತ್ರದಲ್ಲಿ ಆಳವಾದ ಪಾಂಡಿತ್ಯ ಅತಿ ಅಗತ್ಯ.

ಅನಂತಾಲ್ಪಗಾತ್ರದ ಪರಮಾಣುವಿನ ಗಾತ್ರ ಕೇವಲ $10^{-8}$ ಸೆ. ಮಿ. ಈ ಸೂಕ್ಷ್ಮ ಪರಮಾಣುವಿನಲ್ಲಿ ಅಂತರ್ಗತವಾಗಿರುವ ಸೂಕ್ಷ್ಮಾತಿಸೂಕ್ಷ್ಮ ಕಣಗಳು $10^{-16}$ ಸೆ.ಮಿ. ನಷ್ಟು ಹತ್ತಿರವಿದ್ದಾಗ 'ದುರ್ಬಲ ಬೀಜ ಕೇಂದ್ರಬಲದ ಉದ್ಭವಕ್ಕೆ ಕಾರಣವಾಗುತ್ತದೆ. ಈ ಬಲವು ವಿಕಿರಣ ಪಟುತ್ವಕ್ಕೆ, ಭಾರಯುಕ್ತ ಲೋಹಗಳ ಸೃಷ್ಟಿಗೆ ಕಾರಣವಾಗಿದೆ. ಈ ಕ್ಷೀಣ ಬಲವು 'ದುರ್ಬಲ ವೆಕ್ಟಾರ್ ಬೋಸಾನ್'ಗಳೆಂಬ ಕಣಗಳಿಂದ ಕೂಡಿದೆ. ಇದೇ ರೀತಿ ವಿದ್ಯುತ್ಕಾಂತ ಬಲದಿಂದ ಉತ್ಸರ್ಜಿಸಲ್ಪಟ್ಟ ಕ್ಷ ಕಿರಣ ಮೊದಲಾದ ಅನೈಚ್ಛಿಕ ವಿಕಿರಣಗಳು ಶಕ್ತಿಕಣಗಳೆಂಬ ಆವೇಶರಹಿತ ಶಕಲಗಳನ್ನು (ಶಕ್ತಿ ಪೊಟ್ಟಣ—Quant) ಹೊಂದಿರುತ್ತವೆ. ಇವೆರಡರ ಸಂಯೋಗದ ಫಲವೇ ಏಕೀಕೃತ ಕ್ಷೇತ್ರ ಸಿದ್ಧಾಂತ. ಸಲಾಮ್-ವೈನ್‌ಬರ್ಗ್-ಶ್ಲೀಡನ್ ಕ್ಷೇತ್ರ ಸಿದ್ಧಾಂತವು ದುರ್ಬಲ ಬೀಜ ಕೇಂದ್ರ ಬಲ ಮತ್ತು ವಿದ್ಯುತ್ಕಾಂತಬಲವು ದುರ್ಬಲ ವಿದ್ಯುತ್ ಬಲ (electro weak force) ಎಂಬ ಮೂಲದಿಂದ ಹೊರಟಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಸಲಾಮರು ತಮ್ಮ ಸಂಶೋಧನೆಯ ಕುರಿತಾಗಿ ಈ ರೀತಿ ಹೇಳುತ್ತಾರೆ. "ವಿದ್ಯುತ್ಕಾಂತತ್ವ ಮತ್ತು ಕ್ಷೀಣ ಬಲವು ದುರ್ಬಲ ವಿದ್ಯುತ್ ಬಲವೆಂಬ ಏಕ ಬಲದ ಎರಡು ವಿಭಿನ್ನ ರೂಪಗಳೆಂದು ನಮ್ಮ ಸಿದ್ಧಾಂತವು ಏಕೀಕೃತ ಚಿತ್ರಣವನ್ನು ನೀಡುತ್ತದೆ. ಇದನ್ನು ಇನ್ನಷ್ಟು ಸರಳವಾಗಿ ಹೇಳುವುದಾದರೆ ಪರಮಾಣು ಬಾಂಬಿನ ಅಣು ಬಲವು ಅಧ್ಯಯನ ಕೋಣೆಯಲ್ಲೋ ಅಡುಗೆಯ ಮನೆಯಲ್ಲೋ ವಿದ್ಯುದ್ಬಲ್ಬುರುಡೆಯನ್ನು ಪ್ರಕಾಶಿಸುವ ವಿದ್ಯುದ್ಬಲಕ್ಕೆ ಸಮ. ಇಲ್ಲಿ ಶಕ್ತಿಯನ್ನು ರೂಪಾಂತರಗೊಳಿಸಿದಂತೆ (ಚಲನ ಶಕ್ತಿಯನ್ನು ವಿಭವ ಶಕ್ತಿಯಾಗಿ ರೂಪಾಂತರಿಸಿದಂತೆ) ಒಂದು ಬಲವನ್ನು ಇನ್ನೊಂದು ಬಲವಾಗಿ ಮಾರ್ಪಡಿಸುವುದಲ್ಲ. ನಾವು ವಿದ್ಯುತ್ತನ್ನು ತಾಂತ್ರಿಕ ಬಲವಾಗಿ ರೂಪಿಸುವ ಬಗ್ಗೆ ಹೇಳುತ್ತಿಲ್ಲ. ಬದಲಾಗಿ ನಾವು ನಿರ್ದಿಷ್ಟವಾದ ಒಂದು ಬಲ ಇನ್ನೊಂದು ಬಲಕ್ಕೆ ಸಮ ಎಂದು ವಿವರಿಸುತ್ತೇವೆ. ಕೆಲವೊಂದು ಸಂದರ್ಭಗಳಲ್ಲಿ ಬಾಂಬಿನ ಬಲವು ವಿದ್ಯುತ್ತಿನ ಬಲಕ್ಕೆ ಸಮವಾಗಿದೆ."

ವೈಜ್ಞಾನಿಕ ಪರಿಕಲ್ಪನೆಗಳಿಗೆ ಹೊಸ ರೂಪು ಕೊಟ್ಟ "ಏಕೀಕೃತ ಕ್ಷೇತ್ರ ಸಿದ್ಧಾಂತ"ಕ್ಕಾಗಿ ಸಲಾಮ್-ವೈನ್‌ಬರ್ಗ್-ಶ್ಲೀಡನ್ ನೋಬೆಲ್ ಪ್ರಶಸ್ತಿಯನ್ನು ಪಡೆದರು. 'ಸೈನ್ಸ್' ಎಂಬ ಪತ್ರಿಕೆ ಪ್ರಶಸ್ತಿಯ ಬಗ್ಗೆ ಬರೆಯುತ್ತ, "ಪ್ರಶಸ್ತಿ ಪ್ರದಾನವು ದೊಡ್ಡ ಭೌತಶಾಸ್ತ್ರಜ್ಞರಲ್ಲಿ ಅತಿ ಕಡಿಮೆ ಆಶ್ಚರ್ಯ ಮತ್ತು ಅತಿ ಹೆಚ್ಚು ಮೆಚ್ಚುವಂತೆ ಮಾಡಿತು. ಈ ಮೂವರು ವಿಜ್ಞಾನಿಗಳ ಸಂಶೋಧನೆಯು ಭೌತಶಾಸ್ತ್ರದ ಪ್ರಮುಖ ಸಾಧನೆಗಳಲ್ಲಿ ಒಂದೆಂದು ಎಲ್ಲೆಡೆಯೂ ಗೌರವಿಸಲ್ಪಡುತ್ತಿದೆ," ಎಂದಿದೆ. 'ನ್ಯೂಸ್ ವೀಕ್' ಪತ್ರಿಕೆ, "ಸಂಶೋಧನೆಯು ಮಾನವನ ಬೌದ್ಧಿಕತೆಯ ಅಸಾಧಾರಣ ಸಾಧನೆ" ಎಂದು ಹೊಗಳಿತು. ಏಕೆಂದರೆ ಚತುರ್ಬಲಗಳ ಸಂಯೋಗಕ್ಕೆ, ಅಂದರೆ ಸಾರ್ವ

ತ್ರಿಕ ಏಕೀಕೃತ ಕ್ಷೇತ್ರ ಸಿದ್ಧಾಂತದೆಡೆಗೆ ಇದು ಪ್ರಮುಖವಾದ ಪ್ರಥಮ ಮಜಲು. ಗುರುತ್ವಾಕರ್ಷಣ ಶಕ್ತಿಯ ಬಾಹುವಿನಿಂದ ಚಿಮ್ಮಿ ಮುಂದುವರಿಯಲು ರಾಕೆಟ್ ತಂತ್ರ ವಿಜ್ಞಾನದಲ್ಲಿ ಮಜಲು ತಂತ್ರ ತಾನೆ ಉಪಯೋಗಿಸುವುದು!

ಸಲಾಮರ ವೈಜ್ಞಾನಿಕ ಸಾಧನೆ ಇಷ್ಟಕ್ಕೇ ಸೀಮಿತವಾಗಿಲ್ಲ. ಸಲಾಮ್ ಮತ್ತು ಭಾರತೀಯ ಭೌತಶಾಸ್ತ್ರಜ್ಞ ಜೋಗೇಶ್ ಪಾಟಿ ಕ್ಷೀಣ ಬಲ ಮತ್ತು ಪ್ರಬಲ ಬಲಗಳನ್ನು ಒಂದುಗೂಡಿಸುವಲ್ಲಿ ಯಶಸ್ವಿಯಾಗಿ, ಅಪೂರ್ವ ಸಾಧನೆಯನ್ನು ಮಾಡಿದರು. ಪ್ರತಿ ವಸ್ತುವಿನಲ್ಲಿ ಅಡಕವಾಗಿರುವ ಪ್ರೋಟಾನ್ ಎಂಬ ಪ್ರಾಥಮಿಕ ಕಣವು ತುಸು ವಿಕಿರಣಪಟುತ್ವ ಹೊಂದಿದೆ ಎಂಬ ಹೊಸ ವಿಷಯವನ್ನು ಸಲಾಮ್-ಪಾಟಿ ಸಿದ್ಧಾಂತವು ಅರುಹಿತು. ಇದರ ವಿಶಿಷ್ಟ ವಿಕಿರಣಪಟುತ್ವದಿಂದಾಗಿ ಒಂದಲ್ಲ ಒಂದು ದಿನ ಎಲ್ಲ ವಸ್ತುಗಳು ನಾಶವಾಗುವ ಸಾಧ್ಯತೆ ಇದೆ. ಸಲಾಮ್-ಪಾಟಿ ಸಿದ್ಧಾಂತವು ವಿಶ್ವ ಸೃಷ್ಟಿಯ ಅವಸಾನ ರಹಸ್ಯವನ್ನು ಬೇಧಿಸಿತು. ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್ ಅವರು ಕೋಲಾರದ ಚಿನ್ನದ ಗಣಿಯಲ್ಲಿ ಸುಮಾರು 2300 ಮೀಟರ್ ಆಳದೊಳಗೆ ಇರಿಸಿದ 'ಪ್ರೋಟಾನ್ ಸ್ಥಿರತೆ' ಉಪಕರಣದಿಂದ ಸಿದ್ಧಾಂತ ಸತ್ಯತೆ ರುಜುವಾತಾಗುವ ನಿರೀಕ್ಷೆ ಇದೆ.

### ಅಬ್ದುಸ್ ಸಲಾಮ್ ಮತ್ತು ಕುಟುಂಬ:

ಸಲಾಮರು ಅಹರ್ನಿಶಿಯಾಗಿ ವಿಜ್ಞಾನ ಕ್ಷೇತ್ರದಲ್ಲಿ ಆಳವಾಗಿ ವ್ಯವಹರಿಸುತ್ತಿದ್ದರೂ ಸಂಸಾರದೊಡನೆ ಇರುವ ಮಧುರ ಸಂಬಂಧವನ್ನು ಕಡಿದುಕೊಂಡಿಲ್ಲ. 27 ವರ್ಷ ಪ್ರಾಯವಾಗಿದ್ದಾಗ ಗೃಹಸ್ಥಾಶ್ರಮಿಗಳಾದ ಇವರು ಇಂದು ಐದು ಮಕ್ಕಳ ತಂದೆ. ಹಿರಿಯ ಹುಡುಗಿ, ಪಿಯೆಚ್. ಡಿ. ಮಾಡಿ ಅರ್ಬುದದ ಮೇಲೆ ಸಂಶೋಧನೆ ನಡೆಸುತ್ತಿದ್ದಾಳೆ. ಉಳಿದ ಮಕ್ಕಳಾರೂ ವಿಜ್ಞಾನ ಕ್ಷೇತ್ರದಲ್ಲಿ ಅಷ್ಟು ಆಸಕ್ತಿ ಹೊಂದಿಲ್ಲವೆಂದು ಹೇಳುವ ಸಲಾಮರಿಗೆ ಕಿರಿಯ ಹುಡುಗನಿಗೆ ಮಾತ್ರ ವಿಜ್ಞಾನದತ್ತ ಒಲವು ಇದೆಯೆಂದು ಅನ್ನಿಸಿದೆಯಂತೆ! 5 ವರ್ಷದ ಬಾಲಕ ಒಂದು ದಿನ ಸಲಾಮರಿಗೆ, "ಡ್ಯಾಡೀ, ಅನಂತವನ್ನು ಅನಂತಕ್ಕೆ ಕೂಡಿಸಿದರೆ ಎಷ್ಟು?" ಎಂದು ಪ್ರಶ್ನಿಸಿ ಸ್ವತಃ ತಾನೆ ಉತ್ತರ ಬರೆದ: "ನಾನು ಕೂಡಿಸಿದಾಗ ದೊಡ್ಡದೊಂದು ಸೊನ್ನೆ ಸಿಕ್ಕಿತು." 'ಮೆದುಳು ಪಕ್ವವಾಗಿದೆ' ಎಂದು ಗ್ರಹಿಸುವ ನಮಗೇ ಈ ರೀತಿಯ ಸುಂದರ, ನವೀನ ಕಲ್ಪನೆ ಬರುವ ಸಂಭವ ಬಹು ಕಡಿಮೆ. ಆದುದರಿಂದಲೇ ಈ ಹುಡುಗನ ಮೇಲೆ ಅವರು ಹೆಚ್ಚು ಭರವಸೆ ಇಟ್ಟಿರುವುದಾದರೂ, ಆತ ತನ್ನ ಪಡಿಯಚ್ಚು ಆಗದೆ ಸ್ವತಂತ್ರವಾಗಿ ಬೆಳೆದು ಬರಬೇಕೆಂಬ ಮನೋಭಾವ ಅವರದು.

ಸಲಾಮರಿಗೆ ಮಕ್ಕಳೆಂದರೆ ಎಲ್ಲಿಲ್ಲದ ಅಚ್ಚುಮೆಚ್ಚು. ಹಾಸ್ಯ ಪ್ರವೃತ್ತಿಯ ಇವರು ಮಕ್ಕಳೊಡನೆ ಸರಾಗವಾಗಿ ಬೆರೆತು ಮಕ್ಕಳಂತೆ ನಲಿದಾಡ ಬಲ್ಲರು. ನೋಬೆಲ್ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಸಲಾಮರು ಮೂರು ವರ್ಷದ ಮೊಮ್ಮಗನನ್ನು ಕರೆದೊಯ್ದರು. ಸಾಮಾನ್ಯವಾಗಿ ನೋಬೆಲ್ ವಿಜೇತರು ಚಿಕ್ಕ ಮಕ್ಕಳನ್ನು ಕರೆದುಕೊಂಡು ಹೋಗುವ ಉಸಾಬರಿಗೆ ತೊಡಗುವುದಿಲ್ಲ. ಬಹುಶಃ ಗಣ್ಯರ, ಘನ ವಿದ್ವಾಂಸರ, ದೇಶದ ರಾಜ ರಾಣಿಯರ ಸಮಕ್ಷಮದಲ್ಲಿ ನಡೆಯುವ ಆ ಗಂಭೀರ ಸಮಾರಂಭದ ಅಂದವನ್ನು ಚಿಕ್ಕ ಮಕ್ಕಳ ಮುಗ್ಧ ಗಲಾಟೆ ಕೆಡಿಸೀತೆಂಬ ಭಯವಿರಬೇಕು. ಇಲ್ಲದೆ ಹೋದರೆ ಅಭಿಪ್ರಾಯ ವಿನಿಮಯಕ್ಕೆ ಪೋರರು ಅಡ್ಡಿ ತಂದಾರೆಂಬ ಮುಂಜಾಗ್ರತೆ ಇರಬೇಕು. ಅಬ್ದುಸ್ ಸಲಾಮರಂತೂ ಮಗುವಿನ ತೊದಲ ನುಡಿಗಳಲ್ಲಿ ಸುಖ-ಸಂತೋಷಗಳನ್ನೂ ಕಾಣುವರು. ಸಲಾಮರೆ ಹೇಳುವಂತೆ ಇಡೀ ಸಭಾಭವನ ನಿಶ್ಶಬ್ದವಾಗಿದ್ದಾಗ ಅವರ ಮೊಮ್ಮಗನ ಸ್ವರ ಕೇಳಿ ಬರುತ್ತಿತ್ತಂತೆ. ಏಕೀಕೃತ ಕ್ಷೇತ್ರ ಸಿದ್ಧಾಂತವನ್ನು ಪ್ರತಿಪಾದಿಸಿ ಐನ್‌ಸ್ಟೈನ್ ಆತ್ಮವನ್ನು ರಮಿಸಿದ, ಬಿಳಿ ಗಡ್ಡದ ಚುರುಕುಗಣ್ಣಿನ ಭವ್ಯಾಕಾರದ ಸಲಾಮ್ ವಾಮನಮೂರ್ತಿ ಚೋಟಿ ಹುಡುಗನನ್ನು ರಮಿಸುವ ದೃಶ್ಯ ಹೇಗಿದ್ದಿರಬಹುದು?

### ಪ್ರತ್ಯೇಕ ವೃತ್ತಗಳು:

ಸಲಾಮ್ ನಿಷ್ಠಾವಂತ, ವಿಶಾಲ ಹೃದಯದ ಮುಸ್ಲಿಂ ಅನುಯಾಯಿ. ಮೂಲತಃ ಇವರು, 'ಹಜ್ರತ್ ಮಿರ್ಜಾ ಗುಲಾಮ್' ಇವರಿಂದ ಸ್ಥಾಪಿಸಲ್ಪಟ್ಟ ಅಹಮದೀಯ ಪಂಥಾನುಯಾಯಿಗಳು. "ವಿಜ್ಞಾನ ಮತ್ತು ಧರ್ಮ ಸಂಪೂರ್ಣವಾಗಿ ಎರಡು ವಿಭಿನ್ನ ವೃತ್ತಗಳು. ಒಂದು ಕ್ಷೇತ್ರದಲ್ಲಿ ಇದ್ದ ನಿಮ್ಮ ಅಭಿಪ್ರಾಯ ಇನ್ನೊಂದು ಕ್ಷೇತ್ರದಲ್ಲಿರುವ ನಿಮ್ಮ ಭಾವನೆಯ ಮೇಲೆ ಪ್ರಭಾವ ಬೀರಲಾರವು. ನಾವು ಧರ್ಮ ಮತ್ತು ಭೌತಶಾಸ್ತ್ರವನ್ನು ಒಂದೇ ಚೌಕಟ್ಟಿನಲ್ಲಿ ನಿರೂಪಿಸುವ ಪ್ರಮಾದ ಮಾಡುತ್ತಿದ್ದೇವೆ." ಈ ರೀತಿ ಧರ್ಮ ಮತ್ತು ವಿಜ್ಞಾನ ಪ್ರತ್ಯೇಕ

ವಾದ ಎರಡು ಕ್ಷೇತ್ರಗಳಾದುದರಿಂದ, ಅವುಗಳನ್ನು ಪ್ರತ್ಯೇಕವಾಗಿರಿಸಲು ಸಲಾಮರು ಭಿನ್ನವಿಸಿಕೊಳ್ಳುತ್ತಾರೆ.

"ಸುತ್ತಲಿನ ಪರಿಸರದ ಬಗ್ಗೆ ಪ್ರತಿಯೊಬ್ಬನು ಎಚ್ಚರದಿಂದಿರಬೇಕಾದದ್ದು ಅತಿ ಅಗತ್ಯ. ಭಾರತ ಮತ್ತು ಪಾಕಿಸ್ತಾನದಲ್ಲಿ ಧರ್ಮಕ್ಕೆ ತೀವ್ರ ಪ್ರಾಮುಖ್ಯ ನೀಡಿ ಅನುಭಾವದ ವಾದದ ಮೂಲಕ ಎಳೆಯ ಮಕ್ಕಳನ್ನು ವಿಜ್ಞಾನದ ಹಾದಿಯಿಂದ ದೂರ ಸರಿಸಲಾಗುತ್ತಿದೆ. ಕೇವಲ ಮೂಢ ನಂಬಿಕೆಯ ತತ್ವಗಳನ್ನು ಪ್ರತಿಪಾದಿಸುವ ಮತದ ಕುರಿತಾಗಿ ಜಾಗ್ರತೆ ವಹಿಸಬೇಕು. ಆಳ ಪಾಂಡಿತ್ಯವುಳ್ಳ ಧಾರ್ಮಿಕ ಚಿಂತನೆಗಳನ್ನು ವೈಜ್ಞಾನಿಕ ತತ್ವಗಳೊಡನೆ ಬೆರೆಸುವುದು ಶೋಚನೀಯ. ನಮ್ಮೆಲ್ಲಾ ವೈಜ್ಞಾನಿಕ ಪರಿಕಲ್ಪನೆಗಳು ನಾಳೆಗೆ ಬದಲಾಗಲು ಸಾಧ್ಯ. ಅದಕ್ಕನುಗುಣವಾಗಿ ಧಾರ್ಮಿಕ ತತ್ವಗಳನ್ನುಬದಲಾಯಿಸಲು ಸಾಧ್ಯವೆ? 'ಸ್ವರ್ಗ ಮತ್ತು ನರಕಗಳು ಕೇಂದ್ರೀಕರಿಸಲ್ಪಟ್ಟ ಆವಕಾಶದಲ್ಲಿ ಬಹಳ ಸಮೀಪದಲ್ಲಿವೆ. ನಂತರ ಇವು ದೂರ ಸರಿಯಲ್ಪಟ್ಟವು'-ಖುರಾನಿನಲ್ಲಿ ಬರುವ ಪಠ್ಯದ ಸಾಲನ್ನು 'ಬ್ರಹ್ಮಾಂಡ ಮೊಟ್ಟೆ ಆಸ್ಫೋಟನೆ' (Big bang)ಯಿಂದ ವಿಶ್ವ, ಕಾಲ ಮತ್ತು ಅವಕಾಶಗಳು ಪ್ರಾದುರ್ಭವಿಸಿದ್ದಕ್ಕೆ ಹೋಲಿಸುವರು. ಭವಿಷ್ಯತ್ತಿನಲ್ಲಿ ಆ ಸ್ಫೋಟನ ಸಿದ್ಧಾಂತವು ಸುಳ್ಳೆಂದು ಸಾಧಿತವಾದರೆ ಖುರಾನಿನಲ್ಲಿ ಬರುವ ಸುಂದರ ಮಾತನ್ನು ನಮ್ಮಿಂದ ತಿರಸ್ಕರಿಸಲು ಸಾಧ್ಯವೇ ? ಮತ ಮತ್ತು ವಿಜ್ಞಾನಗಳ ನಡುವಣ ಸಂಘರ್ಷಕ್ಕೆ ಈ ರೀತಿಯ ತಪ್ಪು ವರ್ತನೆಯೇ ಕಾರಣ." ಇದು ಮತ-ವಿಜ್ಞಾನಗಳ ಅಂತರ ಸಂಬಂಧದ ಬಗ್ಗೆ ಸಲಾಮರ ಅಭಿಮತ.

ಆಲ್ಬರ್ಟ್ ಐನ್‌ಸ್ಟೈನ್ ಜೀವನ ಚರಿತ್ರೆಯಲ್ಲಿ ಒಂದು ಘಟನೆ ಬರುತ್ತದೆ. ಕ್ಯಾಂಟರ್ಬರಿಯ ಆರ್ಚ್‌ಬಿಷಪ್ಪರು, "ಐನ್‌ಸ್ಟೈನ್ ಪ್ರಭೃತಿಗಳೇ, ಸಾಪೇಕ್ಷತಾ ಸಿದ್ಧಾಂತದಿಂದ ನಮ್ಮ ಮತ ಧರ್ಮಶಾಸ್ತ್ರದ ಮೇಲೆ ತೀವ್ರ ಪರಿಣಾಮವಾಗಿದೆಯೆಂದು ಕೇಳಿದ್ದೇನೆ. ನಿಜ ಸಂಗತಿ ಏನು? ಮಾನವನ ನೈತಿಕ ಹಾಗೂ ಆಸ್ತಿಕ ಪ್ರಜ್ಞೆಯ ಮೇಲೆ ಇದರ ಪ್ರಭಾವವೇನೆಂದು ವಿವರಿಸುವಿರಾ?" ಎಂದು ಐನ್‌ಸ್ಟೈನ್‌ರನ್ನು ಪ್ರಶ್ನಿಸಿದಾಗ, "ಏನೂ ಪರಿಣಾಮವಿಲ್ಲ. ಅವರಿವರ ಮಾತು ನಂಬಬೇಡಿ, ಸಾಪೇಕ್ಷತಾ ಸಿದ್ಧಾಂತ ಶುದ್ಧ ಅಮೂರ್ತ ವಿಜ್ಞಾನ" ಎನ್ನುವ ಆಶ್ವಾಸನೆಯ ಮಾತು ಸ್ವತಃ ಐನ್‌ಸ್ಟೈನರೇ ಹೇಳಿದಾಗ ಬಿಷಪ್ಪರಿಗೆ ಪೂರ್ಣ ಸಮಾಧಾನವಾಯಿತು. ಅಲ್ಲಿಗೆ ದೇವರು ಬದುಕಿದ! ಕೋಪರ್ನಿಕಸ್, ಗೆಲಿಲಿಯೊ ಪ್ರಕರಣಗಳು ತದ್ರೂಪದಲ್ಲಿ ಮರುಕಳಿಸಲಿಲ್ಲ. ಸಾಪೇಕ್ಷತಾ ಸಿದ್ಧಾಂತ ಶುದ್ಧ ಅಮೂರ್ತ ವಿಜ್ಞಾನವೆಂಬ ಐನ್‌ಸ್ಟೈನರ ಈ ಮಾತು ಧರ್ಮ ಮತ್ತು ವಿಜ್ಞಾನಗಳನ್ನು ಏಕೀಕರಿಸಬಾರದೆಂದು ಸೂಚ್ಯವಾಗಿ ತಿಳಿಸುತ್ತದೆ. ಸಲಾಮರ ಗಂಭೀರ ಚಿಂತನೆ ಧರ್ಮ ಮತ್ತು ವಿಜ್ಞಾನದ ಏಕೀಕರಣದಿಂದಾಗುವ ದುಷ್ಪರಿಣಾಮವನ್ನು ಸರಳ, ಸುಂದರ ಅರ್ಥಗರ್ಭಿತ ವಾದದಿಂದ ಇನ್ನಷ್ಟು ಚೆನ್ನಾಗಿ ವಿವರಿಸುತ್ತದೆ.

ಆದರೆ ಇಂದು 'ವಿಜ್ಞಾನ ಧರ್ಮವನ್ನು ಕೆಡಿಸುತ್ತಿದೆ' ಇತ್ಯಾದಿ ತಲೆಬರಹ ಹೊತ್ತ ಹಲವಾರು ಲೇಖನಗಳು, ಗ್ರಂಥಗಳು ಪ್ರಕಟವಾಗುವುದನ್ನು ನಾವು ಕಾಣಬಹುದು. 'ಟಾವೋ ಆಫ್ ಫಿಸಿಕ್ಸ್', 'ಡ್ಯಾನ್ಸಿಂಗ್ ವುಲೀ' 'ಮಾಸ್ಟರ್ಸ್' ಮೊದಲಾದ ಪ್ರಸಿದ್ಧ ಗ್ರಂಥಗಳಲ್ಲಿ ವಿಜ್ಞಾನ ಮತ್ತು ಧರ್ಮವನ್ನು ಬೆಸೆಯಲು ಪ್ರಯತ್ನಿಸಲಾಗಿದೆ. ಧರ್ಮ ಮತ್ತು ವಿಜ್ಞಾನಗಳೆಂಬ ಎರಡು ಮಹಾಕ್ಷೇತ್ರಗಳ ತುಲನೆ ಸಾಧ್ಯವೇ ? ಟಾವೋ ಆಫ್ ಫಿಸಿಕ್ಸ್ ಗ್ರಂಥದ ಹೆಚ್ಚಿನ ಭಾಗವನ್ನು ನನ್ನ ಕಛೇರಿಯಲ್ಲೇ ಬರೆಯಲಾಯಿತು. ನನ್ನ ಅಭಿಪ್ರಾಯದ ಪ್ರಕಾರ ಈ ಪುಸ್ತಕ ಧರ್ಮ ಮತ್ತು ವಿಜ್ಞಾನ ಈ ಎರಡೂ ಕ್ಷೇತ್ರಗಳನ್ನು ಇನ್ನಷ್ಟು ಅಗ್ಗವಾಗಿಸಿದೆ." ಇದು ಸಲಾಮರ ಪ್ರಾಮಾಣಿಕ ವಿಮರ್ಶೆ.

ವಿಜ್ಞಾನ ಕ್ಷೇತ್ರದಲ್ಲಿ ಅಗಾಧ ದುಡಿಮೆ ಮಾಡಿದ ಮಹಾ ಮಹಾ ವಿಜ್ಞಾನಿಗಳು ಕಠೋರ ನಾಸ್ತಿಕರೆಂಬ ತಪ್ಪು ಭಾವನೆ ಸಾರ್ವತ್ರಿಕವಾಗಿ ಹಬ್ಬಿದೆ. ಪ್ರತಿಯೊಂದನ್ನೂ ಬುದ್ಧಿಯ ಒರೆಗಲ್ಲಿಗೆ ಹಚ್ಚಿ ಶುದ್ಧವೋ? ಖೊಟ್ಟಿಯೋ ? ಎಂದು ಪರೀಕ್ಷಿಸುವ ಐನ್‌ಸ್ಟೈನ್, ಸಿ. ವಿ. ರಾಮನ್, ನೀಲ್ಸ್‌ಬೋರ್, ಅಬ್ದುಸ್ ಸಲಾಮ್ ಮೊದಲಾದ ಮಹಾ ವಿಜ್ಞಾನಿಗಳ ನಿಶಿತಮತಿಯು ಕಾಣದ ದೇವರ ಮೇಲೆ ಕುರುಡು ನಂಬಿಕೆಯನ್ನು ಹೇಗೆ ತಳೆದಿದ್ದೀತು ? ಈ ಪ್ರಚಂಡ ಮೇಧಾವಿಗಳು ಎಂದಿಗೂ ಶುದ್ಧ ನಾಸ್ತಿಕರಾಗಿರಲಿಲ್ಲ! ಅತಿ ವಿಶಾಲ ದೃಷ್ಟಿಯಲ್ಲಿ ಆಲೋಚಿಸುವ ಇವರು ಸಾಮಾನ್ಯರಾದ ನಮಗೆ ನಾಸ್ತಿಕರಾಗಿ ಕಾಣುವ ಸಾಧ್ಯತೆ ಇದೆ. ಉದಾಹರಣೆಗೆ "ವಾಸ್ತವದ ಅಥವಾ ಅಸ್ತಿತ್ವದ ಕ್ರಮಬದ್ಧ ಸುಸಾಂಗತ್ಯದಲ್ಲಿ ಪ್ರಕಾಶಿಸುತ್ತಿರುವ ಸ್ಪಿನೋಝನ ದೇವರನ್ನು ನಂಬುತ್ತೇನೆ. ಜನರ ಅದೃಷ್ಟದ ಬಗ್ಗೆ ಚಿಂತಿಸುವ ದೇವರನ್ನಲ್ಲ" ಎಂಬ ಐನ್‌ಸ್ಟೈನರ ಈ ಪ್ರಸಿದ್ಧ ವಾಣಿ ಮೇಲ್ನೋಟದಲ್ಲಿ ಇವರೊಬ್ಬ

ನಾಸ್ತಿಕನೆಂಬ ಭಾವನೆ ಆಸ್ತಿಕ ಮಹೋದಯರಲ್ಲಿ ಹುಟ್ಟಿಸಿದರೂ ಸ್ವತಃ ಐನ್‌ಸ್ಟೈನರನ್ನು ತಿಳಿದ ಸಲಾಮರು ಈ ರೀತಿ ಹೇಳುತ್ತಾರೆ: "ಪ್ರಾಥಮಿಕ ತತ್ವಗಳನ್ನು ಸಂಶೋಧಿಸುವುದೆ ಧರ್ಮವೆಂದು ಐನ್‌ಸ್ಟೈನ್ ಧರ್ಮವನ್ನು ವ್ಯಾಖ್ಯಾನಿಸಿದರು. ದೇವರು ಕೆಲವೊಂದು ಮೂಲಭೂತ ಸಿದ್ಧಾಂತಗಳ ಸಹಾಯದಿಂದ ಈ ವಿಶ್ವವನ್ನು ಸೃಷ್ಟಿಸಿರಬೇಕು. ಆ ಸಿದ್ಧಾಂತಗಳನ್ನು ಸಂಶೋಧಿಸುವ ಆಕಾಂಕ್ಷೆಯ ದೃಷ್ಟಿಯಲ್ಲಿ ಐನ್‌ಸ್ಟೈನರು ಧರ್ಮಾಚರಣೆಯಲ್ಲಿ ಆಳ ನಂಬುಗೆ ಇಟ್ಟವರಂತೆ ತೋರುತ್ತದೆ. ವಿಜ್ಞಾನಿಯಾದವನು ದೇವರ ಅರಸುವಿಕೆಯಲ್ಲೂ ಸಂಶೋಧನಾತ್ಮಕ ಬುದ್ಧಿಯನ್ನು ಪ್ರದರ್ಶಿಸುತ್ತಾನೆ!

ಸಲಾಮರು ದೇವರ ಮತ್ತು ಮತದ ವಿಷಯವಾಗಿ ಒಂದೆಡೆ ಹೇಳುತ್ತಾರೆ: "ನಾವು ನಮ್ಮ ಸಾಮರ್ಥ್ಯವಿದ್ದಷ್ಟು ಮುಂದುವರಿಯಬೇಕು. ನಮ್ಮಿಂದ ಸಾಧ್ಯವಾಗಲಿಲ್ಲವೆಂಬ ನಿರಾಶಾವಾದ ಸಲ್ಲದು. ಐನ್‌ಸ್ಟೈನ್ ಹೇಳುವಂತೆ 'ದೇವರು ವಿಶ್ವದೊಡನೆ ಲೆತ್ತವಾಡಲಾರ.' ಪ್ರಶಸ್ತಿಗಳು ಸಿಗುವುದು ಕೇವಲ ನಿನ್ನ ಸಾಮರ್ಥ್ಯದಿಂದಲ್ಲವೆಂಬುದನ್ನು ಅರಿತುಕೊಳ್ಳಬೇಕು. ಅವು ದೇವರು ನೀಡುವ ಅಮೂಲ್ಯ ಕಾಣಿಕೆ. ಕೆಟ್ಟ ಕಾರ್ಯಗಳಿಗೆ ಪ್ರತಿಯಾಗಿ ಕೆಟ್ಟದ್ದನ್ನೆ ಕಟಾವು ಮಾಡುವಿ. ಉತ್ತಮ ಕಾರ್ಯಗಳನ್ನು ಮಾಡಿದರೆ ಉತ್ತಮವಾದದ್ದನ್ನೆ ಪಡೆಯುವಿ. ಇದುವೇ ನೈತಿಕ ದೇವರು ಸಾಮಾಜಿಕ ನಡವಳಿಕೆಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆ." ಸಲಾಮರ ಮಾತು ಶ್ರೇಷ್ಠ ವಿಜ್ಞಾನಿಯ ಮಾತಿಗಿಂತ ಹೆಚ್ಚಾಗಿ ಘನತೆವೆತ್ತ ತತ್ವಶಾಸ್ತ್ರಜ್ಞನ ಮಾತಿನಂತಿದೆ. ನಾನು ಕಂಡಿರುವ ಹಾಗೆ ವಿಜ್ಞಾನಿಗಳು ಮಾನವಿಕಶಾಸ್ತ್ರಜ್ಞರಿಗಿಂತ ಹೆಚ್ಚು ವಿಶಾಲ ಅಭಿರುಚಿ, ದೃಷ್ಟಿಕೋನ ಬಳಸಿಕೊಂಡಿರುವರು. ನೋಬೆಲ್ ವಿಜೇತ ಅಬ್ದುಸ್ ಸಲಾಮರ ಈ ನುಡಿ ಅವರದೇ ಆದ ನಡವಳಿಕೆಗೆ ಹಿಡಿದ ಕೈಗನ್ನಡಿ.

### ಶಾಂತಿ ಪ್ರವರ್ತಕ

**ಮಾನವರೊ ದಾನವರೊ ಭೂಮಾತೆಯುನು ತಣಿಸೆ!**
**ಶೋಣಿತವ ನೆರೆಯುವರು ಬಾಷ್ಪ ಸಲವುದಿರೆ? ||**
**ಏನು ಹಗೆ! ಏನು ಧಗೆ! ಏನು ಹೊಗೆ ಈ ಧರಣಿ!**
**ಸೌನಿಕರ ಕಟ್ಟೆಯೇಂ? – ಮಂಕುತಿಮ್ಮ ||**

ಇಪ್ಪತ್ತನೆಯ ಶತಮಾನದ ಮಾನವ ಪರಮಾಣುವಿನಲ್ಲಿ ಬೆಸೆದ ಶಕ್ತಿಯನ್ನು ಹೊರಗೆ ಬಸಿಯುವ ಕಾರ್ಯದಲ್ಲಿ ಯಶಸ್ವಿಯಾದಂದಿನಿಂದ ಮನುಕುಲದ ದುರಂತ ಅಧ್ಯಾಯ ಪ್ರಾರಂಭವಾಗಿದೆ. ಎರಡನೆಯ ಮಹಾಯುದ್ಧವನ್ನು ಕೊನೆಗಾಣಿಸುವದಕ್ಕಾಗಿ ಜಪಾನಿನ ಹೀರೋಶಿಮಾ ನಾಗಸಾಕಿಗಳ ಮೇಲೆ ಪರಮಾಣು ಬಾಂಬನ್ನು ಪ್ರಪ್ರಥಮವಾಗಿ ಹಾಡಿಸಿದಾಗ ಲಕ್ಷಾಂತರ ಮಂದಿ ಮರಣಹೊಂದಿದ್ದಲ್ಲದೆ ಜೀನುಗಳ ರಚನೆಯಲ್ಲಾದ ಬದಲಾವಣೆಯಿಂದಾಗಿ ಅನುವಂಶಿಕ ರೋಗಗಳ ಮಾರಕ ಹೊಡೆತಕ್ಕೆ ತುತ್ತಾಗಿ ಸಹಸ್ರ ಸಂಖ್ಯೆಯಲ್ಲಿ ನರಳುವ ದೃಶ್ಯ ನಮ್ಮೆದುರು ಕಾಣುತ್ತಿರುವಾಗಲೂ ಮಾನವತೆ ಇನ್ನೂ ಎಚ್ಚೆತ್ತಿಲ್ಲ. ರಾಷ್ಟ್ರ ರಾಷ್ಟ್ರಗಳ ನಡುವೆ ಅಣುಬಾಂಬುಗಳ ತಯಾರಿಕೆಗಾಗಿ ನಡೆಯುತ್ತಿರುವ ಪೈಪೋಟಿಯಿಂದಾಗಿ ನಾಗರಿಕತೆಗೆ ಶವವಸ್ತ್ರ ತೊಡಿಸಿದಂತಾಗಿದೆ. ಈ ಕಾರಣದಿಂದಲೇ ಡಿ. ವಿ. ಜಿ. ಯವರು 'ಈ ಧರಣಿ ಸೌನಿಕನ (ಕಟುಕನ) ಕಟ್ಟೆಯೇಂ?' ಎಂದು ಪ್ರಶ್ನಿಸಿಕೊಂಡದ್ದು.

ಅಬ್ದುಸ್ ಸಲಾಮ್ ಎಂಬ ಹೆಸರಿನ ಪೂರ್ಣ ಅರ್ಥ ಶಾಂತಿಯ ಸೇವಕ. ತಂದೆ ಮಗನಿಗೆ ಶಾಂತಿ ಸೇವಕ ಎಂದು ಅರ್ಥ ನೀಡುವ ಹೆಸರನ್ನು ಇರಿಸಿದ್ದು, ಸಲಾಮರು ಅದನ್ನು ಸಾರ್ಥಕ ಪಡಿಸಿದ್ದು ಕಾಕತಾಳೀಯ ನ್ಯಾಯವೆ ಸರಿ. ಸಲಾಮರ ಹೆಸರಿನ ಅರ್ಥಕ್ಕೂ ಅವರ ದೈನಂದಿನ ಜೀವನ ಮತ್ತು ಸಂದೇಶಗಳಿಗೂ ಇರುವ ಸಾದೃಶ್ಯ ಅಚ್ಚರಿ ಹುಟ್ಟಿಸುತ್ತದೆ. 1962ರಲ್ಲಿ ಸಲಾಮರು ವಿಶ್ವಸಂಸ್ಥೆಯ 'ಶಾಂತಿಗಾಗಿ ಪರಮಾಣು' ಎಂಬ ಸಮಿತಿಗೆ ಕಾರ್ಯದರ್ಶಿಯಾಗಿ ನೇಮಕಗೊಂಡರು. ಮಾನವತೆಯ ಪುನರುತ್ಥಾನದ ಧ್ಯೇಯ ಹೊತ್ತ ಈ ಸಮಿತಿಗೆ, ಪ್ರಪಂಚ ಶಾಂತಿಯನ್ನು ಬಯಸುವ ಅಬ್ದುಸ್ ಸಲಾಮರು ಕಾರ್ಯದರ್ಶಿಗಳಾದದ್ದು ಸಮಂಜಸವೆ. ಪ್ರಪಂಚ ಶಾಂತಿಗಾಗಿ ದಕ್ಷತೆಯಿಂದ ದುಡಿದ ಇವರಿಗೆ 1968ರಲ್ಲಿ 'ಶಾಂತಿಗಾಗಿ ಪರಮಾಣು' ಬಹುಮಾನ ಲಭಿಸಿತು.

ಭಾರತ ಮತ್ತು ಪಾಕಿಸ್ತಾನ ಸಯಾಮಿ ಅವಳಿಗಳಂತಿದ್ದು ನಂತರ 1947ರಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಬೇರ್ಪಟ್ಟ ಎರಡು ಪ್ರತ್ಯೇಕ ದೇಹಗಳಂತಿವೆ. ಯಾವಾಗ ಸ್ವಾತಂತ್ರ್ಯ ಲಭಿಸಿತೋ ಅಂದಿನಿಂದಲೆ ನಮ್ಮಿಬ್ಬರಲ್ಲಿ ವೈಮನಸ್ಸು ಹೊಗೆಯಾಡತೊಡಗಿ ಇಪ್ಪರೊಳಗೆ ನೇರ ತಿಕ್ಕಾಟವೂ ಆಗಿಹೋಗಿದೆ. ನಾವು ರಷ್ಯಾದಿಂದ ಆಯುಧ ಸಾಮಗ್ರಿಗಳನ್ನು ತರಿಸಿದರೆ, ಪಾಕಿಗಳು ಅಮೇರಿಕಾದಿಂದ ಆಮದು ಮಾಡಿಕೊಳ್ಳುವುದರ ಮೂಲಕ ಇಂದು ನಾವಿ

ಬ್ಬರು ಪ್ರಪಂಚದ ಎರಡು ಬೃಹತ್ ರಾಷ್ಟ್ರಗಳ ಸೂತ್ರದ ಬೊಂಬೆಗಳು. "ಭಾರತ, ಪಾಕಿಸ್ತಾನಗಳು ಯುದ್ಧ ಸಾಮಗ್ರಿಗಳ ಶೇಖರಣೆಗೆ ತೊಡಗಿರುವುದು ಅದೆಷ್ಟು ಹಾಸ್ಯಾಸ್ಪದ! ನಮಗಂತೂ ಅಗತ್ಯವೆ ಇಲ್ಲದ, ನಷ್ಟದ ಉಸಾಬರಿ. ಪ್ರಗತಿ ಪಥದಲ್ಲಿ ಸಾಗುತ್ತಿರುವ ನಾವು ಇಂಥ ನಿಷ್ಪ್ರಯೋಜಕ ರಂಗಕ್ಕೆ ಇಳಿಯುವುದರ ಅಗತ್ಯ ನನಗರ್ಥ ವಾಗುತ್ತಿಲ್ಲ. ಇರಾನ್-ಇರಾಕ್, ಭಾರತ-ಪಾಕಿಸ್ತಾನಗಳು ಪರಸ್ಪರ ಕಚ್ಚಾಡುವ ಅಗತ್ಯ ಇದೆಯೆ? ರಾಜಿಯ ಪ್ರಸ್ತಾಪವನ್ನು ಮುಕ್ತ ಮನಸ್ಸಿನಿಂದ ಒಪ್ಪಿದರೇನಾದೀತು ? ಆಯುಧಗಳಿಂದ ದೇಶ ಕಟ್ಟುವ ಕಲ್ಪನೆ ಹುಚ್ಚುತನದ್ದು. ದುರದೃಷ್ಟವಶಾತ್ ಅಭಿವೃದ್ಧಶೀಲ ದೇಶಗಳನ್ನಾಳುವ ಮುಖಂಡಂದಿರಿಗೆ ಬಡತನದ ನಿರ್ಮೂಲನಗೊಳಿಸುವ ಪ್ರಥಮಕಾರ್ಯವಾಗಿಲ್ಲ. ಅವರಿಗೆ ಏಳಿಗೆಗಿಂತ ಕರಡಿ ಅಪ್ಪುಗೆಯ (ಶಾಂತಿ ಕದಡುವ) ಪೂರ್ವ ಕಲ್ಪಿತ ವಿಚಾರ ಗಳು ಖಂಡಿತವಾಗಿಯೂ ಬೇಕು!" ಭಾರತ ಮತ್ತು ಪಾಕಿಸ್ತಾನಗಳನ್ನು ಸೇರಿಸಿಕೊಂಡು ಸಲಾಮರು ನೀಡಿದ ಸಂದೇಶ ದಲ್ಲಿ ಬಡ ಜನರ ಮೇಲಿನ ಮಾನವೀಯ ಅನುಕಂಪ, ವಿಶ್ವ ಶಾಂತಿಯ ಕಾಳಜಿ ಧ್ವನಿಸುತ್ತದೆ.

ಸಲಾಮರು ಹೃದಯಾಂತರಾಳದಿಂದ ಆಯುಧಗಳ ಸಂಗ್ರಹವನ್ನು ನಿಲ್ಲಿಸಿ, ಪ್ರಪಂಚವಿಡೀ ಶಾಂತಿಯ ತಾಣ ವಾಗಬೇಕೆಂದು ಶಸ್ತ್ರ ಸಂಗ್ರಹಕಾರರನ್ನು ಬಿನ್ನೈಸಿಕೊಳ್ಳು ತ್ತಾರೆ. ಆಯುಧಗಳ ಸಂಗ್ರಹದಿಂದ ಹಂತ ಹಂತವಾಗಿ ಮಾನವೀಯತೆಯ ಕೊಲೆಯಾಗುತ್ತಿದೆಯೆಂದು ದುಃಖಿಸು ತ್ತಾರೆ. ಅಶಾಂತಿಯ ವಾತಾವರಣವನ್ನು ಹೋಗಲಾಡಿಸಿ ಶಾಂತಿಯ ಪರಿಸರವನ್ನು ಪುನಃ ಸೃಷ್ಟಿಸಬೇಕೆನ್ನುವ ಕಳಕಳಿ ಸಲಾಮರ ಮಾತುಗಳಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. "ನೀವೆಲ್ಲಿಯಾದರೂ ವಿನಾಶಕಾರೀ ಯುದ್ಧ ಸಾಮಗ್ರಿಗಳ ಸಂಶೋಧನೆ ಅಗತ್ಯವೇ? ಎಂದು ಕೇಳಿದ್ದಾದರೆ ನಾನು ಹೌದು ಎನ್ನುತ್ತೇನೆ. ಈಗ ಪ್ರಪಂಚದಲ್ಲಿರುವ ಆಯುಧ ಗಳ ಸಂಗ್ರಹವು ನಮ್ಮನ್ನು ಎಂಟು ಸಲಕ್ಕಿಂತ ಹೆಚ್ಚು ಸಲ ಕೊಲ್ಲಬಲ್ಲದು. ಪ್ರಪಂಚದ ಅರ್ಧಕ್ಕಿಂತ ಹೆಚ್ಚು ವಿಜ್ಞಾನಿ ಗಳು ಬಗೆಬಗೆಯ ಶಸ್ತ್ರಾಸ್ತ್ರ ತಯಾರಿಕೆಯ ಕೈಗಾರಿಕೆಯಲ್ಲಿ ಸಹಾಯ ಮಾಡುತ್ತಿದ್ದಾರೆ! ಪ್ರಪಂಚದ ಕಾಲು ಭಾಗಕ್ಕಿಂತಲೂ ಹೆಚ್ಚು ಕಚ್ಚಾ ಪದಾರ್ಥಗಳು ಯುದ್ಧ ಸಾಮಗ್ರಿ ಗಳ ಉದ್ಯೋಗಕ್ಕೆ ವಿನಿಯೋಗಿಸಲ್ಪಡುತ್ತಿವೆ. ಇದು ನಿಜವಾದ ಕೊಲೆ! ಇದಕ್ಕಿಂತ ಬೇರೆಯಾದ ಶಬ್ದವೆ ಸಿಗುವುದಿಲ್ಲ! ಇಡೀ ವಾಣಿಜ್ಯವು ಶಸ್ತ್ರಾಸ್ತ್ರಗಳ ಔದ್ಯೋಗಿಕತೆಯ ಮೇಲೆ ಅವಲಂಬಿಸಿದೆ. ಇದೇ ಹಣವನ್ನು ಜಗತ್ತಿನ ಬಡ ತನ ನಿವಾರಣೆಗೆ ಬಹಳ ಚೆನ್ನಾಗಿ ಬಳಸಬಹುದು."

ಇಂದು ಪರಮಾಣು ಶಕ್ತಿಯನ್ನು ಸರ್ವೇ ಸಾಮಾನ್ಯ ವಾಗಿ ಎಲ್ಲೆಡೆ ಮಾರಕಶಸ್ತ್ರಗಳ ತಯಾರಿಕೆಗೆ ಮಾತ್ರ ಬಳಸುತ್ತಿರುವುದರಿಂದಾಗಿ, ಪರಮಾಣು ಶಕ್ತಿ ಮಾರಕಾಸ್ತ್ರಗಳ ಮೂಲ ಎನ್ನುವ ಭಾವನೆ ಹರಡಿದೆ. ಆದರೆ ಎಣ್ಣೆ ಬಾವಿ ಗಳು, ಕಲ್ಲಿದ್ದಲಿ ಗಣಿಗಳು ಬರಿದಾಗುತ್ತಿರುವಂತೆ ಶಕ್ತಿ ಮೂಲಗಳ ಕೊರತೆ ಹೆಚ್ಚುತ್ತಿರುವ ಈ ಕಾಲದಲ್ಲಿ, ಪರ ಮಾಣು ಶಕ್ತಿಯು ದೈನಂದಿನ ಜೀವನದ ಹಲವು ಅಗತ್ಯ ಗಳಿಗೆ ಅತ್ಯುತ್ತಮ ಬದಲಿ ವ್ಯವಸ್ಥೆಯಾಗಬಲ್ಲದು. "ನಿಸ್ಸಂದೇಹವಾಗಿ ಅಭಿವೃದ್ಧಿ ಹೊಂದಿರುವ ಮತ್ತು ಹೊಂದಲಿರುವ ಎರಡು ರಾಷ್ಟ್ರಗಳಿಗೂ ಪರಮಾಣುಶಕ್ತಿ ಅಗತ್ಯ. ಅಪಾಯಕಾರಿ ಸಮಸ್ಯೆಗಳನ್ನು ಇದು ಹೆಚ್ಚಿಸ ಬಹುದೆಂದು ಕೆಲವರ ಅಭಿಪ್ರಾಯ. ಆದರೆ ವೈಮಾನಿಕ ಉದ್ಯೋಗದಲ್ಲಿ ಯಾವ ರೀತಿಯ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುತ್ತಾರೋ, ಅದೇ ರೀತಿಯ ಬಲವಾದ ನಿಯ ಮಾವಳಿಗಳನ್ನು ರೂಪಿಸಿದಲ್ಲಿ ಅದು ಇತರೆಲ್ಲ ಶಕ್ತಿಗಳಿಗಿಂತ ಖಂಡಿತವಾಗಿಯೂ ಪರಿಣಾಮಕಾರಿ." ಇದು ಪರಮಾಣು ಶಕ್ತಿಯ ಶಾಂತಿಯುತ ಅಗತ್ಯ ಮತ್ತು ಬಳಸುವಿಕೆಯ ಬಗ್ಗೆ ಸಲಾಮರ ಅಭಿಪ್ರಾಯ.

ವಿಜ್ಞಾನಕ್ಕೆ ಸರಿಯಾದ ಪ್ರೋತ್ಸಾಹವನ್ನು ಭಾರತ ಪಾಕಿಸ್ತಾನಗಳಂಥ ಅಭಿವೃದ್ಧಿಶೀಲ ರಾಷ್ಟ್ರಗಳು ಕೊಡುತ್ತಿಲ್ಲ ವೆಂದು ಸಲಾಮರು ಮರುಗುತ್ತಾರೆ. ಅಮೇರಿಕ, ರಷ್ಯಾ, ಜಪಾನುಗಳಂಥ ಮುಂದುವರಿದ ರಾಷ್ಟ್ರಗಳು, ವೈಜ್ಞಾನಿಕ ತಳಹದಿಯ ಮೇಲೆ ಕಟ್ಟಲ್ಪಟ್ಟಿವೆ, ಯಾವುದೇ ಯಂತ್ರ ಶಾಸ್ತ್ರ, ಕೃಷಿಶಾಸ್ತ್ರ ವಿಜ್ಞಾನದಿಂದ ಹೊರತಾದದ್ದಲ್ಲ. ವೈಜ್ಞಾನಿಕ ಅಡಿಪಾಯವಿಲ್ಲದ ದೇಶದ ಪ್ರಗತಿ ಬಹು ನಿಧಾನ ಇಲ್ಲವೇ ಕುಂಠಿತವಾಗುತ್ತದೆಂಬುದು ಶತಃಸಿದ್ಧ. ಒಮ್ಮೆ ಜವಾಹರಲಾಲರು ದಂತಗೋಪುರಗಳಲ್ಲಿ ಸೀಮಿತ ರಾಗಿರುವ ವಿಜ್ಞಾನಿಗಳು ಮಣ್ಣಿನ ಲೋಕಕ್ಕೆ ಇಳಿಯ ಬೇಕೆಂದು ಕರೆಗೊಟ್ಟಾಗ, ಸಿ. ವಿ. ರಾಮನ್ ನಿರ್ದಾಕ್ಷಿಣ್ಯ ವಾಗಿ ಪ್ರಧಾನಿಯ ಮಾತನ್ನು ಖಂಡಿಸುತ್ತಾ ಹೇಳಿದರು: "ವಾಸ್ತವವಾಗಿ ದಂತ ಗೋಪುರಗಳಲ್ಲಿರುವವರೆ ಗಮನಾರ್ಹರು. ಅವರೇ ಮಣ್ಣಿನ ಸಾರ. ಮಾನವ ಜನಾಂಗದ ಉಳಿವು ಹಾಗೂ ಪ್ರಗತಿ ಇವರನ್ನೇ ಅವಲಂಬಿಸಿದೆ."

ನಿಸರ್ಗದ ಗರ್ಭದಲ್ಲಡಗಿರುವ ಹಲವಾರು ರಹಸ್ಯಗಳನ್ನು ಹೊರಗೆಳೆದು, ನಮ್ಮ ಜೀವನಕ್ಕೊಂದು ಅರ್ಥ ನೀಡುವವರು ವಿಜ್ಞಾನಿಗಳೆಂಬುದರಿಂದಲೆ ಸಿ. ವಿ. ರಾಮನ್ನರು ತನ್ನ ಅಭಿಪ್ರಾಯವನ್ನು ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸಿದರು. ಸಲಾಮರು ಕೂಡ ಇದೇ ರೀತಿಯ ಅಭಿಪ್ರಾಯವನ್ನು ಅಭಿವ್ಯಂಜಿಸುತ್ತಾರೆ. "ವಿಜ್ಞಾನದಿಂದ ಪವಾಡಗಳನ್ನು ಸಾಧಿಸಬಹುದೆಂದು ರಾಜಕಾರಣಿಗಳಿಗೆ ಮನವರಿಕೆಯಾಗಿದೆ. ಆದರೆ ವಿಜ್ಞಾನಿಗಳನ್ನೂ ತಾಂತ್ರಿಕ ಕುಶಲ ಕೆಲಸಗಾರರನ್ನೂ ಸಮಯ ಬಿದ್ದಾಗ ಬಂದು ಸೇವೆ ಸಲ್ಲಿಸುಸುವ ಕೈಕೆಳಗಿನವರೆಂದು ಭಾವಿಸುತ್ತಾರೆ."

ಭಾರತ ಮತ್ತು ಪಾಕಿಸ್ತಾನಗಳಲ್ಲಿ ಹಲವಾರು ಮಂದಿ ಯುವ ವಿಜ್ಞಾನಿಗಳಿದ್ದರೂ ಅವರನ್ನು ಸಮಾಜ ಜೀವನದ ಪ್ರತ್ಯೇಕ ಅಂಗವೆಂದು ಗಣಿಸುತ್ತಿರುವುದರಿಂದ, ಸಂಶೋಧನೆಗೆ ತಕ್ಕ ಉತ್ತೇಜನವಿಲ್ಲದಿರುವುದರಿಂದ ವೈಜ್ಞಾನಿಕ ಪ್ರತ್ಯೇಕತೆಯ ಭಾವನೆಯನ್ನು ಅವರು ಅನುಭವಿಸಬೇಕಾಗುತ್ತಿದೆ. ಹಲವಾರು ಮಂದಿ ವಿಜ್ಞಾನದ ಕಲ್ಪನೆಗಳ ಮೇಲೆ ಹೊಸ ಬೆಳಕು ಚೆಲ್ಲುವ ಸಂಶೋಧನೆ ಗೈದು ಡಾಕ್ಟರೇಟ್ ಪದವಿ ಪಡೆದ ಮೇಲೂ ಸಾಕಷ್ಟು ಪ್ರೋತ್ಸಾಹವಿಲ್ಲದೆ ನಿರಾಶಾವಾದದ ತಿರುಗಣಿಯಲ್ಲಿ ಸಿಲುಕಿ, ಜನಸಾಮಾನ್ಯರಂತೆ ಜಡ ಜೀವನವನ್ನು ನೆಚ್ಚಿ ಕೊಳ್ಳುತ್ತಾರೆಂದು ಸಲಾಮರು ಬೇಸರಿಸುತ್ತಾರೆ.

ವಿಜ್ಞಾನಿಯಾದವನು ಸಾಮಾಜಿಕ ಸಂಬಂಧದಿಂದ, ಜನಜಂಗುಳಿಯ ಜಂಜಾಟದಿಂದ ಆದಷ್ಟು ದೂರವಿದ್ದರೆ ಉತ್ತಮವೆಂದು ರಾಮನ್ನರಿಂದ ಹಿಡಿದು ಸಲಾಮರ ವರೆಗೆ ಹಲವಾರು ಮಂದಿಯ ಅಭಿಪ್ರಾಯ. ವಿಜ್ಞಾನಿಯ ಅದ್ಭುತ ಮೆದುಳಿನಲ್ಲಿ ಅಪರಿಹಾರ್ಯವಾಗಿ ಉಳಿದ ಸಮಸ್ಯೆಗೆ ತಕ್ಕ ಪರಿಹಾರ ಸ್ಫುರಿಸಿ ಯುರೇಕಾ ಎನ್ನುತ್ತಾ ಭಾವಾವೇಶಗೊಳ್ಳುವ ಸನ್ನಿವೇಶದಲ್ಲಿ ಬಾಗಿಲ ಕರೆಗಂಟೆ ಒತ್ತಿ ಏಕಾಗ್ರಚಿತ್ತವನ್ನು ಕೆಡಿಸಿದರೆ ಆತನಿಗೆ ಹೇಗಾಗಬೇಡ? ಸದಾ ವಿಶಾಲ ಬೌದ್ಧಿಕ ಚಿಂತನೆ ನಡೆಸುವ ಅವರಿಂದ ಸಾಮಾನ್ಯ ವಿಷಯಗಳ ಬಗ್ಗೆ ಮಾತನಾಡುವುದನ್ನು ನಾವು ನಿರೀಕ್ಷಿಸಲು ಸಾಧ್ಯವೆ? ಅವರ ಆಸಕ್ತ ಕ್ಷೇತ್ರದ ವಿಚಾರವಾಗಿ ಸಂದರ್ಶಕರು ಕುತೂಹಲಿಗಳಾಗಿ ಪ್ರಶ್ನಿಸಿದಲ್ಲಿ ಅದೆಷ್ಟು ಸಂತಸದಿಂದ ವಿವರಿಸಬಲ್ಲರು! ನೊಬೆಲ್ ಪ್ರಶಸ್ತಿಯನ್ನು ಪಡೆದ ವಿಜ್ಞಾನಿಗಳ ರಚನಾತ್ಮಕ ಚೇತನ ಕುಗ್ಗುವುದಕ್ಕೆ ಸಲಾಮರು ಈ ರೀತಿ ಕಾರಣ ನೀಡುತ್ತಾರೆ: "21 ದಿವಸಗಳ ಕಾಲ ಭಾರತ ಪ್ರವಾಸ ಕಳೆದಂತೆ ಈ ಮೊದಲು ಎಂದೂ ಕಳೆದಿರಲಿಲ್ಲ. ಜನರೊಡನೆ ಸಂಪರ್ಕವಿಟ್ಟು ಅವರೊಡನೆ ಮಾತನಾಡುತ್ತಿರಬೇಕೆಂದು ಪ್ರತಿಯೊಬ್ಬರೂ ನನಗೆ ಸೂಚಿಸುತ್ತಾರೆ. ಆದರೆ ಈಗಾಗಲೇ ನಾನು ಬಹಳಷ್ಟು ದಿನಗಳನ್ನು ಕೇವಲ ಭಾಷಣ ತಯಾರಿಸುವುದರಲ್ಲಿ, ಜನರೊಡನೆ ಮಾತನಾಡುವುದರಲ್ಲಿ ಕಳೆದೆ. ಇದು ಅತೀವ ಪ್ರಯಾಸವನ್ನುಂಟುಮಾಡುತ್ತದೆ.

ಆದರೆ ಒಬ್ಬ ಭೌತಶಾಸ್ತ್ರಜ್ಞ ಇನ್ನೊಬ್ಬ ಭೌತಶಾಸ್ತ್ರಜ್ಞನೊಡನೆ ಭೇಟಿಯಾದಾಗ ಚಿಂತನೆಯ ವಿನಿಮಯದ ಮೂಲಕ ಸಮಸ್ಯೆಯ ಪರಿಹಾರ ಮಾರ್ಗವನ್ನು ಶೋಧಿಸುವ ಸಾಧ್ಯತೆ ಇದೆ. 1950ರ ಸುಮಾರಿಗೆ ಪ್ರಿನ್ಸ್‌ಟನ್ನಿನಿಂದ ಸಲಾಮರು ಪಾಕಿಸ್ತಾನಕ್ಕೆ ತೆರಳಿದಾಗ, ಇಡೀ ಪಾಕಿಸ್ತಾನದಲ್ಲಿ ಸಲಾಮರೊಬ್ಬರೇ ತಾತ್ವಿಕ ಭೌತಶಾಸ್ತ್ರಜ್ಞರಾಗಿದ್ದುದರಿಂದ ವೈಜ್ಞಾನಿಕ ಒಂಟಿತನದ ಅನುಭವ ಇವರಿಗಾಗತೊಡಗಿತು. ಇದೇ ಕಾಲಕ್ಕೆ ಇವರ ಸ್ನೇಹಿತ-ಖ್ಯಾತ ಭೌತಶಾಸ್ತ್ರಜ್ಞ ಪೌಲಿ ಬೊಂಬಾಯಿಗೆ ಬಂದಿದ್ದಾಗ, ಸಲಾಮರನ್ನು ಬರಲು ಆಹ್ವಾನಿಸಿ ತಂತಿ ಕಳಿಸಿದರು. ಸಲಾಮರು ತ್ವರಿತದಿಂದ ಬೊಂಬಾಯಿ ಸೇರಿ, ಪೌಲಿ ಇದ್ದ ಕೋಣೆಯ ಕದ ತಟ್ಟಿದಾಗ ಅದಾವ ಮಾಯದಿಂದ ಸಲಾಮರು ಬಂದರೆಂದು ಗೊತ್ತಿಲ್ಲ, "ಬರೋಣವಾಗಲಿ" ಎಂದು ಧ್ವನಿಸಿತು ಪೌಲಿಯವರ ಸ್ವರ. "ಸುಖ ಪ್ರಯಾಣವಾಯಿತೆ?" ಎನ್ನುವ ಸ್ವಾಗತದ ಉಪಚಾರದ ಬದಲಿಗೆ ಪೌಲಿ ಜೋರಾಗಿ ಅಂದರು (ಅರಚಿದರು) "ಸ್ಟೀವೆಂಜರ್ ತಪ್ಪು ಮಾಡಿದ್ದಾನೆ. ನಾನದನ್ನು ಸಾಧಿಸಿದ್ದೇನೆ." ಎರಡೇ ಎರಡು ಮಾತು ಸಲಾಮರಿಗೆ ಸ್ವಾಗತದ ಉಪಚಾರಕ್ಕಿಂತ ಹೆಚ್ಚು ಆಪ್ಯಾಯಮಾನವೂ ಮುಂದಿನ ದೀರ್ಘ ಚರ್ಚೆ, ಅಭಿಪ್ರಾಯ ವಿನಿಮಯಗಳಿಗೆ ಪೂರ್ವ ಪೀಠಿಕೆಯೂ ಆಯಿತು.

ಸಲಾಮರಿಗೆ ದಿನೇ ದಿನೇ ಬೌದ್ಧಿಕ ಒಂಟಿತನ ಅಸಹನೀಯವಾಗತೊಡಗಿದಾಗ ವಿಜ್ಞಾನಿಗಳ ಕಾಶಿ ಎನಿಸಿದ್ದ ಇಂಗ್ಲಂಡಿಗೆ ಪುನಃ ತೆರಳಲು ನಿಶ್ಚಯಿಸಿದರು. "ನಾನು ನನ್ನ ದೇಶ ಮತ್ತು ಭೌತಶಾಸ್ತ್ರವನ್ನು ಆರಿಸುವ ಇಬ್ಬಂದಿಗೆ ಸಿಲುಕಿದೆ. ಕೊನೆಗೆ ನಾನು ಭೌತಶಾಸ್ತ್ರವನ್ನು ಆರಿಸಿದೆ." ಪಾಕಿಸ್ತಾನವನ್ನು ತ್ಯಜಿಸಿ 30 ವರ್ಷಗಳಾದರೂ, ಇನ್ನೂ ಕೂಡಾ ಅವರು ಪಾಕಿಸ್ತಾನದ ಪೌರತ್ವವನ್ನು ತ್ಯಜಿಸಿಲ್ಲ! ಹುಟ್ಟಿ ಬೆಳೆದ ತಾಯ್ ನೆಲದ ಮೇಲಿನ ಅಪೂರ್ವ ಪ್ರೀತಿ, ಅಭಿಮಾನಗಳಿಗೆ ಇದು ದ್ಯೋತಕ.

ಸಲಾಮರ ಮೇಲೆ ಭಾರತೀಯ ಸಂಸ್ಕೃತಿ ಅಚ್ಚಳಿಯದ ಪ್ರಭಾವ ಬೀರಿದೆಯಂತೆ. ಭಾರತೀಯ ಸಂಸ್ಕೃತಿ, ಹಿಂದಿನ ವೈಜ್ಞಾನಿಕ ಉತ್ಕರ್ಷ ಪುನರುತ್ಥಾನಗೊಳ್ಳಬೇಕೆಂಬ ಹಂಬಲ ಅವರಿಗಿದೆ. ಬುದ್ಧಿಜೀವಿ ಆರ್ಯಭಟ ಒಂದು ವೇಳೆ ಈಗಿರುತ್ತಿದ್ದರೆ ಆತ ಸಮಕಾಲೀನ ಯಾವುದೆ ವಿಜ್ಞಾನಿಗೆ ಸಮಾನವಾಗುತ್ತಿದ್ದ" ಎಂದು ಹೇಳುವ ಸಲಾಮರು ಬ್ರಹ್ಮಗುಪ್ತನನ್ನು ಶ್ರೇಷ್ಠ ಗಣಿತ ವಿದಗ್ಧನೆಂದು ಗೌರವಿಸುತ್ತಾರೆ. ಭಾರತೀಯ ಮಕ್ಕಳಿಗೆ ವೈಜ್ಞಾನಿಕ ಸಂಪ್ರದಾಯವನ್ನು ಹಾಕಿಕೊಟ್ಟು ವಿಜ್ಞಾನ ಕ್ಷೇತ್ರದಲ್ಲಿ ದುಡಿಯುವಂತೆ ಪ್ರೇರೇಪಿಸುವುದಕ್ಕಾಗಿ ಅವರು ಒಂದೆಡೆ ಈ ರೀತಿ ಹೇಳುತ್ತಾರೆ: "ನಾವು ನಮ್ಮ ಮಕ್ಕಳಿಗೆ ಭಾರತದ ವೈಜ್ಞಾನಿಕ ಸಂಪ್ರದಾಯವು ಧಾರ್ಮಿಕ ಸಂಪ್ರದಾಯಕ್ಕಿಂತ ಯಾವ ರೀತಿಯಿಂದಲೂ ಕೀಳು ಮಟ್ಟದ್ದಾಗಿರಲಿಲ್ಲವೆಂದು ಹೇಳಿ ಅವರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಬೇಕು." ಭಾರತ ಮತ್ತು ಚೀನಗಳನ್ನು ಇತರ ಪ್ರಗತಿಶೀಲ ರಾಷ್ಟ್ರಗಳಿಗೆ ಹೋಲಿಸಿದರೆ, ಇವೆರಡು ದೇಶಗಳಲ್ಲಿ ಬಹುಸಂಖ್ಯೆಯಲ್ಲಿ ವಿಜ್ಞಾನಿಗಳಿದ್ದು ತಕ್ಕ ಮಟ್ಟಿಗೆ ಪ್ರೋತ್ಸಾಹಕರ ವಾತಾವರಣ ಇದೆಯೆಂದು ಸಲಾಮರು ಅಭಿಪ್ರಾಯಪಡುತ್ತಾರೆ. ಸಲಾಮರು ಪಾಶ್ಚಾತ್ಯದಲ್ಲಿ ನೆಲೆಸಿದ್ದರೂ ಏಶಿಯದ ಬಗ್ಗೆ ಅವರಿಗೆ ಅಭಿಮಾನವಿದೆ ಎಂಬುದಕ್ಕೆ, "ವೈಜ್ಞಾನಿಕ ಪರಂಪರೆ ಕೇವಲ ಯುರೋಪಿನವರ ಗುತ್ತಿಗೆಯಲ್ಲ! ಅದು ವಿಶ್ವವ್ಯಾಪಿ. ಈ ಕಾರಣದಿಂದಲೆ ನಾನು ಆರ್ಯಭಟನನ್ನು, ಅಲ್ಬರೂನಿಯನ್ನು ಗೌರವಿಸುತ್ತಿರುವುದು" ಎನ್ನುವ ಅವರ ಹೇಳಿಕೆಯೇ ಸ್ಪಷ್ಟ.

ಸಲಾಮರು ದೊಡ್ಡ ವಿಜ್ಞಾನಿಯಾಗಿ ಜಗತ್ಪ್ರಸಿದ್ಧರಾದರೂ ಗುರುಗಳ ನೆನಪು ಮಾಸಿಲ್ಲ. ಅದೇ ಹಿಂದಿನ ನಯ, ವಿನಯ. ಗುರುರ್ಬ್ರಹ್ಮಾ, ಗುರುರ್ವಿಷ್ಣು ಗುರುರ್ದೇವೋ ಪರಮೇಶ್ವರಃ। ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರುವೇ ನ್ನಮಃ' ಎನ್ನುವ ಪೂಜನೀಯ ಭಾವನೆ ಇವರಿಂದ ದೂರವಾಗಿಲ್ಲ. ತಮ್ಮ ಶ್ರೇಯಸ್ಸಿಗೆ ಭದ್ರ ಅಡಿಪಾಯವನ್ನು ಹಾಕಿಕೊಟ್ಟ ಗುರುಗಳನ್ನು ಸಲಾಮರು ಈಗಲೂ ಭಕ್ತಿಭಾವಗಳಿಂದ ನೆನಪಿಸಿಕೊಳ್ಳುತ್ತಾರೆ: "ನಾನು ನನ್ನಉಪಾಧ್ಯಾಯರಿಗೆ ಧನ್ಯನಾಗಿದ್ದೇನೆ. ಅವರಲ್ಲಿ ಕೆಲವರು ನನ್ನ ಬಗ್ಗೆ ವಿಶೇಷವಾದ ಆಸಕ್ತಿ ಇರಿಸಿದ್ದರು. ನನಗೆ ಎಮ್.ಎ.ಯಲ್ಲಿ ವಿದ್ಯೆ ಕಲಿಸಿದ ಡಾ। ಡಿ. ಎನ್. ಗಂಗೂಲಿ ಇವರಲ್ಲೊಬ್ಬರು. ನಾನು ಕಲ್ಕತ್ತಾಗೆ ಭೇಟ್ಟಿಕೊಟ್ಟಾಗ ಅಲ್ಲಿನ ನಿವಾಸಿಗಳಿಗೆ ನನ್ನ ಬದಲಾಗಿ ಡಾ। ಗಂಗೂಲಿಯವರನ್ನು ಸನ್ಮಾನಿಸಲು ಕೇಳಿಕೊಂಡೆ. ಕೇರಳದ ಡಾ। ಚಾಂದಿಲಾಲಾ ಹನ್ಸರಾಜ್ ಬಾಟ್ಲಾ ಮೊದಲಾದವರು ನನ್ನ ಮೇಲೆ ಪ್ರಭಾವ ಬೀರಿದ ಪ್ರಮುಖರು."

### ವಿಜ್ಞಾನವೆ ಉಸಿರು

ವಿಜ್ಞಾನವೇ ತನ್ನುಸಿರು ಎಂದು ದೃಢವಾಗಿ ನಂಬಿರುವ ಸಲಾಮರ ರಕ್ತದ ಪ್ರತಿ ಕಣ ಕಣದಲ್ಲೂ ವಿಜ್ಞಾನದ ಗಾಢ ಪ್ರೇಮ ಹರಿಯುತ್ತಿರುವುದರಿಂದಲೆ ಇವರು ಮಾಡುವ ಎಲ್ಲ ಕಾರ್ಯಗಳ ಹಿಂದೆ ವಿಜ್ಞಾನದ ಅಭಿವೃದ್ಧಿಯ ಉದ್ದೇಶ ಅಡಗಿರುತ್ತದೆ. 1957ರಿಂದ ತಾತ್ವಿಕ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಲಂಡನ್ನಿನ ಇಂಪೀರಿಯಲ್ ಮಹಾ ವಿದ್ಯಾಲಯದಲ್ಲಿ ದುಡಿಯುತ್ತಿರುವ ಇವರು ವಿಜ್ಞಾನರಂಗಕ್ಕೆ ಹೊಸ ಹೊಸ ವಿಜ್ಞಾನಿಗಳನ್ನು ನೀಡಿದ್ದಾರೆ. ಎಷ್ಟೋ ಮಂದಿ ಯುವ ಸಂಶೋಧಕರು ಸಂಶೋಧನಾ ಸಾಮಗ್ರಿಗಳನ್ನು ಸಂಪಾದಿಸುವುದಕ್ಕೆ, ತಯಾರಿಸುವುದಕ್ಕೆ ಆರ್ಥಿಕವಾಗಿ ಅಸಹಾಯಕವಾಗುವುದು ನಮಗೆ ತಿಳಿದ ಕಟು ಸತ್ಯ. ಇಂಥ ವಿಜ್ಞಾನಿಗಳನ್ನು ಪ್ರತ್ಯೇಕ ಮನೋಭಾವನೆಯಿಂದಲೋ ಯಾರೂ ಬೇಡದ ಬುದ್ಧಿಜೀವಿ ಎನ್ನುವ ತುಚ್ಛ ದೃಷ್ಟಿಯಿಂದಲೋ ಕಾಣದೆ ಇವರು ಕೂಡ ದೇಶದ ಒಂದು ಭಾಗವೆಂಬುದನ್ನು ಸಮಾಜ ಅರಿತು, ಅವರ ಸಂಶೋಧನೆಗೆ ಧನಸಹಾಯದ ಮೂಲಕ ಅನುವು ಮಾಡಿಕೊಡಬೇಕು. ಕ್ರೀಡೆಗಾಗಿ, ಮನೋರಂಜನೆಗಾಗಿ ಕೋಟ್ಯಂತರ ರೂಪಾಯಿಗಳನ್ನು ಒಂದೇ ಏಟಿಗೆ ಸುರಿಯುವ ಸರಕಾರ, ವೈಜ್ಞಾನಿಕ ಸಂಶೋಧನೆಗೆ ಕೊಡುವ ಪ್ರೋತ್ಸಾಹ ಅತ್ಯಲ್ಪ. "ಅಲ್ಲಾಹನು ನಿಮಗೆ ಸುಮಾರು 100 ಬಿಲಿಯನ್ ಡಾಲರುಗಳಷ್ಟು ಸಿರಿ-ಸಂಪತ್ತನ್ನು ದಯಪಾಲಿಸಿದ್ದಾನೆ. ಅದರಲ್ಲಿ ಶೇಕಡಾ ಹತ್ತರಷ್ಟನ್ನಾದರೂ ಸಂಶೋಧನೆಗೆ ವೆಚ್ಚ ಮಾಡದಿದ್ದಲ್ಲಿ ಅವನು ನಿಮ್ಮನ್ನು ಕ್ಷಮಿಸಲಾರ," ಎಂಬ ಸಲಾಮರ ಮಾತು ಪ್ರಪಂಚದ ಎಲ್ಲ ಸರಕಾರಗಳಿಗೆ ನೀಡಿದ ಸರ್ವಕಾಲಿಕ ಘನ ನುಡಿ, ವಿಜ್ಞಾನದ ಮೇಲೆ ಸಲಾಮರಿಗಿರುವ ಅಪಾರ ಆಸಕ್ತಿ, ಅಭಿಮಾನಗಳಿಗೆ ಸಾಕ್ಷಿ.

ವೈಜ್ಞಾನಿಕ ಸಂಶೋಧನೆಗಳನ್ನು ಮಾಡುವುದಕ್ಕೆ ಪ್ರೋತ್ಸಾಹ ಸಿಗದ ಯುವ ವಿಜ್ಞಾನಿಗಳನ್ನು ಹುರಿದುಂಬಿಸಲು, ಪೌರಸ್ತ್ಯ ಮತ್ತು ಪಾಶ್ಚಾತ್ಯ ವಿಜ್ಞಾನಿಗಳನ್ನು

ಒಗ್ಗೂಡಿಸಲು ಒಂದು ಸಂಸ್ಥೆಯನ್ನು ತೆರೆಯುವ ಹಂಬಲ ಹಿಂದಿನಿಂದಲೂ ಸಲಾಮರಿಗಿತ್ತು. ಪ್ರಾರಂಭದಲ್ಲಿ ಈ ಸಂಸ್ಥೆಯನ್ನು ಭಾರತ ಇಲ್ಲವೆ ಪಾಕಿಸ್ತಾನದಲ್ಲಿ ಸ್ಥಾಪಿಸುವ ಯೋಜನೆ ಹಾಕಿದ್ದರೂ, ಸರಿಯಾದ ಸವಲತ್ತುಗಳಿಲ್ಲದೇ ಇದ್ದಾಗ, ಇಟಲಿ ಮುಂದೆ ಬಂದು ತಮ್ಮಲ್ಲಿ ಸ್ಥಾಪಿಸಲು ಕೋರಿದಾಗ, ಪ್ರೋತ್ಸಾಹಿತರಾದ ಸಲಾಮ್ 1964ರಲ್ಲಿ ತಾತ್ವಿಕ ಭೌತಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯನ್ನು ಟ್ರೈಯೆಸ್ಟೆ ಎಂಬಲ್ಲಿ ಸ್ಥಾಪಿಸಿದರು. ತಾಯಿ ಮಗುವನ್ನು ಸಾಕುವಂತೆ ಸಲಾಮರು ತಮ್ಮ ನೆಚ್ಚಿನ ಸಂಸ್ಥೆಯ ಅಭಿವೃದ್ಧಿಗೆ ಹಗಲಿರುಳೆನ್ನದೆ, ಮಳೆ ಬಿಸಿಲೆನ್ನದೆ, ದುಡಿಯುತ್ತಿದ್ದಾರೆ. ಸಂಸ್ಥೆಯ ನಿರ್ದೇಶಕರಾಗಿ ಇವರು ಅಪಾರ ಶ್ರಮವಹಿಸಿ ದುಡಿದುದರ ಫಲವಾಗಿ ಇಂದು ಈ ಸಂಸ್ಥೆಯ 92 ಸದಸ್ಯ ರಾಷ್ಟ್ರಗಳಲ್ಲಿ 60ಕ್ಕೂ ಹೆಚ್ಚು ಹಿಂದುಳಿದ ರಾಷ್ಟ್ರಗಳು ಸಂಸ್ಥೆಯ ಅಭಿವೃದ್ಧಿಪರ ರಾಷ್ಟ್ರಗಳ ಪ್ರತಿಭಾವಂತ ವಿಜ್ಞಾನಿಗಳನ್ನು ತರಬೇತು ಮಾಡಿ ಹೊಸ ಹೊಸ ಸಂಶೋಧನೆಗಳನ್ನು ಸ್ವತಂತ್ರವಾದ ಅವರವರ ದೇಶದಲ್ಲಿ ಕೈಗೊಳ್ಳುವಂತೆ ಪೂರ್ಣ ಸಹಕಾರ, ಪ್ರೋತ್ಸಾಹ ನೀಡುತ್ತಿದೆ. "ನಮ್ಮ ಸಂಸ್ಥೆಯಂಥಹ ಕೆಲವು ಸಂಸ್ಥೆಗಳಾದರೂ ಪ್ರತಿಭಾ ಪಲಾಯನವನ್ನು ತಡೆಗಟ್ಟಬಹುದು: ನಾವು ಅಭಿವೃದ್ಧಿಪರ ರಾಷ್ಟ್ರಗಳಿಂದ ಸಾಮರ್ಥ್ಯವುಳ್ಳ ಬುದ್ಧಿವಂತ ಯುವ ವಿಜ್ಞಾನಿಗಳನ್ನು ಕರೆಸಿ ಅವರ ಹತ್ತಿರ ಮೂರು ತಿಂಗಳ ಕಾಲ ತರಬೇತು ಕೊಡುತ್ತೇವೆ. ಅವರ ಎಲ್ಲಾ ಖರ್ಚುಗಳನ್ನು ನಾವೇ ನಿರ್ವಹಿಸುತ್ತೇವೆ. ಅವರು ಪ್ರಪಂಚದ ಪ್ರಮುಖ ಭೌತಶಾಸ್ತ್ರಜ್ಞರನ್ನು ಸಂದರ್ಶಿಸಿ ಹೊಸ ಭಾವನೆಗಳನ್ನು ಹೊತ್ತು ಹಿಂದಿರುಗಬಹುದು, ಮತ್ತು ಬೆಳೆಯುತ್ತಿರುವ ಸಂಶೋಧನೆಯೊಡನೆ ಸಂಪರ್ಕ ವಿಟ್ಟು ಸಂಶೋಧನೆ ಮುಂದುವರಿಸಬಹುದು. ನಮ್ಮ ಸಂಸ್ಥೆ ಸ್ಥಾಪಿಸಲ್ಪಟ್ಟು 15 ವರ್ಷಗಳಿಂದ ಯಾವನೆ ಒಬ್ಬ ಸಂಸ್ಥೆಯ ಸದಸ್ಯ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಪಲಾಯನ ಮಾಡಿಲ್ಲ"ಎಂದು ಸಲಾಮರು ಹೆಮ್ಮೆಯಿಂದ ಹೇಳುತ್ತಾರೆ.

ನೋಬೆಲ್ ಪ್ರಶಸ್ತಿಯಿಂದ ಸಿಕ್ಕ ಎಲ್ಲ 60 ಸಾವಿರ ಡಾಲರ್ (ಸುಮಾರು ಒಂದು ಲಕ್ಷ ಆರವತ್ತು ಸಾವಿರ ರೂಪಾಯಿ) ಹಣವನ್ನು ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ಕೊಡುಗೆಯಾಗಿ ನೀಡಿದರು. ತಮ್ಮ ದೈನಂದಿನ ಜೀವನದ ಆಡಂಬರಕ್ಕೆಂದು ಈ ಹಣವನ್ನು ಪೋಲು ಮಾಡದೆ, ವಿಜ್ಞಾನದ ಅಭಿವೃದ್ಧಿಗಾಗಿ, ಹಿಂದುಳಿದ ರಾಷ್ಟ್ರಗಳ ಪ್ರಗತಿಗಾಗಿ ನೀಡಿದ್ದು ಅವರ ತ್ಯಾಗದ ಮನೋಭಾವನೆಗೆ, ವಿಜ್ಞಾನದ ಮೇಲಿನ ಅಪೂರ್ವ ಪ್ರೇಮಕ್ಕೆ ನಿದರ್ಶನ.


ಸಲಾಮರ ವ್ಯಕ್ತಿತ್ವ ವರ್ಣಮಯ. ವೈಜ್ಞಾನಿಕ ಪರಿಕಲ್ಪನೆಗಳಿಗೆ ನವೀನ ಸ್ವರೂಪ ನೀಡಿರುವ ಇವರು ವಿಶ್ವ ಶಾಂತಿಗಾಗಿ ಶ್ರಮಿಸುತ್ತಿರುವುದರಿಂದ, ಇವರ ಬಾಳು ಎಲ್ಲ ರೀತಿಯಲ್ಲೂ ಅನುಕರಣೀಯ. ಇವರು ನಡೆದಂತೆ ನುಡಿಯುವವರು, ನುಡಿದಂತೆ ನಡೆಯುವವರು, ತತ್ವ ಶಾಸ್ತ್ರ ಪಾರಂಗತರೊಬ್ಬರ ಮಾತಿನಂತಿರುವ ಇವರ ಒಂದೊಂದು ನುಡಿಯೂ ಮಾನವನ ಜೀವನಕ್ಕೆ ದಾರಿ ದೀಪ.

(ಆಧಾರ: ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ)

# ಐನ್‌ಸ್ಟೈನರನ್ನು ಚಕಿತಗೊಳಿಸಿದ ವಿಜ್ಞಾನಿ

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಪೂರ್ತಿಗೊಳಿಸಿ ಪದವಿ ಗಳಿಸಲು ಆರು ವರ್ಷ ಕಲಿಯುವ ಬದಲು ಕೇವಲ ಮೂರು ವರ್ಷಗಳಲ್ಲಿ ಅದನ್ನು ಪೂರ್ಣಗೊಳಿಸಿದ ಪ್ರೊಫೆಸರ್ ಅಬ್ದುಸ್ಸಲಾಂ ಎಂಬ ಮೇಧಾವಿಯನ್ನು ಹಲವರು ಆಶ್ಚರ್ಯದಿಂದ ವೀಕ್ಷಿಸುತ್ತಿದ್ದರು. ಅವರ ಪಿ. ಎಚ್. ಡಿ. ಪದವಿ ಸಹ ಲೋಕವನ್ನು ವಿಸ್ಮಯಗೊಳಿಸದಿರಲಿಲ್ಲ. ಎರಡು ವರ್ಷಗಳಲ್ಲಿ ಪೂರ್ಣಗೊಳಿಸಬೇಕಾದ ಆ ಕೋರ್ಸನ್ನು ಅವರು ಒಂದೇ ವರ್ಷದಲ್ಲಿ ಪೂರ್ತಿಗೊಳಿಸಿ ತೀಸಿಸ್ ಸಮರ್ಪಿಸಿದರು. ಆದರೆ ಅಗಾಧವಾದ ವಿದ್ವತ್ತಿನಿಂದ ಕೂಡಿದ ಅವರ ಪ್ರಬಂಧವನ್ನು ಗ್ರಹಿಸಲಿಕ್ಕೆ ಪರೀಕ್ಷಕರಿಗೆ ಸಾಧ್ಯವಾಗಲಿಲ್ಲ. ಅವರು ಮೂಕವಿಸ್ಮಿತರಾದರು. ಅದರ ಮೌಲ್ಯಮಾಪನ ಮಾಡಲು ತಾವು ಅಶಕ್ತರೆಂದು ಸ್ವಯಂ ತಿಳಿದು ಅವರು ಕೊನೆಗೆ ಪ್ರಸಿದ್ಧ ವಿಜ್ಞಾನಿಯಾದ ಆಲ್ಬರ್ಟ್ ಐನ್‌ಸ್ಟೈನರನ್ನು ಸಮೀಪಿಸಿದರು. ಅವರು ಅಮೇರಿಕದ ಪ್ರಿನ್ಸ್‌ಟನ್‌ನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಡ್ವಾನ್ಸ್‌ಡ್ ಸ್ಟಡೀಸ್ ಇನ್ ಸೈಯನ್ಸ್ ಎಂಬ ಸಂಸ್ಥೆಯ ಮುಖ್ಯಸ್ಥರಾಗಿದ್ದರು.

ಅಂದು ಐನ್‌ಸ್ಟೈನ್ ಮತ್ತು ಸಂಗಡಿಗರು ಇದೇ ವಿಷಯದ ಕುರಿತು ಸಂಶೋಧನೆ ನಡೆಸಿಕೊಂಡಿದ್ದರೂ ಸಮಸ್ಯೆ ಬಗೆಹರಿಯದೆ ತೊಂದರೆ ಪಡುವ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಈ ಪ್ರಬಂಧ ಬಂತು. ಅವರಿಗೆ ಉಂಟಾದ ಸಂತೋಷ ಅಷ್ಟಿಷ್ಟಲ್ಲ. ಆಧುನಿಕ ಕಾಲದ ಪ್ರಖ್ಯಾತ ವಿಜ್ಞಾನಿಯಾದ ಐನ್‌ಸ್ಟೈನ್, ವಿಶ್ವವಿದ್ಯಾಲಯದ ಸಂಬಂಧಿತ ಪ್ರೊಫೆಸರರೊಡನೆ ಅಬ್ದುಸ್ಸಲಾಮರ ಪ್ರಬಂಧದ ಕುರಿತು ಸಮಾಲೋಚನೆ ನಡೆಸಿದರು. ನಂತರ ಆ ಪ್ರೊಫೆಸರ್ ಎಡಿನ್‌ಬರೋ ವಿಶ್ವ ವಿದ್ಯಾಲಯಕ್ಕೆ ಬಂದಿದ್ದಾಗ ಅಬ್ದುಸ್ಸಲಾಮರನ್ನು ಕಂಡು ಅವರಿಂದ ಒಂದು ಭಾಷಣವನ್ನು ಶ್ರವಿಸಿದರು. ಪ್ರಬಂಧದ ವಿಷಯವನ್ನು ನೇರವಾಗಿ ಅಬ್ದುಸ್ಸಲಾಮರಿಂದ ತಿಳಿದುಕೊಂಡ ನಂತರ ಪ್ರೊಫೆಸರರು ಐನ್‌ಸ್ಟೈನರಿಗೆ ವರದಿ ಸಲ್ಲಿಸಿದರು. ಈ ಪ್ರಬಂಧ ಅಸಾಧಾರಣ ಬುದ್ಧಿಸಾಮರ್ಥ್ಯವುಳ್ಳ ವ್ಯಕ್ತಿಯಿಂದ ಬರೆಯಲ್ಪಟ್ಟಿದೆಯೆಂದು ಮನಗಂಡ ಐನ್‌ಸ್ಟೈನ್ ತನ್ನ ಸ್ವಂತ ಖರ್ಚಿನಲ್ಲಿ ಪ್ರೊ. ಅಬ್ದುಸ್ಸಲಾಮರನ್ನು ಅಮೇರಿಕಕ್ಕೆ ಕರೆದು ಒಂದು ವರ್ಷ ಕಾಲ ತನ್ನ ಜೊತೆಯಲ್ಲಿ ಉಳಕೊಳ್ಳುವರೆ ಏರ್ಪಾಡು ಮಾಡಿದರು.




## ರಬ್ವಾದಲ್ಲಿರುವ ಅಹ್ಮದಿಯಾ ಜುಮಾ ಮಸೀದಿ
## ಮಸ್ಜಿದ್ ಅಖ್ಸಾ

70,000 ಚದರ ಅಡಿ ವಿಸ್ತೀರ್ಣವುಳ್ಳ ಈ ಮಸೀದಿಯಲ್ಲಿ 15,000 ಮಂದಿ ಏಕ ಕಾಲದಲ್ಲಿ ಪ್ರಾರ್ಥನೆ ಸಲ್ಲಿಸಲು ಸ್ಥಳಾವಕಾಶವಿದೆ. ಸ್ತಂಭಗಳ ಆಧಾರವಿಲ್ಲದೆ ನಿರ್ಮಿಸಲಾದ ಪ್ರಧಾನ ಪ್ರಾರ್ಥನಾಂಗಣದಲ್ಲಿ ಏನೂ ತಡೆಯಿಲ್ಲದೆ ಎಲ್ಲರಿಗೂ ಇಮಾಮನ್ನು ಕಾಣಬಹುದಾಗಿದೆ. ಈ ಮಸೀದಿಯನ್ನು, ಹೆಸರು ಬಹಿರಂಗಪಡಿಸಲು ಇಚ್ಛಿಸದ ಓರ್ವ ಅಹ್ಮದಿ ದಾನಿ 15 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿದರು.

Regd. with the Registrar of Newspapers for India. Regd. No. R. N. 27354/75
**YUGARASHMI Kannada Quarterly, August 1982 / Zuhoor 1361**

## English Translation of the HOLY QUARAN with Arabic Text & Extensive Index




**Price :**
**Rs. 15-00**

**Postal Charge**
**Extra**

### AHMADIYYA ENGLISH LITERATURE

1 INTRODUCTION TO THE STUDY OF HOLY QURA'N 16-00
by Hazrath Mirza Bashiruddin Muhmud Ahmad

2 THE TEACHINGS OF ISLAM 6-00
by Hazrath Mirza Ghulam Ahmad

3 JESUS IN INDIA 2-25
by Hazrath Mirza Ghulam Ahmad

4 WHERE DID JESUS DIE ? 2-25
by J. D. Shams, Ex-Imam, London Mosque

5 THE TOMB OF JESUS 1-00
by Soofi Mutiurrhman Bengali, M A.

**Write to: NAZIR DAWAT-O-TABLIGH, Qadian [Punjab]-143 561**

Edited and Published by Muhammad Yusuf on behalf of Jamath Ahamadiyya
at 10-23/1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.